|| ಓಂ ||

ಧರ್ಮಶಾಸ್ತ್ರ, ಸಸ್ವರಮಂತ್ರ, ವಿನಿಯೋಗವಾಕ್ಯ, ಯಥಾಶ್ರುತ-ತ್ರಿಕಾಲಸಂಧ್ಯಾ, ಸಮಿದಾಧಾನ, ಸೂರ್ಯನಮಸ್ಕಾರ, ಮಂತ್ರಾರ್ಥ, ಪುರುಷಸೂಕ್ತವಿಧಾನ ದೇವತಾರ್ಚನ, ಬ್ರಹ್ಮಯಜ್ಞ, ದರ್ಶತರ್ಪಣ, ಶೌಚಾನುಷ್ಠಾನಕ್ರಮ ಪ್ರಮಾಣವಚನೈಶ್ಚ ಸಹಿತ

ಸಂಕ್ಷೇಪ ಸಂಧ್ಯಾವಂದನಾದಿ ಪ್ರಯೋಗ

ಮೈಸೂರು ಸಂಸ್ಥಾನ ಮಹಾವಿದ್ವದ್ಭಿಃ, ಧರ್ಮಾಧಿಕಾರಿ, ವೇದರತ್ನಂ
ಕೆ. ವೆಂಕಟರಾಮಾವಧಾನಿಭಿರ್ವಿರಚಿತಃ
ಯಥಾಶಕ್ತಿ ಸಂಶೋಧಿತಶ್ಚ

ಪ್ರಕಾಶಕರು :
ಕೆ. ನಾರಾಯಣಾವಧಾನಿಗಳು
ರಿ॥ ಕೃಷ್ಣಯಜುರ್ವೇದ ಸೀನಿಯರ್ ಪ್ರೊಫೆಸರ್,
ಸಂಸ್ಕೃತ ಮಹಾಪಾಠಶಾಲಾ, ಮೈಸೂರು.

ದೊರೆಯುವ ಸ್ಥಳ :
ವೇದರತ್ನಂ ಕೆ. ನಾರಾಯಣಾವಧಾನಿಗಳು
557, ಚೆಲುವಾಂಬ ಅಗ್ರಹಾರ, ಮೈಸೂರು-1.

ರಿಜಿಸ್ಟರ್ಡ್ ಕಾಪಿರೈಟ್

ಬೆಲೆ: 5-00

೧೯೮೦

ಮುದ್ರಕರು :
ಶ್ರೀ ವಿನಾಯಕ ಪ್ರಿಂಟಿಂಗ್ ವರ್ಕ್ಸ್
೨ನೇ ರಾಮಚಂದ್ರ ಅಗ್ರಹಾರ, ಮೈಸೂರು-೪.

|| ಓಂ ||

ಧರ್ಮಶಾಸ್ತ್ರ, ಸಸ್ವರಮಂತ್ರ, ವಿನಿಯೋಗವಾಕ್ಯ, ಯಥಾಶ್ರುತ-ತ್ರಿಕಾಲಸಂಧ್ಯಾ, ಸಮಿದಾಧಾನ, ಸೂರ್ಯನಮಸ್ಕಾರ, ಮಂತ್ರಾರ್ಥ, ಪುರುಷಸೂಕ್ತವಿಧಾನ ದೇವತಾರ್ಚನ, ಬ್ರಹ್ಮಯಜ್ಞ, ದರ್ಶತರ್ಪಣ, ಶೌಚಾನುಷ್ಠಾನಕ್ರಮ ಪ್ರಮಾಣವಚನೈಶ್ಚ ಸಹಿತ

ಸಂಕ್ಷೇಪ ಸಂಧ್ಯಾವಂದನಾದಿ ಪ್ರಯೋಗ

ಮೈಸೂರು ಸಂಸ್ಥಾನ ಮಹಾವಿದ್ವದ್ಭಿಃ, ಧರ್ಮಾಧಿಕಾರಿ, ವೇದರತ್ನಂ
ಕ ವೆಂಕಟರಾಮಾವಧಾನಿಭಿರ್ವಿರಚಿತಃ
ಯಥಾಶಕ್ತಿ ಸಂಶೋಧಿತಶ್ಚ

ಪ್ರಕಾಶಕರು :
ಕೆ. ನಾರಾಯಣಾವಧಾನಿಗಳು
ರಿ|| ಕೃಷ್ಣಯಜುರ್ವೇದ ಸೀನಿಯರ್ ಪ್ರೊಫೆಸರ್,
ಸಂಸ್ಕೃತ ಮಹಾಪಾಠಶಾಲಾ, ಮೈಸೂರು.

ದೊರೆಯುವ ಸ್ಥಳ :
ವೇದರತ್ನಂ ಕೆ. ನಾರಾಯಣಾವಧಾನಿಗಳು
557, ಚೆಲುವಾಂಬ ಅಗ್ರಹಾರ, ಮೈಸೂರು-1.

ಮುದ್ರಕರು :
ಶ್ರೀ ವಿನಾಯಕ ಪ್ರಿಂಟಿಂಗ್ ವರ್ಕ್ಸ
೨ನೇ ರಾಮಚಂದ್ರ ಅಗ್ರಹಾರ, ಮೈಸೂರು-೪.

ಸೂ ಚ ನೆ

ಪ್ರಕೃತ ಈಗಿನ ಪಂಡಿತೋತ್ತಮರಲ್ಲಿ ವಿಜ್ಞಾಪನೆ:

ಬ್ರಾಹ್ಮಣಶರೀರಕ್ಕೆ ನಡೆಯಬೇಕಾದ ಶಾಸ್ತ್ರೋಕ್ತವಾದ ಗರ್ಭಾಧಾನ ಪುಂಸವನಾದಿ ಸಂಸ್ಕಾರಗಳು ಶಾಸ್ತ್ರವಿಚಾರವಿಲ್ಲದೆ ಕಮ್ಮಿಯಾಗುತ್ತಾ ಇದೆ. ಮತ್ತು ಮುಖ್ಯ ಕಾಲದಲ್ಲಿ ಉಪನಯನವನ್ನೇ ಮಾಡಕೊಳ್ಳದವರಿಗೆ ವೇದಾಧ್ಯಯನ ಮತ್ತು ಶಾಸ್ತ್ರಾಧ್ಯಯನಗಳಲ್ಲಿ ಅಭಿಮಾನ ಹುಟ್ಟದೇನೇ ಸಂಧ್ಯಾದಿ ನಿತ್ಯ ಕರ್ಮಗಳಲ್ಲಿ ಅವಶ್ಯಕತಾಜ್ಞಾನವೇ ಬಾರದೇ ಬ್ರಾಹ್ಮಣ್ಯವು ಶಿಲವಾಗುತ್ತಾ ಇದೆ. ಅಲ್ಲದೇ, ಸಂಧ್ಯಾವಂದನ ಕರ್ಮವು ಸೂತ್ರದಲ್ಲಿ ಉಕ್ತವಾಗಿಲ್ಲ. ಧರ್ಮಶಾಸ್ತ್ರಗಳಲ್ಲೂ ಒಂದೇ ರೀತಿಯಾಗಿ ಸ್ಪಷ್ಟಪಟ್ಟಿಲ್ಲಕಾರಣ ಅನೇಕ ಮಹನೀಯರು ತಮ್ಮಗಳಿಗೆ ಇಷ್ಟಬಂದಂತೆ ವೈದಿಕ ಮತ್ತು ತಾಂತ್ರಿಕ ಭಾಗಗಳಲ್ಲಿ ಭೇದವಿಡದೆ ಶ್ರದ್ಧಾತಿಶಯದಿಂದ ಸಂಧ್ಯಾನುಷ್ಠಾನಕ್ರಮವನ್ನು ತಕ್ಕಮಟ್ಟಿಗೆ ವಿಸ್ತಾರ ಮಾಡಿಕೊಂಡಿರುವದ್ದರಿಂದ ಈಗಿನವರಿಗೆ ಅಷ್ಟು ಕಾಲವನ್ನು ಉಪಯೋಗಿಸಲು ಅವಕಾಶವಿಲ್ಲದ್ದಕ್ಕಾಗಿ ಸ್ವಲ್ಪ ಕಾಲದಲ್ಲಿ ಸಂಧ್ಯಾವಂದನ ಮಾಡಿ ಕೃತಾರ್ಥರಾಗಬೇಕೆಂಬ ಅಭಿಪ್ರಾಯವನ್ನು ಕೆಲವರು ನನ್ನಲ್ಲಿ ಸೂಚಿಸಿದರು. ನಾನು ಧರ್ಮಶಾಸ್ತ್ರಗಳನ್ನು ನೋಡಿದ್ದರಲ್ಲಿ ಈಗ ನಾನು ಬರೆದು ಪ್ರಕಾಶಪಡಿಸಿರುವ ಈ ಸಧರ್ಮಶಾಸ್ತ್ರ ಸಂಧ್ಯಾದಿ ನಿತ್ಯಕರ್ಮ ಗ್ರಂಥದಂತೆ ಆಚಮನ ಮುಂತಾದ ಶೌಚವಿಧಿ, ಸ್ನಾನವಿಧಿ, ಸಂಧ್ಯಾವಂದನಾದ್ಯಾವಶ್ಯಕವಾದ ನಿತ್ಯ ಕರ್ಮಗಳನ್ನು ಇಷ್ಟು ಮಟ್ಟಿಗೆ ಮಾಡಿದರೆ ಸ್ವಲ್ಪಕಾಲದಲ್ಲೇ ಅಗುವುದಲ್ಲದೆ ಆಪಸ್ತಂಬ ಬೋಧಾಯನ ಸೂತ್ರರಿಗೂ ಸಹ ಅಶಾಸ್ತ್ರೀಯವಾಗದೆ ಸಂಪೂರ್ಣ ಫಲ ಉಂಟಾಗುವುದಲ್ಲದೆ ಬ್ರಾಹ್ಮಣ್ಯವನ್ನು ಕಾಪಾಡಿಕೊಂಡು ಇತರವಾದ ನಿತ್ಯನೈಮಿತ್ತಿಕ ಕಾಮ್ಯಕರ್ಮಗಳನ್ನೂ ಮಾಡುವುದಕ್ಕೆ ಅರ್ಹರಾಗಿ ಬೇಕಾದ ಕರ್ಮಗಳನ್ನೆಲ್ಲಾ ಮಾಡಿ, ಮಾಡಿಸಿಯೂ ಕೂಡ ಐಹಿಕಾಮುಷ್ಮಿಕ ಸುಖಗಳನ್ನನುಭವಿಸಿ ಉಪಶಾಂತರಾಗಿ ಜ್ಞಾನದ್ವಾರಾ ಮೋಕ್ಷ ಪದವಿಯನ್ನನುಭವಿಸಲೆಂದು ಭಗವಂತನನ್ನು ಪ್ರಾರ್ಥಿಸುತ್ತೇನೆ. ಮತ್ತು ಈ ಗ್ರಂಥರಚನೆಯಲ್ಲಿ ಉಂಟಾಗಬಹುದಾದ ಅನುಕ್ತದುರುಕ್ತಾದಿ ದೋಷಗಳನ್ನು ಕ್ಷಮಿಸಿ ಸದುಕ್ತಿಯನ್ನು ಮಾತ್ರ ಅಭಿಮಾನಿಸಬೇಕಾಗಿ ಕೋರುವ,

ಸದ್ವಿಧೇಯ,

ವೇದರತ್ನಂ. ವೆಂಕಟರಾಮಾವಧಾನೀ

: ವಿಷಯಸೂಚೀ :

	ಪುಟ
ಶೌಚಾನುಷ್ಠಾನ ಕ್ರಮ	೧
ಪ್ರಾತಸ್ಸ್ನಾನಕ್ರಮ	೨
ಮಾಧ್ಯಾಹ್ನಿಕ ಸ್ನಾನ	೬
ಉಷ್ಣೋದಕ ಸ್ನಾನ	೬
ಕ್ಷೌರಾದಿ ನೈಮಿತ್ತಿಕ ಸ್ನಾನ	೬
ಗೌಣಸ್ನಾನ ವಿಧಿ	೬
ಭಸ್ಮಧಾರಣ ವಿಧಿ	೭
ಯಜ್ಞೋಪವೀತಧಾರಣ ಕ್ರಮ	೭
ಸಂಧ್ಯಾಕಾಲ ನಿರ್ಣಯ	೯
ಅರ್ಘ್ಯಪ್ರದಾನದಿಂದ ರಾಕ್ಷಸರ ನಾಶ	೧೧
ಬ್ರಾಹ್ಮಣನಿಗೆ ಸಂಧ್ಯಾಕರ್ಮ ಮುಖ್ಯ	೧೨
ಆಶೌಚದಲ್ಲೂ ಸಂಧ್ಯಾಕರ್ಮ ಉಂಟು	೧೩
ಶಕ್ತಸ್ಯ ಮುಖ್ಯ ಕಾಲಾತಿಕ್ರಮ ಪ್ರಾಯಶ್ಚಿತ್ತ	೧೩
ಉಪವಾಸ ವಿಶೇಷ	೧೪
ಸಂಧ್ಯಾಕರ್ಮ ಬಿಟ್ಟರೆ ಪ್ರಾಯಶ್ಚಿತ್ತ	೧೫
ಸಂಧ್ಯಾವಂದನವನ್ನು ಬಿಡದೇ ಮಾಡಿದರೆ ಆಯುರ್ವೃದ್ಧಿ	೧೫
ಆಯುರ್ನಾಶ ನಿಮಿತ್ತಗಳು	೧೫
ಅತ್ಯಂತಾಶಕ್ತರಿಗೆ ಪ್ರಾಣಾಯಾಮೋಪಾಯ	೧೬
ಸಂಧ್ಯಾಕರ್ಮ ಬಿಟ್ಟವನು ಶೂದ್ರ, ನಿತ್ಯಾಶೌಚಿ, ಅನ್ಯಕರ್ಮಾನರ್ಹ	೧೬
ಅಂತ್ಯಂತಾಶಕ್ತನಿಗೆ ಸಂಧ್ಯಾನುಷ್ಠಾನ ಕ್ರಮ	೧೭
ಆಚಮನ ವಿಧಿ	೧೭
ವಾರಿಣಾಪುಂಡ್ರಧಾರಣ	೧೮

	ಪುಟ
ಪ್ರೋಕ್ಷಣ ಮಂತ್ರ	೧೯
ಅರ್ಘ್ಯ ಪ್ರದಕ್ಷಿಣಗಳು	೧೯
ಗಾಯತ್ರೀ ಜಪ ವಿಷಯ	೧೯
ಗಾಯತ್ರೀಜಪ ವಿಧಿ	೨೦
ವಾಚಿಕಾದಿ ಫಲ	೨೧
ಜಪಸಂಖ್ಯಾವಿಧಿ	೨೨
ತ್ರಿಷ್ಟುಗ್ಗಾಯತ್ರೀ ವಿಧಿ	೨೩
ಗಾಯತ್ರೀ ಜಪ ಕ್ರಮ	೨೪
ಗಾಯತ್ರೀಜಪ ಪ್ರಕಾರ	೨೪
ಸಂಧ್ಯೋಪಸ್ಥಾನ ವಿಧಿ	೨೫
ಅಭಿವಾದನ ಕ್ರಮ	೨೬
ಜಲೇತ್ರಿಷ್ಟುಗ್ ತರ್ಪಣಾದಿ	೨೭
ಕೃಚ್ಛ್ರಾದಿ ಪ್ರತಿನಿಧಿ ವ್ಯವಸ್ಥಾ	೨೭
ಪ್ರಾತಸ್ಸಂಧ್ಯಾಪ್ರಯೋಗ	೨೮
ಜಪವಿಧಿ	೩೪
ನ್ಯಾಸಾದೀನಾಂ ಪರಿಸಂಖ್ಯಾ	೩೫
ಜಪೋಪಸ್ಥಾನಾದಿ ಮಂತ್ರ	೩೭
ಮಾಧ್ಯಾಹ್ನಿಕ ಕ್ರಮ	೪೧
ಸಾಯಂಸಂಧ್ಯಾಕ್ರಮ	೪೪
ಸಮಿದಾಧಾನ ಪ್ರಯೋಗ	೪೬
ಸೂರ್ಯನಮಸ್ಕಾರ ಪ್ರಯೋಗ	೪೯
ಪ್ರಾತಸ್ಸಂಧ್ಯಾ ಮಂತ್ರಾರ್ಥ	೫೧
ಮಾಧ್ಯಾಹ್ನಿಕ ಮಂತ್ರಾರ್ಥ	೫೬
ಸಾಯಂಸಂಧ್ಯಾ ಮಂತ್ರಾರ್ಥ	೫೭
ಸಮಿದಾಧಾನ ಮಂತ್ರಾರ್ಥ	೫೮
ಸೂರ್ಯನಮಸ್ಕಾರ ಮಂತ್ರಾರ್ಥ	೬೦

	ಪುಟ
ಬ್ರಹ್ಮಯಜ್ಞ ಪ್ರಯೋಗ	೬೧
ಬ್ರಹ್ಮಯಜ್ಞ ತರ್ಪಣ	೬೪
ನಿತ್ಯದೇವತಾರ್ಚನ ಕರ್ಮಪರಿಭಾಷಾ	೬೭
ಅಷ್ಟಾಂಗ, ಪಂಚಾಂಗ, ಪ್ರಣಾಮವಿಧಿಃ	೭೦
ತೀರ್ಥಪ್ರಾಶನ ವಿಧಿಃ	೭೧
ಸ್ತ್ರೀ ಶೂದ್ರ ಪೂಜಿತ ಲಿಂಗ, ವಿಷ್ಣುವಿಗೆ ನಮಸ್ಕಾರ ನಿಷೇಧ	೭೨
ನಿತ್ಯದೇವತಾರ್ಚನ ಪ್ರಯೋಗ	೭೩
ನಿತ್ಯದೇವತಾರ್ಚನ ಕ್ರಮ	೭೪
ದ್ವಾರಪಾಲಕ ಪೂಜಾದಿ	೭೪
ಅಭಿಷೇಕ, ವಸ್ತ್ರಾದಿ	೭೮
ಪ್ರಾರ್ಥನಾದಿ	೮೨
ಬಲಿಹರಣ ತೀರ್ಥಪ್ರಾಶನ	೮೩
ದರ್ಶಸಂಕ್ರಾಂತಿ ತರ್ಪಣ	೮೯
ಆಂಧ್ರ ಸಂಪ್ರದಾಯ ತರ್ಪಣಕ್ರಮ	೯೦

ವಿಶೇಷ ಸೂಚನೆ :

ಸಂಕ್ಷೇಪ ಸಂಧ್ಯಾವಂದನಾದಿ ಪ್ರಯೋಗವನ್ನು ನೋಡುವ ಮುನ್ನ ಶುದ್ಧಪಾಠಸೂಚಿಯನ್ನು ನೋಡಬೇಕಾಗಿ ಪ್ರಾರ್ಥನೆ.

ಪುಟ	ಪಂಕ್ತಿ	ಶುದ್ಧ	ಪುಟ	ಪಂಕ್ತಿ	ಶುದ್ಧ
7	16	ತ್ರಿಯಾಯುಷ್ಯೈಃ	66	4	ಪಿತೄಂ
27	1	ಕೃಚ್ಛ್ರಾದಿಪ್ರತಿನಿಧಿ	66	18	ಅರ್ಹನ್ತಿ
29	17	ಮಂತ್ರಾಂತ	67	7	ದೇವತಾ
30	20	ಸ್ತ್ರದವ	67	21	ದ್ವಾಧ್ಯಯೇ
31	6, 12	ಓಂಕಾರವಿಲ್ಲ	68	26	ರವೌ
31	9	ವಶ್ರಿ	76	14	ಹವಿಷಾ
31	17	ಆಪ	78	5	ಸಪ್ತಸ
32	18	ಬ್ರಹ್ಮ	79	14	ಪತ್ನಿಶ್ರಿಲ
35	3	ಛಂದಃ–ಸ	80	1	ದೀಪಂ
41	11	ಕರೋತವಾ ।	80	2	ಮಹಾಲಕ್ಷ್ಮಿ
42	15	ಸದ್ವೃತ	80	6	ಪಾದಾ
45	20	ದೆವ್ವಾಥಾ	80	10	ಶೂದ್ರೋ
49	23	ಗುರವೇ	80	17	ನುಕ್ತ್ವಾ
52	27	ದೇವನು	80	18	ಸ್ಸೂರ್ಯೋ
53	9	ಪಾಪ ।	80	19	ಪ್ರಾ
56	8	ಉಚ್ಛಿಷ್ಟವನ್ನು	82	11	ಘ್ಯ್ರಂ
56	15	ಸ್ಥಾನ	85	22	ಸ್ಸ್ವ
57	1	ಸಂಧ್ಯೋಪಸ್ಥಾನ	85	22	ಗಂ
57	4	ವ್ಯಾಪಿ	87	9	ಸ್ಥ
58	6	ಕಿತ			
58	21	ದಲ್ಲಿ			
65	22	ಪಿತೄಂ			
65	23	ಪಿತೄಂ			

ಮೈಸೂರು ಆಸ್ಥಾನ್ ಮಹಾ ವಿದ್ವಾನ್
ಧರ್ಮಾಧಿಕಾರಿ ವೇದರತ್ನಂ ವೆಂಕಟರಾಮಾವಧಾನಿಗಳು

ಸಂಕ್ಷೇಪ ಸಂಧ್ಯಾದಿಪ್ರಯೋಗ
ಶೌಚಾನುಷ್ಠಾನಕ್ರಮ

ಶೌಚವೆಂದರೆ ಶುದ್ಧಿಗೆ ಕಾರಣವಾದದ್ದೆಂದು ತಿಳಿಯತಕ್ಕದ್ದು ||

ಬ್ರಾಹ್ಮಣನು, ಬ್ರಾಹ್ಮಣಸ್ತ್ರೀಯು ಯಾವಾಗ ಮೂತ್ರ ನಿರಸನವನ್ನು ಮಾಡಬೇಕಾದರೂ. ಪುರುಷನಾದವನು ಉಪನಯನವಾದನಂತರ ಜನಿವಾರ ವನ್ನು ನಿವೀತಿ ಹಾಕಿ ಬಲದಕಿವಿಗೆ ಸುತ್ತಿ ತಲೆಗೆ ವಸ್ತ್ರವನ್ನು ಸುತ್ತಿಕೊಂಡು ಮೌನವಾಗಿ— ಬ್ರಾಹ್ಮಣಸ್ತ್ರೀಯೂ ಸಹಾ ವಿವಾಹಾನಂತರ ಮೌನವಾಗಿ ಮೂತ್ರೋತ್ಸರ್ಗಮಾಡಿ ಸ್ತ್ರೀಪುರುಷರು ಆ ಮೂತ್ರ ಸ್ಥಾನವನ್ನು ಮೂರಾವರ್ತಿ ಚೆನ್ನಾಗಿ ನೀರಿನಿಂದ ತೊಳೆಯಬೇಕು. ಸ್ತ್ರೀಪುರುಷರುಗಳಿಗೆ ಶಾಸ್ತ್ರದಂತೆ ಎಂಟು ವರ್ಷಕ್ಕೆ ಕ್ರಮವಾಗಿ ವಿವಾಹೋಪನಯನಗಳಾಗದಿದ್ದರೆ, ಎಂಟು ವರ್ಷದ ಮೇಲೆ ಇಲ್ಲಿ ಹೇಳಿರುವಂತೆ ಶೌಚಾಚಮನಗಳನ್ನು ಮಾಡಬೇಕು. ಅಂದರೆ ಕೈಕಾಲುಗಳನ್ನು ತೊಳೆದು ನಾಲ್ಕು ಅಥವಾ ಮೂರಾವರ್ತಿ ಬಾಯಿ ಮುಕ್ಕಳಿಸಿ ಎರಡು ಸಲ ಆಚಮನಮಾಡಿ ಶುದ್ಧರಾಗಬೇಕು. ಹೆಂಗಸರಿಗೆ ಆಚಮನ ಎಂದರೆ ಮೂರಾವರ್ತಿ ಜಲವನ್ನು ಕುಡಿದು ಕೈ ತೊಳೆಯುವುದು ಮಾತ್ರ. ಇವರುಗಳು ಮೂತ್ರಪುರೀಷೋತ್ಸರ್ಗ ಕಾಲಗಳಲ್ಲಿ ಶೌಚಾಚಮನ ಮಾಡುವ ವರೆವಿಗೂ ಮಾತನಾಡಬಾರದು. ಮಾತನಾಡಿದರೆ ಪುರುಷನು ಪುನಃ ಜನಿವಾರ ಹಾಕಿಕೊಳ್ಳಬೇಕು. ನೀರಿನ ಪಾತ್ರೆಯನ್ನು ಮೂತ್ರಪುರೀಷೋತ್ಸರ್ಗಕಾಲಗಳಲ್ಲಿ ಕೈಯಲ್ಲಿ ಹಿಡಿದಿರಬಾರದು. ಹಾಗೆ ಹಿಡಿದಿದ್ದರೆ ಆ ನೀರೂ ಸಹಾ ಮೂತ್ರಕ್ಕೆ ಸಮಾನವಾದದ್ದೆಂದು ತಿಳಿಯಬೇಕು. ಬಾಹ್ಯಕ್ಕೆ ಹೋದರೆ ಆ ಸ್ಥಳವನ್ನು ಮಣ್ಣು ನೀರಿನಿಂದ ಮೂರು ಸಲಕ್ಕೆ ಕಮ್ಮಿ ಇಲ್ಲದಂತೆ ದುರ್ಗಂಧ ನಿವೃತ್ತಿ ಯಾಯಿತೆಂದು ತಿಳಿಯುವವರೆವಿಗೂ ಒಳ್ಳೇ ಮಣ್ಣು ಶುದ್ಧವಾದ ನೀರುಗಳಿಂದ ಚೆನ್ನಾಗಿ ತೊಳೆಯಬೇಕು. ಅನಂತರ ಎರಡು ಕೈಗಳನ್ನು ಸೇರಿಸಿ ಪೂರ್ವದಂತೆ ಮೂರು ಸಲಕ್ಕೆ ಕಮ್ಮಿ ಇಲ್ಲದೆ ಮನಸ್ಸಿಗೆ ಶುದ್ಧಿಯಾಗುವವರೆವಿಗೂ ಮಣ್ಣು ನೀರುಗಳಿಂದ ತೊಳೆದು ಕಾಲುಗಳನ್ನು ಎಡಗೈಯಿಂದ ಮಣ್ಣು ನೀರು ಹಾಕಿ ತೊಳೆದು ಎಂಟು ಸಲ ಬಾಯಿಮುಕ್ಕಳಿಸಿ ಎರಡಾವರ್ತಿ ಆಚಮನವನ್ನು

ಶ್ಲೋಕ || ಏಹಿ ಸೂರ್ಯ ಸಹಸ್ರಾಂಶೋ ತೇಜೋರಾಶೇ ಜಗತ್ಪತೇ ಅನುಕಂಪಯಮಾಂ ಭಕ್ತ್ಯಾ ಗೃಹಾಣಾರ್ಘ್ಯಂ ನಮೋಸ್ತುತೆ || ಛಾಯಾ ಸಂಜ್ಞಾ ಸಮೇತ ಸೂರ್ಯನಾರಾಯಣಸ್ವಾಮಿನೇನಮಃ ಇದಮರ್ಘ್ಯಂ ಇ ಮರ್ಘ್ಯಂ ಸಮರ್ಪಯಾಮಿ ||

ಶ್ಲೋಕ || ನಮಃ ಕಮಲನಾಭಾಯ ನಮಸ್ತೇ ಜಲಶಾಯಿನೇ ನಮಸ್ತೇಸ್ತು ಹೃಷೀಕೇಶ ಗೃಹಾಣರ್ಘ್ಯಂ ನಮೋಸ್ತುತೇ || ಮಹಾವಿಷ್ಣವೆ ನಮಃ ಇದಮರ್ಘ್ಯಂ ಇದಮರ್ಘ್ಯಂ ಸಮರ್ಪಯಾಮಿ ||

ಶ್ಲೋಕ || ಬ್ರಹ್ಮಾಂಡೋದರ ತೀರ್ಥಾನಿ ಕರೈಃ ಸ್ಪೃಷ್ಟಾನಿತೇರವೇ ತೇನಸತ್ಯೇನ ಮೇದೇವ ತೀರ್ಥಂ ದೇಹಿದಿವಾಕರ || ಪ್ರಾರ್ಥನೆ.

ಶ್ಲೋಕ || ಯಸ್ಯಕೇಶೇಷು ಜೀಮೂತಾಃ ನದ್ಯಸ್ಸರ್ವಾಂಗ ಸಂಧಿಷು ಕುಕ್ಷೌಸಮುದ್ರಾಶ್ಚತ್ವಾರಃ ತಸ್ಮೈತೋಯಾತ್ಮನೇ ನಮಃ || ಈ ಶ್ಲೋ ಗಳನ್ನು ಹೇಳಿ ಪ್ರಾರ್ಥಿಸಿ ||

ವರುಣ ಸೂಕ್ತಗಳನ್ನು ಅಂದರೆ ಆಪೋಹಿಷ್ಠ–ಹಿರಣ್ಯಶೃಂಗಂ–ಉದ ತ್ತಮಂ ವರುಣ ತರತ್ಸ ಇತ್ಯಾದಿ ಸೂಕ್ತಗಳನ್ನು ಪಠನಮಾಡಿ, ನಾಭಿ ಪ್ರಮಾ ನೀರಿನಲ್ಲಿ ನಿಂತು, ನದಿಗಳಲ್ಲಿ ಪ್ರವಾಹಾಭಿಮುಖನಾಗಿ ತಟಾಕಾದಿಗಳ ಸೂರ್ಯಾಭಿಮುಖನಾಗಿ ಮೂರು ಸಲ ಅವಗಾಹನ ಸ್ನಾನವನ್ನು ಮಾಡಬೇಕು ಹೀಗೆ ಮಾಡಿದವನಿಗೆ ಕಾಯಿಕ ವಾಚಿಕ ಮಾನಸಿಕ ಪಾಪಗಳು ಹೋಗುವುದಲ್ಲ ಒಂದೊಂದು ಸ್ನಾನದಿಂದಲೂ ಕ್ರಮವಾಗಿ ಆಧ್ಯಾತ್ಮಿಕ ಆಧಿದೈವಿಕ ಆಧಿಭೌತಿ ತಾಪತ್ರಯಗಳೂ ಕೂಡ ನಿಶ್ಶೇಷವಾಗಿ ನಿವೃತ್ತಿಯಾಗುವುದು.

ಇದೂ ಅಲ್ಲದೆ ಎಲ್ಲಾ ಕರ್ಮಗಳಿಗೂ ಮೂಲಭೂತವಾದ ಸ್ನಾನಕಮ ವನ್ನು ಯಥಾವಿಧಿಯಾಗಿಮಾಡಿ ಸಂಧ್ಯಾದಿ ಕರ್ಮಗಳನ್ನು ಮಾಡಿದರೆ ಫ ವುಂಟು. ಇಲ್ಲವಾದರೆ ಶಾಸ್ತ್ರೀಯ ಫಲವು ಲಭಿಸಲಾರದು. ಈ ರೀತಿ ಮೂರ ಸಲ ಸ್ನಾನಮಾಡಿದಮೇಲೆ ಅಪೋಹಿಷ್ಠಾದಿ ಮಂತ್ರಗಳಿಂದ ತಲೆಗೆ ಪ್ರೋಕ್ಷಿ ಕೊಳ್ಳಬೇಕು. ಪುನಃ ಕಿವಿವರಿವಿಗೆ ಮುಳುಗಿ ಋತಂಚ ಸತ್ಯಂಚ ಎಂಬ ಮಂತ್ರ ಆರು ವಾಕ್ಯಗಳನ್ನು ಮನಸ್ಸಿನಿಂದ ಮೂರಾವರ್ತಿ ಹೇಳಿ ಅಘಮರ್ಷಣ ಸ್ನಾ

ವನ್ನು ಮಾಡಿ ಪಾಪವನ್ನು ಹೋಗಲಾಡಿಸಿಕೊಳ್ಳಬೇಕು. ಅನಂತರ ಆ ನೀರಿನಲ್ಲೇ ಪೂರ್ವಾಭಿಮುಖನಾಗಿ ನಿಂತು ಆಚಮನ ಪ್ರಾಣಾಯಾಮ ಸ್ನಾನಾಂಗ ತರ್ಪಣಂ ಕರಿಷ್ಯೆ ಎಂದು ಸಂಕಲ್ಪಿಸಿ, ಪೂರ್ವಾಭಿಮುಖನಾಗಿ ದೇವತೀರ್ಥದಿಂದ ದೇವತರ್ಪಣವನ್ನೂ, ಉತ್ತರಾಭಿಮುಖನಾಗಿ ನಿವೀತನಾಗಿ ಋಷಿತೀರ್ಥದಿಂದಲೇ ಜಲವನ್ನು ಗ್ರಹಿಸಿ ಋಷಿತರ್ಪಣವನ್ನೂ, ದಕ್ಷಣಾಭಿಮುಖನಾಗಿ ನಿಂತು ಪ್ರಾಚೀನಾವೀತನಾಗಿ ಪಿತೃತೀರ್ಥದಿಂದ ಜಲವನ್ನು ಗ್ರಹಿಸಿ ಅಂತರಿಕ್ಷಕ್ಕೆ ಮುಟ್ಟುವಂತೆ ಪಿತೃತರ್ಪಣವನ್ನು ಮಾಡಬೇಕು. ಅನಂತರ ಪೂರ್ವಾಭಿಮುಖನಾಗಿ ನಿಂತು ಉಪವೀತೀ ಎರಡು ಸಲ ಆಚಮನ ಮಾಡಬೇಕು.

ತೀರಕ್ಕೆ ಬಂದು (ಶ್ಲೋಕ) ಯನ್ಮಯಾ ದೂಷಿತಂತೋಯಂ ಶಾರೀರಮಲ ಸಂಚಯಾತ್ । ತದ್ದೋಷ ಪರಿಹಾರಾಯ ಯಕ್ಷ್ಮಾಣಂ ತರ್ಪಯಾಮ್ಯಹಂ ॥ ಈ ಮಂತ್ರವನ್ನು ಹೇಳಿ ನೀರನ್ನು ತೆಗೆದುಕೊಂಡು ಭೂಮಿಯಮೇಲೆ ಬಿಡಬೇಕು.

ಆಮೇಲೆ ಪ್ರಾಚೀನಾವೀತೀ ದಕ್ಷಿಣಾಭಿಮುಖನಾಗಿ ನಿಂತು, ಶರೀರದ ನೀರೆಲ್ಲಾ ಸ್ರವಿಸಿದ ಮೇಲೆ (ಶ್ಲೋಕ) ವೃಕ್ಷಗುಲ್ಮಲತಾರೂಪಾಃ ವರ್ತಂತೇ ಪಿತರೋಮಮ । ತತ್ತೃಪ್ತ್ಯರ್ಥಂ ಮಯಾದತ್ತಂ ಇದಮಸ್ತು ಶಿಖೋದಕಂ ॥ ಎಂಬ ಮಂತ್ರವನ್ನು ಹೇಳಿ ಪಿತೃತೀರ್ಥದಿಂದ ಶಿಖೋದಕವನ್ನು ಭೂಮಿಯಲ್ಲಿ ಬಿಡಬೇಕು. ಅನಂತರ ಉತ್ತರೀಯ ವಸ್ತ್ರವನ್ನು ನಾಲ್ಕಾಗಿ ಜೋಡಿಸಿ ಅಗ್ರ ಭಾಗದಿಂದ (ಶ್ಲೋಕ) ಯೇಕೇಚಾಸ್ಮತ್ ಕುಲೇಜಾತಾಃ ಅಪುತ್ರಾಗೋತ್ರಿಣೋ ಮೃತಾಃ । ತೇಗೃಹ್ಣಂತು ಮಯಾದತ್ತಂ ವಸ್ತ್ರನಿಷ್ಪೀಡನೋದಕಂ ॥ ಈ ಮಂತ್ರವನ್ನು ಹೇಳಿ ಪಿತೃತೀರ್ಥದಿಂದ ವಸ್ತ್ರವನ್ನು ನೆಲದಮೇಲೆ ಹಿಂಡಬೇಕು. ಆ ವಸ್ತ್ರವನ್ನೇ ಎಡಗೈ ಮಣಿಬಂಧದ ಮೇಲಿಟ್ಟುಕೊಂಡು ನೀರಲ್ಲಿ ಬಲಗಾಲಿಟ್ಟು, ಎಡಗಾಲನ್ನು ಮೇಲಿಟ್ಟು ಕುಳಿತು ಉಪವೀತೀ ಎಡದ ಕೈಯಿಂದ ನೀರನ್ನು ಮುಟ್ಟಿಕೊಂಡು ಎರಡ ಸಲ ಆಚಮನ ಮಾಡಬೇಕು. ಈ ಸ್ನಾನಕರ್ಮ ಮೊದಲು ಮುಗಿಯುವವರಿವಿಗೆ ನಾರಾಯಣ ನಾಮವನ್ನು ಪಠನಮಾಡುತ್ತಿರುವವನು ಬ್ರಹ್ಮಲೋಕದಲ್ಲಿ ವಾಸಮಾಡುವನು.

ಅನಂತರ ಒಣಗಿದ ಧೌತ ವಸ್ತ್ರವನ್ನು ಗಾಯತ್ರಿಯಿಂದ ಪ್ರೋಕ್ಷಿಸಿ

ಕೈಯಲ್ಲಿ ಧರಿಸಿ (ಮಂತ್ರ) ಆವಹನ್ತೀ॰ವಿತಸ್ವಾನಾ ಎಂಬ ಐದು ವಾಕ್ಯಗಳನ್ನು ಹೇಳಿ ಸೂರ್ಯನಿಗೆ ತೋರಿಸಿ ಉತ್ತರೀಯುವನ್ನು ತಲೆಗೆ ಸುತ್ತಿ ಅಂತರೀಯುವನ್ನು ಉಟ್ಟುಕೊಳ್ಳುವಾಗ ಒದ್ದೆಯಾದ ಅಂತರೀಯು ವಸ್ತ್ರವನ್ನು ಕೆಳಕ್ಕೆ ಹಾಕಿ ಪಂಚ ಕಚ್ಛೆಹಾಕಿ ಅಂತರೀಯುವನ್ನು ಉಟ್ಟುಕೊಳ್ಳಬೇಕು.

ಮನೆಗಳಲ್ಲಾದರೋ ಆ ಸ್ನಾನ ವಸ್ತ್ರವನ್ನು ಬಿಚ್ಚಿ ಮೇಲಕ್ಕೆ ತೆಗೆದು ಹಾಕಬೇಕು. ಧೌತ ವಸ್ತ್ರಧರಿಸಿದ ಮೇಲೆ ಮೃಜ್ಜಲದಿಂದ ಕೈಕಾಲುಗಳನ್ನು ತೊಳೆದು ಆಚಮನಮಾಡಿ ಉಟ್ಟುಕೊಂಡಿದ್ದ ವಸ್ತ್ರವನ್ನು ಮೃಜ್ಜಲದಿಂದ ತೊಳೆದು ಒಗೆದು ನಿರ್ಮಲಮಾಡಿ ನಾಲ್ಕು ಮಡಿಕೆಮಾಡಿ ಅಗ್ರಭಾಗದಿಂದ ನಿವೀತಿಯಾಗಿ (ಮಂತ್ರ) ಉಚ್ಛಿಷ್ಟಭಾಗಿನೋದಾಸಾಃ ಯೇ ಮೃತಾಃ ತೇತ್ವ ಮಂತ್ರಕಾಃ । ತೃಪ್ಯಂತು ತರುತಾ ಪ್ರಾಪ್ತಾಃ ಮಮ ಸಂಬಂಧಿನೋ ಮೃತಾಃ॥ ಈ ಮಂತ್ರವನ್ನು ಹೇಳಿ ಭೂಮಿಯು ಮೇಲೆ ಹಿಂಡಬೇಕು. ಪೂರ್ವದಂತೆ ಉಪ ವೀತಿಯಾಗಿ ಎಡಗೈ ಮಣಿಬಂಧದಲ್ಲಿಟ್ಟು ದ್ವಿರಾಚಮನಮಾಡಿ ಊರ್ಧ್ವಪುಂಡ್ರ ತ್ರಿಪುಂಡ್ರಗಳನ್ನು ಅವರವರ ಆಚಾರದಂತೆ ಧರಿಸಿ ಸಂಧ್ಯಾದಿ ನಿತ್ಯಕರ್ಮಗಳನ್ನು ಮಾಡಬೇಕು.

ಬ್ರಾಹ್ಮಣನು ಮಾಧ್ಯಾಹ್ನಿಕ ಸ್ನಾನವನ್ನು ಪ್ರಾತಃ ಸ್ನಾನವಿಧಿಯನ್ನನು ಸರಿಸಿ ಮಾಡಬೇಕಾದ್ದು. ಮನೆಯಲ್ಲಿ ಉಷ್ಣೋದಕ ಸ್ನಾನ ಮಾಡುವುದಾದರೆ ಇದರಂತೆ ಸಂಕಲ್ಪಾದಿ ಮಂತ್ರ ಪಠನಗಳೊಂದೂ ಇಲ್ಲಾ. ಮಹಾನದೀಸ್ಮರಣ ನಾರಾಯಣ ನಾಮೋಚ್ಚಾರಣಮಾತ್ರ ಉಂಟು. ಅಲ್ಲದೆ ಕ್ಷೌರ ಶೂದ್ರ ಶ್ವಾನಾದಿಸ್ಪರ್ಶಗಳನಿಮಿತ್ತ ನೈಮಿತ್ತಿಕ ಸ್ನಾನದಲ್ಲಿ ಮೊದಲು ಹದಿಮೂರು ಸಲ ಮುಳುಗಿ ಅನಂತರ ಸಂಕಲ್ಪಾದಿ ಯಥಾವಿಧಿಯಾಗಿ ಎಲ್ಲವನ್ನೂ ಆಚರಿಸ ತಕ್ಕದ್ದು.

ಇದು ಮುಖ್ಯವಾದ ಪ್ರಾತಸ್ಸ್ನಾನಾದ್ಯನುಷ್ಠಾನಕ್ರಮ ॥

ಗೌಣಸ್ನಾನವಿಧಿ

ಇಲ್ಲಿ ಹೇಳಿದಂತೆ ನೀರಿನಲ್ಲಿ ಮುಳುಗಿ ಮಾಡುವ ಸ್ನಾನವು ವಾರುಣ ಸ್ನಾನವೆಂದೆನಿಸುವುದು । ದೇಹಾಲಸ್ಯದಿಂದ ಈ ವಾರುಣ ಸ್ನಾನಮಾಡಲಶಕ್ತನು

ಇಲ್ಲಿ ಬರೆಯುವಂತೆ ಗೌಣಸ್ನಾನವನ್ನಾದರೂ ಮಾಡಬೇಕು । ಅಪೋಹಿಷ್ಠಾದಿ ಮನ್ತ್ರಗಳಿಂದ ಪ್ರೋಕ್ಷಣವು ಮನ್ತ್ರಸ್ನಾನವು । ಗಾಯಿತ್ರೀ ಇಂದ ಹತ್ತುಸಲ ಜಲ ವನ್ನು ಅಭಿಮಂತ್ರಿಸಿ ಇದರಿಂದ ಸರ್ವಾಂಗ ಪ್ರೋಕ್ಷಣವು ಗಾಯತ್ರ ಸ್ನಾನವು । ಭಸ್ಮದಿಂದ ಸರ್ವಾಂಗಲೇಪನವು ಆಗ್ನೇಯ ಸ್ನಾನವು । ಒದ್ದೇ ಬಟ್ಟೆಯಿಂದ ಸರ್ವಾಂಗವನ್ನೂ ಒರಸಿಕೊಳ್ಳುವುದು ಕಾಪಿಲ ಸ್ನಾನವು । ವಿಷ್ಣುಪಾದೋದಕ ವಿಪ್ರಪಾದೋದಕ ಪ್ರೋಕ್ಷಣವು ವಿಷ್ಣು ಧ್ಯಾನಾದಿಗಳಿಂದ ಮಾಡುವ ಸ್ನಾನವು ಮಾನಸಿಕ ಸ್ನಾನವು ॥ ಮುಖ್ಯ ಸ್ನಾನಕ್ಕೆ ಶಕ್ತಿ ಇಲ್ಲದ ದೇಹಾಲಸ್ಯ ಕಾಲದಲ್ಲಿ ಈ ವಿಧವಾದ ಗೌಣಸ್ನಾನಗಳಿಂದ ಜಪ ಸಂಧ್ಯಾ ಬ್ರಹ್ಮಯಜ್ಞಾದಿ ಕರ್ಮಮಾಡಲು ಶುದ್ಧನಾಗುವನು । ಶ್ರಾದ್ಧ ದೇವತಾರ್ಚನಾದಿ ಕರ್ಮಮಾಡಲು ಶುದ್ಧನಲ್ಲ ॥

ಈ ರೀತಿ ಗೌಣಸ್ನಾನ ಭೇದಗಳು.

ಅಥ ಭಸ್ಮಧಾರಣ ವಿಧಿರ್ಲಿಖ್ಯತೇ

ಸದ್ಯೋಜಾತಾದಿ ಪಂಚಬ್ರಹ್ಮ ಮಂತ್ರೈಃ ಆಗ್ನೇಯಂ ಭಸ್ಮಪರಿಗೃಹ್ಯ ಅಗ್ನಿರಿತಿಭಸ್ಮ ವಾಯುರಿತಿಭಸ್ಮ ವ್ಯೋಮೇತಿಭಸ್ಮ ಜಲಮಿತಿಭಸ್ಮ ಸ್ಥಲಮಿತಿಭಸ್ಮ ಇತ್ಯನೇನಾಭಿಮಂತ್ರ್ಯ ಮಾನಸ್ತೋಕ ಇತಿಸಮುದ್ಧೃತ್ಯ ಜಲೇನ ಸಂಮೃಜ್ಯ ತ್ರಿಯಾಯುಷಮಿತಿ ಶಿರೋ ಲಲಾಟ ವಕ್ಷ ಸ್ಕಂಧೇಷು ತ್ರಿಯಾಯುಷೈಃ ತ್ರ್ಯಂಬಕೈಃ ತ್ರಿಶಕ್ತಿಭಿಃ ತಿರ್ಯಕ್ತಿಸ್ರೋರೇಖಾಃ ಪ್ರಕುರ್ವೀತ ॥ ಇತಿ ॥

ಈ ಪ್ರಕಾರ ಭಸ್ಮಧಾರಣೆ ಮಾಡತಕ್ಕವರು ಕಾಲು ತೊಳೆದು ಆಚಮನ ಮಾಡಿ ಶುದ್ಧರಾಗಿ ಭಸ್ಮದಿಂದ ತ್ರಿಪುಂಡ್ರವನ್ನು ಮಾಡಿದ ವಿದ್ವಾಂಸನು ಬ್ರಹ್ಮ ಚಾರೀ ಗೃಹಸ್ಥ ವಾನಪ್ರಸ್ಥ ಯತಿ ಆಗಲಿ ಮಹಾಪಾತಕೋಪಪಾತಕಾದಿಗಳನ್ನು ನಶಿಸಿ ಪವಿತ್ರನಾಗುವನು ಎಂದು ಕಾಲಾಗ್ನಿ ರುದ್ರೋಪನಿಷತ್ತಿನಲ್ಲಿ ವಿಶೇಷವಾಗಿ ಹೇಳಿರುತ್ತೆ ॥

ಯಜ್ಞೋಪವೀತ ಧಾರಣಕ್ರಮ

ಆಚಮ್ಯ ಪ್ರಾಣಾನಾಯಮ್ಯ ಮಮ ಉಪಾತ್ತ ಪ್ರೀತ್ಯರ್ಥಂ ಶ್ರೌತ ಸ್ಮಾರ್ತ ಕರ್ಮಾನುಷ್ಠಾನ ಯೋಗ್ಯತಾ ಸಿದ್ಧ್ಯರ್ಥಂ ಯಜ್ಞೋಪವೀತ ಧಾರಣಂ

ಕರಿಷ್ಯೆ ಎಂದು ಸಂಕಲ್ಪಿಸಿ । ಬಲಗೈ ಮೇಲಕ್ಕೆ ಮೇಲು ಮುಖವಾಗಿ, ಎಡಗೈ ಕೆಳಗೆ ಕೆಳ ಮುಖವಾಗಿಟ್ಟು ಯಜ್ಞೋಪವೀತವನ್ನು ಹಿಡಿದು ॥ (ಮಂತ್ರ)

ಯಜ್ಞೋಪವೀತಂ ಪರಮಂ ಪವಿತ್ರಂ । ಪ್ರಜಾಪತೇರ್ಯತ್ಸಹಜಂ ಪುರಸ್ತಾತ್।

ಆಯುಷ್ಯ ಮಗ್ರ್ರಿಯಂ ಪ್ರತಿಮುಂಚ ಶುಭ್ರಂ । ಯಜ್ಞೋಪವೀತಂ ಬಲಮಸ್ತು

ತೇಜಃ ॥ ಈ ಮಂತ್ರಾಂತದಲ್ಲಿ ಬಲದಕೈ ಮುಂದಾಗಿ ತಲೆಯಿಂದ ಕತ್ತಿನಲ್ಲಿ ಧರಿಸಬೇಕು. ಅನಂತರ ಎರಡು ಸಲ ಆಚಮನ ಮಾಡಬೇಕು ॥ ಗೃಹಸ್ಥಾಶ್ರಮ ವಿಹಿತಂ ದ್ವಿತೀಯ ಯಜ್ಞೋಪವೀತ ಧಾರಣಂಕರಿಷ್ಯೆ ॥ ಎಂದು ಸಂಕಲ್ಪಿಸಿ ಪೂರ್ವದಂತೆ ಮಂತ್ರಾಂತದಲ್ಲಿ ಯಜ್ಞೋಪವೀತವನ್ನೂ ಧರಿಸಿ ದ್ವಿರಾಚಮನ ಮಾಡಬೇಕು ॥ ಗೃಹಸ್ಥನಿಗೆ ಅಣ್ಣನಾಗಲಿ ತಂದೆಯಾಗಲಿ ಇಬ್ಬರೂ ಇಲ್ಲ ದಿದ್ದರೆ ಉತ್ತರೀಯಾರ್ಥಂ ತೃತೀಯ ಯಜ್ಞೋಪವೀತ ಧಾರಣಂ ಕರಿಷ್ಯೆ ಎಂದು ಸಂಕಲ್ಪಿಸಿ ಪೂರ್ವದಂತೆ ಯಜ್ಞೋಪವೀತವನ್ನು ಧರಿಸಿ ಎರಡಾವರ್ತಿ ಆಚಮನಮಾಡಿ ಹಳೇದನ್ನು ತೆಗೆಯಬೇಕು.

॥ ಈ ರೀತಿ ಭಸ್ಮ ಯಜ್ಞೋಪವೀತ ಧಾರಣಕ್ರಮ ॥

ಸಂಕ್ಷೇಪ ಸಂಧ್ಯಾದಿಪ್ರಯೋಗ
ಸಂಧ್ಯಾ ಕಾಲನಿರ್ಣಯ

(ಶ್ಲೋಕ) ಅಹೋರಾತ್ರಸ್ಯ ಯಸ್ಸಂಧಿಃ ಸೂರ್ಯನಕ್ಷತ್ರವರ್ಜಿತಃ | ಸಾತು ಸಂಧ್ಯಾಸಮಾಖ್ಯಾತಾ ಮುನಿಭಿ ಸ್ತತ್ವದರ್ಶಿಭಿಃ || ನಕ್ಷತ್ರಜ್ಯೋತಿರಾರಭ್ಯ ಸೂರ್ಯಸ್ಯೋದಯದರ್ಶನಾತ್ | ಪ್ರಾತಃಸಂಧ್ಯೇತಿತಾಂ ಪ್ರಾಹುಃ ಶ್ರುತಯೋ ಮುನಿಸತ್ತಮಾಃ || ಯದ್ಯಪಿಕಾಲವಾಚಕತ್ವೇನ ಅತ್ರಸಂಧ್ಯಾಶಬ್ದಃಪ್ರತೀ ಯತೇ | ತಥಾಪಿ ತಸ್ಮಿನ್ಕಾಲೇ ಉಪಾಸ್ಯಾ ದೇವತಾ ಸಂಧ್ಯಾಶಬ್ದೇನೋಪ ಲಕ್ಷ್ಯತೇ || ಅತಏವ || ಸಂಧೌಸಂಧ್ಯಾಮುಪಾಸೀತ ನಾಸ್ತಗೇನೋದ್ಗತೇ ರವೌ | ಬ್ರಹ್ಮಣೋಪಾಸ್ಯತೇ ಸಂಧ್ಯಾ ವಿಷ್ಣುನಾ ಶಂಕರೇಣಚ | ತಸ್ಮಾದುಪಾಸ ಯೇದ್ದೇವೀಂಶ್ರೇಯಸ್ಕಾಮೋ ದ್ವಿಜೋತ್ತಮಃ ||

ಅರ್ಥ || **ಉದಯಾಸ್ತಮಾನ** ಕಾಲವೇ ಸಂಧಿ ಎಂಬುದಾಗಿ ಹೇಳಲ್ಪ ಡುತ್ತೆ. ಆ ಕಾಲಗಳ ಉಪಾಸನಾದೇವತೆಗೆ ಸಂಧ್ಯಾ ಎಂದು ಹೆಸರು. ಬೆಳಗ್ಗೆ ನಕ್ಷತ್ರಾಸ್ತಕಾಲ ಮೊದಲು ಸೂರ್ಯೋದಯ ಕಾಲದವರಿವಿಗೆ ಪ್ರಾತಃಸಂಧ್ಯಾ ಕಾಲ. ಇದರಂತೆ ಸೂರ್ಯಾಸ್ತಕಾಲ ಮೊದಲು ನಕ್ಷತ್ರೋದಯ ಕಾಲದವರಿವಿಗೆ ಸಾಯಂಸಂಧ್ಯಾಕಾಲ ಎಂದು ತಿಳಿಯಬೇಕು. ಸಾಯಂಕಾಲ ಅಸ್ತಮಯಕ್ಕೆ ಮೊದಲು; ಬೆಳಗ್ಗೆ ಉದಯಕ್ಕೆ ಮೊದಲು ಈ ಸಂಧಿಕಾಲಗಳಲ್ಲಿ ಬ್ರಹ್ಮಾ-ವಿಷ್ಣು-ಶಿವ ಇವರುಗಳೇ ಮೊದಲಾದವರು ಸಂಧ್ಯಾದೇವತೆಯನ್ನು ಉಪಾಸನೆ ಮಾಡುತ್ತಲಿರುತ್ತಾರೆ ಆದುದರಿಂದ ನಾವುಗಳೆಲ್ಲಾ ಅಭ್ಯುದಯ ಶ್ರೇಯೋಭಿ ವೃದ್ಧಿಗೋಸ್ಕರ ಈ ಸಂಧ್ಯಾಕರ್ಮವನ್ನು ಅವಶ್ಯವಾಗಿ ಮಾಡಬೇಕು.

ಈ ವಿಷಯಗಳಲ್ಲಿ ಅನೇಕ ಶ್ರುತಿಪ್ರಮಾಣಗಳಿರುತ್ತವೆ ||

ಛಂದೋಗಶ್ರುತಿರಪಿ || ಬ್ರಹ್ಮವಾದಿನೊವದನ್ತಿ ಕಸ್ಮಾದ್ಬ್ರಾಹ್ಮಣಃ ಸಾಯಮಾಸೀನಃ ಸಂಧ್ಯಾಮುಪಾಸ್ತೇ | ಕಸ್ಮಾತ್ಪ್ರಾತಸ್ತಿಷ್ಠನ್ | ಯತ್ಸಾಯ ಮಾಸೀನಸ್ಸಂಧ್ಯಾಮುಪಾಸ್ತೆ ತಯಾವೀರಸ್ಥಾನಂ ಜಯತಿ | ಯತ್ಪ್ರಾತಸ್ತಿಷ್ಠ

ತಯಾಸ್ಸ್ವರ್ಗಂಲೋಕಂ ಜಯತೀತಿ || **ತೈತ್ತಿರೀಯಕೇಪಿ** || ರಕ್ಷಾಗ್ಂಸಿಹವಾ ಪುರೋನುವಾಕೇ ತಪೋಗ್ರಮತಿಷ್ಠನ್ತ ಇತ್ಯಾದಿ ತೇನಪಾಪ್ಮಾನ ಮವಧೂನ್ವಂತೀತ್ಯಂತಂ || ಅನ್ಯತ್ರಾಪಿ | ಅಹರಹಸ್ಸಂಧ್ಯಾಮುಪಾಸೀತ || ಇತಿ ||

ಅರ್ಥ || **ಬ್ರಹ್ಮವಾದಿಗಳಪ್ರಶ್ನೆ** || ಯಾವ ಕಾರಣದಿಂದ ಸಾಯಂ ಸಂಧ್ಯೆಯನ್ನು ಕುರಿತು ಮತ್ತು ಪ್ರಾತಸ್ಸಂಧ್ಯೆಯನ್ನು ನಿಂತುಕೊಂಡು ಬ್ರಾಹ್ಮಣನು ಉಪಾಸನೆ ಮಾಡುತ್ತಾನೆ. ಈ ಪ್ರಶ್ನೆಗಳಿಗೆ ಉತ್ತರವು ಛಂದೋಗಶ್ರುತಿಯಲ್ಲಿಯೇ ಹೇಳಲ್ಪಟ್ಟಿರುತ್ತೆ. ತೈತ್ತಿರೀಯ ಶ್ರುತ್ಯರ್ಥ ಪೂರ್ವದಲ್ಲಿ ರಾಕ್ಷಸರು ಸೂರ್ಯನೊಡನೆ ಯುದ್ಧಮಾಡಲಭಿಪ್ರಾಯವುಳ್ಳವರಾಗಿ ಪ್ರಜಾಪತಿ ಬ್ರಹ್ಮನನ್ನು ಕುರಿತು ಉಗ್ರವಾದ ತಪಸ್ಸನ್ನು ಮಾಡಿ ವರವನ್ನು ಪಡೆದು ಉದಯಾಸ್ತಮಯ ಕಾಲಗಳಲ್ಲಿ ಸೂರ್ಯನೊಡನೆ ಯುದ್ಧಮಾಡಲಾರಂಭಿಸಿದರು. ಇವೇ ಮೊದಲಾದ ಅರ್ಥವು ಕೆಲವು ಸ್ಮೃತಿಗಳಿಂದ ಸ್ಪಷ್ಟವಾಗುವುವು ||

(ಶ್ಲೋಕ) ಆದಿತ್ಯೇನ ಸಹಪ್ರಾತಃ ಮಂದೇಹಾನಾಮರಾಕ್ಷಸಾಃ | ಯುಧ್ಯನ್ತಿವರದಾನೇನ ಬ್ರಹ್ಮಣೋऽ ವ್ಯಕ್ತಜನ್ಮನಃ || ಉದಕಾಂಜಲಿನಿಕ್ಷೇಪಾಃ ಗಾಯತ್ರ್ಯಾಚಾಭಿಮಂತ್ರಿತಾಃ | ನಿಘ್ನಂತಿ ರಾಕ್ಷಸಾನ್ ಸರ್ವಾನ್ ಮಂದೇಹಾಖ್ಯಾನ್ ದ್ವಿಜೇರಿತಾಃ || ತತಃ ಪ್ರಯಾತಿ ಸವಿತಾ ಬ್ರಾಹ್ಮಣೈರಭಿರಕ್ಷಿತಃ | ಮರೀಚ್ಯಾದ್ಯೈಃ ಮಹಾಭಾಗೈಃ ಸನಕಾದ್ಯೈಶ್ಚ ಯೋಗಿಭಿಃ || ತಸ್ಮಾನ್ನಲಂಘಯೇತ್ ಸಂಧ್ಯಾಂಸಾಯಂಪ್ರಾತಃ ಸಮಾಹಿತಃ | ಉಲ್ಲಂಘಯತಿಯೋಮೋಹಾತ್ ಸಯಾತಿನರಕಂ ಧ್ರುವಮ್ || ಇತಿ || ತ್ರಿಂಶತ್ಕೋಟ್ಯಸ್ತು ವಿಖ್ಯಾತಾಃ ಮಂದೇಹಾನಾಮ ರಾಕ್ಷಸಾಃ | ಪ್ರದ್ರವನ್ತಿಸಹಸ್ರಾಂಶುಂ ಉದಯನ್ತಂ ದಿನೇದಿನೇ || ಅಹನ್ಯಹನಿತೇ ಸರ್ವೇ ಸೂರ್ಯಮಿಚ್ಛನ್ತಿಘಾತಿತುಂ | ಅಥ ಸೂರ್ಯಸ್ಯತೇಷಾಂಚ ಯುದ್ಧಮಾಸೀತ್ಸುದಾರುಣಂ || ತತೋ ದೇವಗಣಾಸ್ಸರ್ವೇ ಋಷಯಶ್ಚತಪೋಧನಾಃ | ಸಂಧ್ಯಾ ಸಂಧ್ಯಾಮುಪಾಸೀನಾಃ ಯತ್ಕ್ಷಿಪಂತ್ಯಪ್ಸ್ವಹಂಜಲಮ್ || ಬ್ರಹ್ಮವ್ಯಾಹೃತಿಸಂಯುಕ್ತಂ ಗಾಯತ್ರ್ಯಾಚಾಭಿ ಮಂತ್ರಿತಂ | ದಹ್ಯಂತೇ ತೇನ ತೇ ದೈತ್ಯಾಃ ವಜ್ರಭೂತೇನವಾರಿಣಾ || ಏತದ್ವಿದಿತ್ವಾ ಯಸ್ಸಂಧ್ಯಾಂ ಉಪಾಸ್ತೇ ಸಂಶಿತವ್ರತಃ | ದೀರ್ಘಮಾಯುಸ್ಸವಿಂದೇತ ಸರ್ವಪಾಪೈಃ ಪ್ರಮುಚ್ಯತೇ || ಯಸ್ತು ತಾಂಕೇವಲಾಂ ಸಂಧ್ಯಾಂ ಉಪಾಸೀತ

ಸಪುಣ್ಯಭಾಕ್ | ತಾಂಪರಿತ್ಯಜ್ಯಕರ್ಮಾಣಿ ಕುರ್ವ ನ್ನಾಪ್ನೋತಿಕಿಲ್ಬಿಷಮ್ || ಶೇಷ್ಯಂತಿ ಸೂರ್ಯಂ ಸಂಧ್ಯಾಯಾಃ ನೋಪಾಸ್ತಿಂಕುರುತೇತುಯೇ | ಯೇಹಿಂಸಂತಿ ಸದಾ ಸೂರ್ಯಂಮೋಕ್ಷದ್ವಾರ ಮನುತ್ತಮಂ || ಕಥಂಮೋಕ್ಷಸ್ಯ ಸಂಪ್ರಾಪ್ತಿಃ ಭವೇತ್ತೇಷಾಂ ದ್ವಿಜನ್ಮನಾಂ | ಕಾಮಾನ್ಮೋಹಾದ್ಭಯಾಲ್ಲೋಭಾತ್ ಸಂಧ್ಯಾಂ ನಾತಿಕ್ರಮೇದ್ದ್ವಿಜಃ|| ಸಂಧ್ಯಾತಿಕ್ರಮಣಾದ್ವಿಪ್ರಃ ಬ್ರಾಹ್ಮಣ್ಯಾತ್ಪತಿತೋಯತಃ|| ಅತ್ರಿಃ|| ಸಂಧ್ಯಾತ್ರಯಂತು ಕರ್ತವ್ಯಂ ದ್ವಿಜೇನಾತ್ಮವಿದಾಸದೇತಿ || ಅತ್ರಸಂಧ್ಯಾ ಶಬ್ದೇನ ಸಂಧ್ಯೋಪಾಸನಾರೂಪಂ ಕರ್ಮೋಪಲಕ್ಷ್ಯತೇ|| ಅನ್ಯಥಾ ದೇವತಾಯಾಃ ಕರ್ತವ್ಯತಾಽಯೋಗಾತ್ ಏತದಭಿಪ್ರೇತ್ಯಪರಾಶರೋಽಪ್ಯಾಹ || ಸಂಧ್ಯಾ ಸ್ನಾನಂ ಜಪೋಹೋಮೋ ದೇವತಾನಾಂಚ ಪೂಜನಂ | ಆತಿಥ್ಯಂ ವೈಶ್ವದೇವಂಚಷಟ್ಕರ್ಮಾಣಿ ದಿನೇದಿನೇ || ಇತಿ ||

ಅರ್ಥ. ಪ್ರಜಾಪತಿಬ್ರಹ್ಮನಿಂದ ವರವನ್ನು ಪಡೆದು ಮಂದೇಹನಾಮ ರಾಕ್ಷಸರು ಪ್ರಾತಃಕಾಲದಲ್ಲಿ ಸೂರ್ಯನೊಡನೆ ಯುದ್ಧಮಾಡುವರು. ಅದನ್ನು ತಪ್ಪಿಸಲು ಮಹಾತ್ಮರಾದ ಮರೀಚ್ಯಾದಿಗಳು, ಯೋಗಿಗಳಾದ ಸನಕಾದಿಗಳೂ ಸಹಾ ಬ್ರಾಹ್ಮಣರಿಂದ ವಿಜ್ಞಪ್ತರಾಗಿ ಮಂದೇಹನಾಮಕರಾದ ರಾಕ್ಷಸರುಗಳನ್ನು—ಗಾಯತ್ರಿಯಿಂದ ಅಭಿಮಂತ್ರಿತವಾದ ಉದಕಾಂಜಲಿಯನ್ನು ಕೊಟ್ಟು ನಾಶ ಮಾಡುತ್ತಾರೆ. ಅನಂತರ ಬ್ರಾಹ್ಮಣರುಗಳಿಂದ ಸೂರ್ಯನು ರಕ್ಷಿಸಲ್ಪಟ್ಟು ಸಂಚಾರಮಾಡುವನು. ಆದುದರಿಂದ ಸಾಯಂಪ್ರಾತಃಕಾಲಗಳಲ್ಲಿ ಸಮಾಧಾನ ಮನಸ್ಕನಾಗಿ ಸಂಧ್ಯಾಕರ್ಮವನ್ನು ಮಾಡಬೇಕು ಮತ್ತು ಉಲ್ಲಂಘಿಸಬಾರದು. ಯಾವನು ಅವಿವೇಕದಿಂದ ಸಂಧ್ಯಾಕರ್ಮವನ್ನು ಉಲ್ಲಂಘಿಸುತ್ತಾನೋ ಅವನು ನರಕವನ್ನು ನಿಶ್ಚಯವಾಗಿ ಹೊಂದುತ್ತಾನೆ. ಮೂವತ್ತುಕೋಟಿ ಪ್ರಖ್ಯಾತರಾದ ಮಂದೇಹನಾಮ ರಾಕ್ಷಸರು ಪ್ರತಿ ದಿನದಲ್ಲೂ ಉದಯಿಸುತ್ತಿರುವ ಸೂರ್ಯನನ್ನು ಕುರಿತು ಯುದ್ಧಕ್ಕಾಗಿ ಓಡಿಬರುತ್ತಾರೆ ಮತ್ತು ಪ್ರತ್ಯಹದಲ್ಲೂ ಆ ಸಮಸ್ತ ರಾಕ್ಷಸರೂ ಸೂರ್ಯನನ್ನು ಹಿಂಸಿಸುವ ಇಚ್ಛೆಯಿಂದ ಸೂರ್ಯನಿಗೂ ಅವರಿಗೂ ದಾರುಣವಾದ ಯುದ್ಧವಾಗುತ್ತದೆ. ಅನಂತರ ದೇವತೆಗಳು ತಪಸ್ಸೇ ಧನವಾಗುಳ್ಳ ಋಷಿಗಳೂ ಸಂಧ್ಯಾಕಾಲದಲ್ಲಿ, ಸಂಧ್ಯೋಪಾಸನವನ್ನು ಮಾಡುವವರಾಗಿ ಪ್ರತ್ಯಹದಲ್ಲೂ ಪ್ರಣವ—ವ್ಯಾಹೃತಿಯಿಂದ ಕೂಡಿದ ಗಾಯತ್ರಿಯಿಂದಭಿ

ಮಂತ್ರಿತವಾದ ಜಲಾಂಜಲಿಯನ್ನು ಕೊಡುವರಾದ್ದರಿಂದ ಆ ಜಲವು ವಜ್ರಾಯುಧವಾಗಿ ಪರಿಣಮಿಸುವುದರಿಂದ ಆ ದೈತ್ಯರುಗಳು ದಹಿಸಲ್ಪಡುತ್ತಾರೆ. ಯಾವ ಮನುಷ್ಯನು ಈ ವಿಷಯವನ್ನು ತಿಳಿದು ಬಿಡದೆ ಅನವರತವಾಗಿ ಸಂಧ್ಯೋಪಾಸನವನ್ನು ಮಾಡುತ್ತಾನೋ, ಆ ಮನುಷ್ಯನು ದೀರ್ಘಾಯುಸ್ಸನ್ನು ಪಡೆದು ಸಮಸ್ತ ಪಾಪಗಳಿಂದ ಬಿಡಲ್ಪಡುತ್ತಾನೆ. ಯಾವನು ಈ ಸಂಧ್ಯಾಕರ್ಮವನ್ನು ಮುಖ್ಯವನ್ನಾಗಿ ತಿಳಿದು ಉಪಾಸನೆ ಮಾಡುತ್ತಾನೋ ಅವನು ಪುಣ್ಯಭಾಗಿಯಾಗುವನು. ಈ ಮುಖ್ಯವಾದ ಸಂಧ್ಯಾಕರ್ಮವನ್ನು ಬಿಟ್ಟು ಬಾಕಿ ಕರ್ಮವನ್ನು ಮಾಡುವವನು ಪಾಪಿಷ್ಠನಾಗುವನು. ಯಾವನು ಸಂಧ್ಯಾವಂದನವನ್ನು ಮಾಡುವುದಿಲ್ಲವೋ ಅವನು ಸೂರ್ಯನನ್ನು ಹಿಂಸಿಸುವನು. ಈ ರೀತಿ ಸರ್ವದಾ ಸೂರ್ಯನನ್ನು ಹಿಂಸಿಸುವವನಿಗೆ ಉತ್ತಮವಾದ ಮೋಕ್ಷವು ದೊರೆಯಲಾರದು. ಸಂಧ್ಯಾಕರ್ಮವನ್ನು ಬಿಟ್ಟ ದ್ವಿಜನ್ಮರಿಗೆ ಹ್ಯಾಗೆತಾನೇ ಮೋಕ್ಷವು ದೊರೆಯುವುದು. ಆದುದರಿಂದ ದ್ವಿಜನ್ಮನು ಇಚ್ಛೆಯಿಂದಲೂ ಭಯದಿಂದಲೂ ಲೌಭ್ಯದಿಂದಲೂ ಸಂಧ್ಯಾಕರ್ಮವನ್ನು ಬಿಡಬಾರದು. ವಿಪ್ರನು ಸಂಧ್ಯಾತಿಕ್ರಮಣವನ್ನು ಮಾಡಿದರೆ ಬ್ರಾಹ್ಮಣ್ಯದಿಂದ ಪತಿತನಾಗುವನು.

ಅತ್ರಿವಾಕ್ಯ ॥ ಪ್ರಾತರ್ಮಧ್ಯಾಹ್ನ ಸಂಧ್ಯಾಕಾಲಗಳಲ್ಲಿ ಬುದ್ಧಿವಂತನಾದ ದ್ವಿಜನು ನಿತ್ಯದಲ್ಲೂ ಸಂಧ್ಯಾವಂದನವನ್ನು ಮಾಡಬೇಕು. ಇಲ್ಲಿ ಹೇಳಲ್ಪಟ್ಟ ಸಂಧ್ಯಾಶಬ್ದವನ್ನು ಕರ್ಮಪರವಾಗಿ ತಿಳಿಯಬೇಕು. ಹಾಗಲ್ಲದೆ ದೇವತಾಪರವೆಂದು ತಿಳಿದರೆ ಅನುಷ್ಠಾನ ಸಂಭವಿಸುವುದಿಲ್ಲ. ಈ ಸಂಧ್ಯಾಶಬ್ದ ಕರ್ಮಪರವೆಂದು ತಿಳಿದೇ ಪರಾಶರರು ಹೇಳಿರುವರು. ಸ್ನಾನ–ಸಂಧ್ಯಾವಂದನ–ಜಪ–ಹೋಮ–ದೇವತಾರ್ಚನ–ಅತಿಥಿಸತ್ಕಾರ–ವೈಶ್ವದೇವ ಈ ಆರು ಕರ್ಮಗಳನ್ನು ಪ್ರತಿದಿನದಲ್ಲಿಯೂ ಬ್ರಾಹ್ಮಣನು ಮಾಡಬೇಕಾದ್ದು ॥

ಪುಲಸ್ತ್ಯೇನೋಕ್ತಂ ॥ ಸಂಧ್ಯಾಮಿಷ್ಟಿಂ ಚರುಂಹೋಮಂಯಾವಜ್ಜೀವಂ ಸಮಾಚರೇತ್ ॥ ನತ್ಯಜೇತ್ ಸೂತಕೇವಾಪಿತ್ಯಜನ್ಗಚ್ಛೇದಧೋದ್ವಿಜ ಇತಿ ॥ **ಯತಸ್ತೇನೈವೋಕ್ತಂ** ॥ ಸೂತಕೇ ಮೃತಕೇ ಚೈವ ಸಂಧ್ಯಾಕರ್ಮನ ಸಂತ್ಯಜೇತ್ । ಮನಸೋಚ್ಚಾರಯೇನ್ಮಂತ್ರಾನ್ ಪ್ರಾಣಾಯಾಮ ಮೃತೇ ದ್ವಿಜಃ ಇತಿ ॥ **ಅತ್ರವಿಶೇಷಮಾಹವ್ಯಾಸಃ** ॥ ಪ್ರಕ್ಷಿಪೇತ್ ಸೂತಕೇತ್ವರ್ಘ್ಯಂ

ಗಾಯತ್ರೀಂತು ಸಮುಚ್ಚರನ್ | ದತ್ವಾಪ್ರದಕ್ಷಿಣಂ ಕುರ್ಯಾತ್ ಸೂರ್ಯಂಧ್ಯಾಯೇತ್ತ್ರತತೋ ದ್ವಿಜ ಇತಿ ||

ಅರ್ಥ. ಸಂಧ್ಯಾಕರ್ಮ—ಇಷ್ಟಿ–ಚರುಕರ್ಮ–ಹೋಮ ಇವುಗಳನ್ನು ಜೀವಿಸಿರುವ ಪರ್ಯಂತಮಾಡಬೇಕು. ಸೂತಕದಲ್ಲಾದರೂ ಬಿಡಬಾರದು. ಬಿಟ್ಟವನಿಗೆ ಅಧೋಗತಿಯುಂಟಾಗುತ್ತದೆ. ಪುನಃಪುಲಸ್ತ್ಯವಾಕ್ಯ ವೃದ್ಧಿಕ್ಷಯಾದಿ ಕಾಲಗಳಲ್ಲೂ ಸಂಧ್ಯಾಕರ್ಮವನ್ನು ಬಿಡಬಾರದು. ಪ್ರಾಣಾಯಾಮ ಬಿಟ್ಟು ಬಾಕಿ ಮಂತ್ರಗಳನ್ನು ಮನಸ್ಸಿನಿಂದ ಹೇಳಬೇಕು. ಸೂತಕಾದಿ ಕಾಲಗಳಲ್ಲಿ ಅರ್ಘ್ಯಪ್ರದಾನದ ಗಾಯತ್ರೀ ಮಂತ್ರವನ್ನು ವಾಚಾ ಚೆನ್ನಾಗಿ ಉಚ್ಚಾರಣೆ ಮಾಡಿ ಅರ್ಘ್ಯವನ್ನು ಕೊಟ್ಟು ದ್ವಿಜನಾದವನು ಪ್ರದಕ್ಷಿಣವನ್ನು ಮಾಡಿ ಆಮೇಲೆ ಸೂರ್ಯಧ್ಯಾನವನ್ನು ಮಾಡಿ ನಮಸ್ಕಾರ ಮಾಡಬೇಕು. ಈ ವೃದ್ಧಿಕ್ಷಯಾದಿ ಕಾಲಗಳಲ್ಲಿ ಬಿಡದೆ ಹತ್ತು ಗಾಯತ್ರೀಮಂತ್ರ ಜಪವನ್ನು ಮಾಡಬೇಕು.

ಶಕ್ತಸ್ಯ ಮುಖ್ಯಕಾಲಾತಿಕ್ರಮೇ ಪ್ರಾಯಶ್ಚಿತ್ತಮಾಹ || ಸಂಗ್ರಹಕಾರಃ ||

ಶ್ಲೋಕ. ಆಚಾನ್ತೋ ವಿಧಿವತ್ಪ್ರಾಣಾನಾಯಮ್ಯಾರ್ಘ್ಯಂ ಚತುರ್ಥಕಂ | ಕಾಲಾತ್ಯಯ ವಿಶುದ್ಧ್ಯರ್ಥಂ ದತ್ವಾಸಂಧ್ಯಾಂ ಸಮಾಚರೇತ್ || ಚತುರ್ಥಮರ್ಘ್ಯಂ ಗಾಯತ್ರ್ಯಾದದ್ಯಾದ್ವ್ಯಾಹೃತಿಸಂಪುಟಮ್ | ಕಾಲಾತ್ಯಯೇ ವಿಶುದ್ಧ್ಯರ್ಥಂ ತ್ರಿಸಂಧ್ಯಾಸು ಸಮಾಚರೇತ್ | ಪ್ರಾತಃಕಾಲೇ ತ್ರಯಂ ಕುರ್ಯಾತ್ ಸಂಗಮೇ ದ್ವಾದಶೋಪರಿ || ಷಟ್ತ್ರಿಂಶನ್ಮಧ್ಯಮೇ ಕಾಲೇ ತತೋನ ಪ್ರಾಣಸಂಯಮಃ | ಕಾಲಾತ್ಯಯೇತ್ವಕೃತ್ವೈವಂ ಕೃತಾಸಂಧ್ಯಾತು ನಿಷ್ಫಲೇತಿ ||

ಅರ್ಥ. ಶಕ್ತನು ಮುಖ್ಯ ಕಾಲವನ್ನು ಅತಿಕ್ರಮಿಸಿದಲ್ಲಿ ಪ್ರಾಯಶ್ಚಿತ್ತ ಮಾಡಿಕೊಳ್ಳಬೇಕು. ಆಚಮನಮಾಡಿ ವಿಧಿವತ್ತಾಗಿ ಪ್ರಾಣಾಯಾಮ ಮಾಡಿ "ಕಾಲಾತ್ಯಯ ವಿಶುದ್ಧ್ಯರ್ಥಂ" ಎಂಬುದಾಗಿ ಸಂಕಲ್ಪಿಸಿ ಪ್ರಾತಃಸಾಯಂಕಾಲಗಳಲ್ಲಿ; "ಪ್ರಣವ" ವ್ಯಾಹೃತಿಯುಕ್ತವಾದ ಗಾಯತ್ರಿಯಿಂದ ನಾಲ್ಕನೇ ಅರ್ಘ್ಯವನ್ನು ಕೊಡಬೇಕು. ಇದೇ ರೀತಿ ಮಧ್ಯಾಹ್ನ ಕಾಲದಲ್ಲೂ ಮಾಡಬೇಕು. ಮತ್ತು ಪ್ರಾತಃಕಾಲದಲ್ಲಾದರೆ ಮೂರು ಪ್ರಾಣಾಯಾಮವನ್ನೂ, ಸಂಗವ

ಕಾಲದಲ್ಲಾದರೆ ಹನ್ನೆರಡು ಪ್ರಾಣಾಯಾಮವನ್ನೂ, ಮಧ್ಯಾಹ್ನ ಕಾಲದಲ್ಲಾದರೆ ಮೂವತ್ತಾರು ಪ್ರಾಣಾಯಾಮಗಳನ್ನು ಮಾಡಿ; ಪ್ರಾತಃ ಸಂಧ್ಯಾವಂದನವನ್ನು ಮಾಡಬೇಕು. ಈ ರೀತಿ ಆಯಾಯ ಕಾಲದಲ್ಲಿ ಉಕ್ತವಾದ ಪ್ರಾಣಾಯಾಮಗಳನ್ನು ಮಾಡದೆ ಸಂಧ್ಯಾವಂದನವನ್ನು ಮಾಡಿದರೆ ನಿಷ್ಫಲವಾಗುತ್ತದೆ.

ಯಾಜ್ಞವಲ್ಕ್ಯಃ ॥ ಅನಾರ್ತಶ್ಸೋ ತ್ಸೃಜೇದ್ಯಸ್ತು ಸವಿಪ್ರ ಶ್ಶೂದ್ರ ಸಮ್ಮಿತಃ । ಪ್ರಾಯಶ್ಚಿತ್ತೀ ಭವೇಚ್ಚೈವ ಲೋಕೇ ಭವತಿ ನಿಂದಿತಃ ॥ ಇತಿ ॥

ಬೋಧಾಯನಸ್ತು ॥ ಸಾಯಮತಿಕ್ರಮಣೇ ರಾತ್ರ್ಯುಪವಾಸಃ । ಪ್ರಾತರತಿಕ್ರಮೇ ಅಹರುಪವಾಸ ಇತಿ ॥ ಇದಂ ಅಬುದ್ಧಿ ಪೂರ್ವ ವಿಷಯಂ ॥ ಬುದ್ಧಿ ಪೂರ್ವೇತು ॥ ವೇದೋದಿತಾನಾಂ ನಿತ್ಯಾನಾಂ ಕರ್ಮಣಾಂ ಸಮತಿಕ್ರಮೇ । ಸ್ನಾತಕವ್ರತಲೋಪೇಚ ಪ್ರಾಯಶ್ಚಿತ್ತಮಭೋಜನಂ ॥ ಇತಿ ಮನೂಕ್ತ ದಿವಸೋಪವಾಸಃ ಕಾರ್ಯಃ ॥

ಅರ್ಥ. ಅರೋಗಿಯಾದ ವಿಪ್ರನು ಸಂಧ್ಯಾವಂದನವನ್ನು ಬಿಟ್ಟದ್ದೇ ಆದರೆ ಶೂದ್ರನಿಗೆ ಸಮಾನನಾಗಿ, ಪ್ರಾಯಶ್ಚಿತ್ತಾರ್ಹನಾಗಿ, ಲೋಕದಲ್ಲಿ ನಿಂದಿಸಲ್ಪಡುವನು. ಜ್ಞಾಪಕವಿಲ್ಲದೆ ಮರೆತು ಸಾಯಂಸಂಧ್ಯಾ ಮಾಡದಿದ್ದರೆ ರಾತ್ರಿ ಉಪವಾಸ ಮಾಡಬೇಕು. ಪ್ರಾತಃಸಂಧ್ಯಾ ಮಾಡದಿದ್ದರೆ ಹಗಲೆಲ್ಲಾ ಉಪವಾಸ ಮಾಡಬೇಕು. ಬುದ್ಧಿಪೂರ್ವಕವಾಗಿ ಮಾಡದಿದ್ದರೆ ಮನುವಚನ ರೀತಿಯಾಗಿ ಯಾವುದೊಂದು ಸಂಧ್ಯಾವಂದನ ಬಿಟ್ಟರೂ ಒಂದು ದಿವಸವೆಲ್ಲಾ ಉಪವಾಸ ಮಾಡಬೇಕು. ಈ ರೀತಿ ಸ್ನಾತಕ—ವ್ರತ ಇವುಗಳನ್ನು ಬಿಟ್ಟರೂ ಒಂದು ದಿವಸವೆಲ್ಲಾ ಉಪವಾಸ ಮಾಡಬೇಕು.

ಶಂಖೋಪಿ ॥ ಸಂಧ್ಯಾದಿ ನಿತ್ಯ ಲೋಪೇತು ದಿನ ಮೇಕಮಭೋಜನಂ । ದಿನದ್ವಯೇ ತ್ರಿರಾತ್ರಂಸ್ಯಾತ್ ಕೃಛ್ರಾರ್ಧಂತು ದಿನತ್ರಯೇ ॥ ದಶಾಹೇ ಕೃಛ್ರಮೇಕಂ ಸ್ಯಾತ್ ಊರ್ಧ್ವಂ ಚಾಂದ್ರಾಯಣಂ ಚರೇತ್ । ಚಾಂದ್ರಾಯಣಂ ಪರಾಕಂಚ ಮಾಸಾದೂರ್ಧ್ವಂ ವಿಧಿಯತೇ॥ ತತೋಪ್ಯೇವಂ ಪ್ರಕಲ್ಪ್ಯಂ ಸ್ಯಾತ್ ವ್ಯಾಸಸ್ಯವಚನಂಯಥಾ ॥ ಇತಿ ॥ **ಶೌನಕಃ** ॥ ಸಂಧ್ಯಾತಿಕ್ರಮಣೇ

ಯಸ್ಯ ಸಪ್ತರಾತ್ರಂಗಮಿಷ್ಯತಿ । ಉನ್ಮಾದದೋಷಯುಕ್ತೋಽಪಿ ಪುನಸ್ಸಂಸ್ಕಾರ ಮರ್ಹತಿ ॥ ಇತಿ ॥

ಅರ್ಥ. ಸಂಧ್ಯಾದಿ ನಿತ್ಯಕರ್ಮವನ್ನು ಒಂದು ದಿವಸ ಬಿಟ್ಟದ್ದೇ ಆದರೆ ಒಂದು ದಿನ ಉಪವಾಸ ಮಾಡಬೇಕು. ಎರಡು ದಿನ ಬಿಟ್ಟರೆ ಮೂರು ದಿನ ಉಪವಾಸ. ಮೂರು ದಿನ ಬಿಟ್ಟರೆ ಅರ್ಧ ಕೃಚ್ಛ್ರವನ್ನು ಮಾಡಬೇಕು. ಹತ್ತು ದಿನಕ್ಕೆ ಹೆಚ್ಚಾಗಿ ಬಿಟ್ಟರೆ ಒಂದು ತಿಂಗಳವರಿವಿಗೆ ಒಂದು ಚಾಂದ್ರಾಯಣ ವನ್ನು ಮಾಡಬೇಕು. ತಿಂಗಳಿಗಿಂತ ಹೆಚ್ಚಾಗಿ ಬಿಟ್ಟರೆ ಚಾಂದ್ರಾಯಣ ಮತ್ತು ಪರಾಕಕೃಚ್ಛ್ರವನ್ನು ಮಾಡಬೇಕು. ಅದಕ್ಕಿಂತಲೂ ಹೆಚ್ಚು ದಿನಗಳು ನಿತ್ಯ ಕರ್ಮವನ್ನು ಬಿಟ್ಟದ್ದೇ ಆದರೆ ಅದಕ್ಕೆ ತಕ್ಕಂತೆ ಕಲ್ಪಿಸಿ ಕೃಛ್ರಾಚರಣೆ ಮಾಡ ಬೇಕು. ಶೌನಕಃ ॥ ಬುದ್ಧಿಕೆಟ್ಟ ಹುಚ್ಚನಾದರೂ ಏಳುದಿನ ಸಂಧ್ಯಾವಂದನ ವನ್ನು ಬಿಟ್ಟರೆ ಪುನರುಪನಯನ ಮಾಡಿಕೊಳ್ಳಬೇಕು.

ಆಹಚ ॥ ಋಷಯೋ ದೀರ್ಘಸಂಧ್ಯಾತ್ವಾತ್ ದೀರ್ಘಮಾಯುರ ವಾಪ್ನುಯುಃ । ಆಯುರ್ವಿಪ್ರಾಪವಾದೇನ ಸಂಧ್ಯಾವಂದನಹಾನತಃ ॥ ಅತಿಥಿ ಪೂಜಾಹಾನಾಚ್ಚನಶ್ಯತ್ಯಾಯುರಪಿ ಧ್ರುವಂ । ನಾಧಿತಿಷ್ಠೇತಕೇಶಾಂಸ್ತು ನಭ ಸ್ಮಾಸ್ಥಿಕಪಾಲಕಾನ್ । ನಕಾರ್ಪಾಸಾಸ್ಥಿನತುಷಾನ್ ದೀರ್ಘಮಾಯುರ್ಜಿಜೀ ವಿಷುಃ ॥ ಇತಿ ॥

ಅರ್ಥ. ಋಷಿಗಳು ಬಿಡದೆ ಕಾಲಗಳಲ್ಲಿ ಸಂಧ್ಯಾವಂದನವನ್ನು ಮಾಡೋಣದ ರಿಂದಲೇ ದೀರ್ಘಾಯುಷ್ಮಂತರಾಗಿರುವರು. ಅಲ್ಲದೆ ಬ್ರಾಹ್ಮಣರ ಶಾಪ ದಿಂದಲೂ, ಸಂಧ್ಯಾವಂದನವನ್ನು ಬಿಡೋಣದರಿಂದಲೂ, ಅತಿಥಿ ಪೂಜೆ ಇಲ್ಲದ್ದ ರಿಂದಲೂ, ಆಯುಸ್ಸು ಖಂಡಿತವಾಗಿ ನಾಶವಾಗುವುದು. ಕೂದಲುಗಳನ್ನೂ— ಕಪಾಲಗಳನ್ನೂ—ಭತ್ತದ ಹೊಟ್ಟನ್ನೂ—ಬೂದಿಯನ್ನೂ ಅಸ್ಥಿಗಳನ್ನೂ— ಹತ್ತೀಬೀಜಗಳನ್ನೂ ತುಳಿಯುವವರಿಗೆ ಆಯುಸ್ಸು ನಾಶವಾಗುವುದು.

ಶಾತಾತಪಃ ॥ ದರ್ಭಹೀನಾತು ಯಾ ಸಂಧ್ಯಾ ಯಚ್ಚದಾನಂ ವಿನೋ ದಕಂ । ಅಸಂಖ್ಯಾತಂತು ಯಜ್ಜಪ್ತಂ ತತ್ಸರ್ವಂಸ್ಯಾನ್ನಿರರ್ಥಕಮ್ ॥

ಅರ್ಥ. ದರ್ಭೆ—ಪವಿತ್ರ—ಆಸನಾದಿಗಳಿಲ್ಲದೆ ಸಂಧ್ಯಾದಿ ಕರ್ಮಗಳನ್ನು ; ಉದಕವಿಲ್ಲದ ದಾನವನ್ನು ; ಸಂಖ್ಯೆಯಿಲ್ಲದ ಜಪವನ್ನು ಮಾಡಿದ್ದೇ ಆದರೆ ಫಲವಿಲ್ಲದೇ ಹೋಗುತ್ತದೆ.

ಅಶಕ್ತಸ್ಯ ಜಪಮಾಹ || ಅಶಕ್ತಸ್ಸ್ಯಾದ್ಯದಿ ಪ್ರೋಕ್ತಃ ಪ್ರಾಣಾಯಾಮೋ ದ್ವಿಜನ್ಮನಃ | ಬಾಲಸ್ಯಚೇತರೇಷಾಂಚ ದಶಕೃತ್ವೋ ಜಪಸ್ಸ್ಮೃತಃ ||

ಅತ್ಯನ್ತಾಶಕ್ತೌಸಏವ || ಸಪ್ತೈವವ್ಯಾಹೃತೀರೇತಾಃ ಕೇವಲಾ ವಾದ್ವಿಜೋ ಜಪೇತ್ | ಜಪಕ್ರಮೋಽಯಮೇವಸ್ಯಾತ್ ಸರ್ವಪಾಪಃಪ್ರಣಾಶನಃ || ಇತಿ ||

ಪೂರಕ–ಕುಂಭಕ—ರೇಚಕಾತ್ಮಕವಾದ ಶಾಸ್ತ್ರೋಕ್ತ ಪ್ರಾಣಾಯಾಮವನ್ನು ತ್ರಿರಾವರ್ತಿ ಮಾಡಲು ಅಶಕ್ತನಾದ ದ್ವಿಜನಿಗೆ ಮತ್ತು ಬಾಲಕನಿಗೆ ಹತ್ತು ಸಲ ಪ್ರಾಣಾಯಾಮ ಮಂತ್ರಜಪವನ್ನು ಹೇಳಿರುತ್ತೆ. ಅದಕ್ಕೂ ಅಶಕ್ತರಾದವರು ಕೇವಲ ಸಪ್ತವ್ಯಾಹೃತಿಗಳ ಜಪವನ್ನಾದರೂ ಪೂರ್ವದಂತೆ ಮಾಡಿದರೆ ಸರ್ವ ಪಾಪಗಳಿಂದಲೂ ಬಿಡಲ್ಪಡುವರಾಗುತ್ತಾರೆ.

ಗೋಭಿಲಃ || ಸಂಧ್ಯಾಯೇನ ನ ವಿಜ್ಞಾತಾ ಸಂಧ್ಯಾಯೇನಾನುಪಾಸಿತಾ | ಜೀವಮಾನೋಭವೇ ಚ್ಛೂದ್ರಃ ಮೃತಃ ಶ್ವಾಚಾಪಿಜಾಯತೇ || ಸಂಧ್ಯಾಹೀನೋಽಶುಚಿರ್ನಿತ್ಯಂ ಅನರ್ಹಸ್ಸರ್ವಕರ್ಮಸು || ಇತ್ಯಾದಿ ||

ಅರ್ಥ. ಸಂಧ್ಯಾಸ್ವರೂಪವನ್ನು ತಿಳಿಯದವನು, ಸಂಧ್ಯಾವಂದನವನ್ನು ಮಾಡದೇ ಇರುವವನು. ಬದುಕಿದ್ದರೂ ಶೂದ್ರನಾಗುವನು. ಸತ್ತಮೇಲೆ ನಾಯಿ ಜನ್ಮವನ್ನೆತ್ತುವನು. ನಿತ್ಯದಲ್ಲೂ ಸಂಧ್ಯಾಕರ್ಮವನ್ನು ಮಾಡದೆ ಬಿಟ್ಟವನು ನಿತ್ಯಾಶೌಚಿಯೆಂದೆನಿಸುವನಲ್ಲದೆ ಮತ್ಯಾವ ಕರ್ಮಕ್ಕೂ ಯೋಗ್ಯನಾಗುವುದಿಲ್ಲ.

ಸ್ಮೃತ್ಯಂತರೇ || ಉನ್ಮತ್ತದೋಷಯುಕ್ತಸ್ಯ ವ್ಯಾಧಿಯುಕ್ತಸ್ಯನಿತ್ಯಶಃ || ಇತಿ || ಜ್ವರಾದಿನಾಯತ್ಕಿಂಚಿದ್ಧತತ್ವೇ ಶುದ್ಧಮಂಬರಂ ಧೃತ್ವಾವಾಗ್ಯತಃ ಸಮಾಸೀನಃ ಸ್ವೇಷ್ಟದೇವತಾಂ ಧ್ಯಾತ್ವಾವಿಭೂತಿಲೇಪನಂ ಕೃತ್ವಾತಪ್ತವಾರಿಣಾ ತ್ರಿರಾಚಮ್ಯ ಯಥಾಶಕ್ತಿ ಸಂಧ್ಯಾಕರ್ಮ ಕುರ್ಯಾತ್ ||

ಖುಗ್ಣಸ್ಯ ತಪ್ತೋದಕಾಚಮನಂ ನನಿಷಿದ್ಧಮಿತಿ ಆಪಸ್ತಂಬ ಮುನಿರಾಹ, ತಸ್ಮಾಭಿಷ್ಟ ಕಾರಣಾತ್ ಇತಿ॥ ಕಾರಣಂ ಜ್ವರಾದಿಕಮಿತಿ ವೃತ್ತಿಕಾರಃ। ಅತ್ಯಾರ್ತಶ್ಚೇತ್ ಪಿತರಂ ಭ್ರಾತರಂ ಅನ್ಯಂವಾ ಶಿಷ್ಯಾದಿಕಂ ಸಮಾಹೂಯ ನಾಹಂ ಅನುಷ್ಠಾತುಂ ಶಕ್ನೋಮಿ ತ್ವಮೇವ ಏತದಾಚರ ಇತಿ ನಿರ್ದಿಶೇತ್। ತದಾ ಯಜಮಾನಸ್ಯೋಪಾತ್ತದುರಿತ ಕ್ಷಯಾರ್ಥ ಮಿತಿ ಸಂಕಲ್ಪಃ॥ ಏತೇನ ಉನ್ಮತ್ತೋವ್ಯಾಖ್ಯಾತಃ॥

ಅರ್ಥ. ಜ್ವರಾದಿಗಳಿಂದ ಸ್ನಾನಮಾಡಲಶಕ್ತನು ಮಡಿಯಾದ ಬಟ್ಟೆಯನ್ನು ಧರಿಸಿ ಕೂತುಕೊಂಡು ಭಸ್ಮಧಾರಣಮಾಡಿ ಉಷ್ಣೋದಕದಿಂದ ಆಚಮನಮಾಡಿ ಇಷ್ಟದೇವತೆಯನ್ನು ಸ್ಮರಿಸಿ ಮೌನವಾಗಿ ಯಥಾಶಕ್ತಿ ಸಂಧ್ಯಾಕರ್ಮಮಾಡಬೇಕು.॥ ರೋಗದಿಂದ ಶಾನೇ ಅಶಕ್ತನಾದರೆ ಅಣ್ಣ ತಮ್ಮಂದರು ಮತ್ತು ಶಿಷ್ಯಾದಿಗಳಿಂದ ಯಜಮಾನಸ್ಯೋಪಾತ್ತ ಎಂದು ಸಂಕಲ್ಪಿಸಿ ಮಾಡಿಸಬೇಕು. ಹ್ಯಾಗಾದರೂ ಮಾಡಿ ಸಂಧ್ಯಾವಂದನವನ್ನು ಮಾಡಬೇಕೇ ಹೊರ್ತು ಬಿಡಬಾರದು.

ಸಂಧ್ಯಾವಂದನ ವಿಷಯದಲ್ಲಿ ಇದುವರಿವಿಗೆ ಬರೆದಿರುವ ಪ್ರಕಾರ ಬ್ರಾಹ್ಮಣರು ಆಯಾಯ ಕಾಲಗಳಲ್ಲಿ ಸಂಧ್ಯಾ ಕರ್ಮವನ್ನು ಮಾಡಿ ದೀರ್ಘಾಯುಷ್ಮನ್ತರಾಗಿ ಸಮಸ್ತ ಪಾಪಗಳನ್ನೂ ಕಳೆದುಕೊಂಡು ಶ್ರೇಯೋವಂತರಾಗಿ ಬದುಕಬೇಕೆಂದು ಜಗತ್ಕಾರಣನಾದ ಪರಮೇಶ್ವರನನ್ನು ಕುರಿತು ನಿತ್ಯದಲ್ಲೂ ಭಕ್ತಿಯುಕ್ತರಾಗಿ ಪ್ರಾರ್ಥಿಸುತ್ತೇವೆ.॥ ಆದರೆ ಇಲ್ಲಿ ಹೇಳಿದ ನಿಯಮವನ್ನನುಸರಿಸಿ ತಪ್ಪಿಲ್ಲದೆ ಸುಸ್ವರವಾಗಿ ಭಕ್ತಿಯಿಂದ ಒಳ್ಳೆಯ ಆಚಾರ ಶೀಲನಾಗಿ ಮಾಡಿದರೆ ಸಂಧ್ಯಾವಂದನದ ಸಂಪೂರ್ಣ ಫಲವನ್ನನುಭವಿಸಬಹುದು. ಇದುವರಿವಿಗೆ ಸಂಧ್ಯಾವಂದನವನ್ನು ಬಿಡದೆ ಅವಶ್ಯವಾಗಿ ಮಾಡಬೇಕೆಂಬುದಕ್ಕೆ ಪ್ರಮಾಣವಚನಗಳು ಮುಗಿದವು.

ತೈತ್ತರೀಯ ಶಾಖಾ ಆಪಸ್ತಂಬ ಸೂತ್ರದವರಿಗೆ ಆಪಸ್ತಂಬ ಧರ್ಮ ಸೂತ್ರೋಕ್ತ ಆಚಮನ ವಿಧಿ॥

೧. ಸೂತ್ರ॥ ತ್ರಿಷ್ಮನ್ನಾಚಾಮೇತ್ದ್ವಿಹ್ಪೋವಾ ಇತ್ಯಾದಿ॥

ಅರ್ಥ. ನಿಂತುಕೊಂಡು ಅಥವಾ ಬಗ್ಗಿ ನಿಂತು ಆಚಮನ ಮಾಡಬಾರದು ಭೂಮಿಗತವಾದ ಶುದ್ಧ ಜಲದಿಂದಲೇ ಆಚಮನ ಮಾಡಬೇಕು. ಮಳೇ ನೀರಿನಿಂದಾಗಲೀ, ನಲ್ಲಿ ಮುಂತಾದ ಧಾರಾಕಾರವಾದ ನೀರಿನಿಂದಾಗಲೀ ಆಚಮನ ಮಾಡಬಾರದು. ನೀರಿನ ದಡದಲ್ಲಿ ಕೂತು ಆಚಮನಾದಿಗಳನ್ನು ಮಾಡಲು ಸರಿಯಾದ ಸ್ಥಳವಿಲ್ಲದಿದ್ದರೆ ಅಥವಾ ಸ್ನಾನದ ಮೊದ್ದೇ ಬಟ್ಟೆಯಿಂದಲೇ ನಾಭಿಪ್ರಮಾಣ ಅಥವಾ ಊರುಪ್ರಮಾಣ ನೀರಿನಲ್ಲಾಗಲೀ ನಿಂತು ಆಚಮನ ಮಾಡಬಹುದು.

ಸೂತ್ರ || ಆಸೀನಸ್ತ್ರಿರಾಚಾಮೇದ್ಧೃದಯಂಗಮಾಭಿರದ್ಭಿಃ ||
ತ್ರಿರೋಷ್ಠೌ ಪರಿಮೃಜೇತ್ । ದ್ವಿರಿತ್ಯೇಕೇ || ಸಕೃದುಪಸ್ಪೃಶೇತ್ । ದ್ವಿರಿತ್ಯೇಕೇ|| ದಕ್ಷಿಣೇನಪಾಣಿನಾ ಸವ್ಯಂಪ್ರೋಕ್ಷ್ಯ|| ಪಾದೌ ಶಿರಶ್ಚೇಂದ್ರಿಯಾಣ್ಯುಪಸ್ಪೃಶೇತ್ || ಚಕ್ಷುಷೀ ನಾಸಿಕೇ ಶ್ರೋತ್ರೇಚ || ಅಥಾಪಉಪಸ್ಪೃಶೇತ್ || ಪ್ರಯೋಗದಲ್ಲಿ ಮಾಡುವ ಕ್ರಮ ಇದೆ ||

ಅಭಿಪ್ರಾಯ : – ಈ ಧರ್ಮಸೂತ್ರೋಕ್ತ ಸ್ಮೃತ್ಯಾಚಮನವನ್ನು ಎಲ್ಲಾ ಮತದವರೂ ಯಾವಾಗಲೂ ಆಚಮನ ಮಾಡುವ ಕಾಲಗಳಲ್ಲಿ ಈ ರೀತಿಯಾಗಿ ಮಾಡುವುದು ಪ್ರಶಸ್ತ. ಮತ್ತು ಸುಲಭವಾಗಿಯೂ ಇರುತ್ತೆ. ಆಪಸ್ತಂಬರಾದ ಬ್ರಾಹ್ಮಣರಿಗೆ ಈ ಆಚಮನವು ಶಾಸ್ತ್ರವಿರೋಧವೂ, ತಪ್ಪೂ ಆಗುವುದಿಲ್ಲ. ಈ ಮೇಲ್ಕಂಡ ಸೂತ್ರಗಳಿಗೆ ಸಾಲದೇ ಇರುವ ಅರ್ಥಗಳನ್ನು ಸ್ಮೃತ್ಯಂತರಗಳಿಂದ ಸಂಗ್ರಹಮಾಡಿ ವೃತ್ತಿಕಾರರು ಬರೆದಿರುವುದನ್ನು ಸ್ಪಷ್ಟಪಡಿಸಿರುತ್ತೆ.—ಪ್ರಯೋಗದಲ್ಲಿ ||

(೨. "ವಾರಿಣಾಪುಂಡ್ರಂಧೃತ್ವಾ")

ಅರ್ಥ. ಬ್ರಾಹ್ಮಣನು ಸ್ನಾನ ವಸ್ತ್ರದಿಂದಲೇ ನೀರಿನಲ್ಲಿ ನಿಂತು ಸಂಧ್ಯಾವಂದನವನ್ನು ಮಾಡಬೇಕಾಗಿ ಬಂದರೆ ಹಸ್ತದಿಂದ ಜಲವನ್ನು ಗ್ರಹಿಸಿ ಅವರವರ ಆಚಾರಾನುಸಾರ ಊರ್ಧ್ವತ್ರಿಪುಂಡ್ರಗಳನ್ನು ಆಯಾಯ ಮಂತ್ರಗಳನ್ನು ಹೇಳಿ ಜಲದಿಂದಲೇ ಮಾಡಿಕೊಂಡು ಸಂಧ್ಯಾ ಕರ್ಮವನ್ನು ಮಾಡಬಹುದಾಗಿರುತ್ತೆ.

೩. ಪ್ರೋಕ್ಷಣಮಂತ್ರ ॥ ದಧಿಕ್ರಾವ್ಣ್ಣಃ— ಅಪೋಹಿಷ್ಠ ॥ ಈ ಮಂತ್ರಗಳಿಗೆ ಫಲವಾಕ್ಯಶ್ರುತಿ । ದಧಿಕ್ರಾವ್ಣ್ಣಾ ಪುನಾತಿ ದಧಿಕ್ರಾವ್ಣ್ಣೋ ಅಕಾರಿಷಮಿತಿ ಸುರಭಿಮತೀಮೃಚಂ ವದಂತಿ ॥ ಇದು ಮೊದಲು—ನೈಭ್ಯಃ ಪ್ರಾಣಾ ಅಪಕ್ರಾಮನ್ತಿ ॥ ಇತ್ಯಂತ । ಮತ್ತು ಆಪೋಹಿಷ್ಠಾಮಯೋಭುವ ಇತ್ಯದ್ಭಿ ರ್ಮಾರ್ಜಯನ್ತೇ ॥ ಆಪೋವೈ ಸರ್ವಾ ದೇವತಾಃ ॥ ದೇವತಾಭಿ ರೇವಾ ತ್ಮಾನಂ ಪವಯನ್ತೇ । ಇತ್ಯಂತ ॥

೪. ಅರ್ಘ್ಯಪ್ರದಾನ ಶಂಖಃ ಪ್ರಾತರ್ಮಧ್ಯಾಹ್ನಯೋಸ್ತಿಷ್ಠ್ಯ ಸಾಯಮಾ ಸೀನ ಏವಚ । ಮಂದೇಹಾನಾಂ ವಧಾರ್ಥಾಯ ಪ್ರಕ್ಷಿಪೇದುದಕಾಂ ಜಲಿಮ್ ॥ ಪ್ರಾಯಶ್ಚಿತ್ತಾರ್ಥಮಾಚಮ್ಯಮುಚ್ಯತೇ ದೈತ್ಯಹತ್ಯಯಾ । ಪ್ರಣವವ್ಯಾಹೃ ತಿಶ್ಚೈವಕೃತ್ವಾತ್ಮಾನಂ ಪ್ರದಕ್ಷಿಣಮ್ ॥ ಆಚಮ್ಯೈವತತಸ್ತಿಷ್ಠ್ಯ ಧ್ಯಾಯೇ ತ್ಸಂಧ್ಯಾಂಸಮಾಹಿತ ಇತಿ ॥

ತಾತ್ಪರ್ಯ ಪ್ರಾತರ್ಮಧ್ಯಾಹ್ನಕಾಲಗಳಲ್ಲಿ ನಿಂತು ಅರ್ಘ್ಯದಾನಮಾಡಬೇಕು ಸಾಯಂಕಾಲದಲ್ಲಿ ಕೂತು ಅರ್ಘ್ಯದಾನಮಾಡಬೇಕು ॥ ಈ ಅರ್ಘ್ಯದಾನಗಳಿಂದ ರಾಕ್ಷಸರ ವಧಪ್ರಯುಕ್ತ ಪ್ರಾಯಶ್ಚಿತ್ತಾರ್ಥವಾಗಿ ಎರಡು ಆಚಮನ ಮಾಡಿ ನಿಂತು ಪ್ರಣವವ್ಯಾಹೃತಿಗಳಿಂದ ಆತ್ಮ ಪ್ರದಕ್ಷಿಣ ಮಾಡಿ ಪುನಶ್ಚ ಕೂತು ಆಚಮನಮಾಡಿ ನಿಂತು ಸಂಧ್ಯಾ ದೇವತೆಯನ್ನು ಧ್ಯಾನಮಾಡಬೇಕು ॥ ಪ್ರಯೋಗದಲ್ಲಿ ಇದೇ ರೀತಿ ಬರದಿರುತ್ತೆ ॥

ಧರ್ಮಸಿಂಧುಸಾರೇ ಗಾಯತ್ರೀ ಜಪವಿಷಯಃ

ಪ್ರಾಣಾನಾಯಮ್ಯ—ಗಾಯತ್ರ್ಯಾಃ—ವಿಶ್ವಾಮಿತ್ರಋಷಿಃ ಸವಿತಾ ದೇವತಾ; ಗಾಯಿತ್ರೀ ಜಪೇ ವಿನಿಯೋಗಃ ॥ ತತ್ಸವಿತುಃ ಹೃದಯಾಯ ನಮಃ—ಇತ್ಯಾದಿ ಷಡಂಗನ್ಯಾಸಃ ಕಾರ್ಯಃ ॥ ನವಾಕಾರ್ಯಃ—ನ್ಯಾಸವಿಧೇರ ವೈದಿಕತ್ವಾದಿತಿ ॥ ಏತೇನ ಅಕ್ಷರನ್ಯಾಸ—ಪಾದನ್ಯಾಸಾದೀನಾಂ—ಮುದ್ರಾದಿ ವಿಧೇಃ—ಶಾಪಮೋಚನಾದಿ ವಿಧೇಶ್ಚ ತಾಂತ್ರಿಕತ್ವೇನ ಅವೈದಿ ಕತ್ವಾತ್ ಅನಾ ವಶ್ಯಕತ್ವಂ ವೇದಿತವ್ಯಮಿತಿ ॥ ಮಂತ್ರ ದೇವತಾಂ ಧ್ಯಾತ್ವಾಮೌನೀ ಪ್ರಾತಃ ; ಸೂರ್ಯಾಭಿಮುಖಸ್ತಿಷ್ಠನ್ ; ಆ ಮಂಡಲದರ್ಶನಾತ್ ಸಪ್ರಣವವ್ಯಾಹೃತಿ

ಕಾಯಾಃ, ಗಾಯತ್ರ್ಯಾ, ಅಷ್ಟಾಶತಂ, ಅಷ್ಟಾವಿಂಶತಿಂದಶಕಂವಾ ಜಪೇತ್ ॥ ಸಾಯಂ ವಾಯವ್ಯಾಭಿಮುಖಃ ಆ ನಕ್ಷತ್ರದರ್ಶನಾದಿತಿ ವಿಶೇಷಃ ॥ ಇತಿ ॥

ಗೃಹ್ಯಪರಿಶಿಷ್ಟೇ ಗಾಯತ್ರೀ ಜಪವಿಧಿಃ ॥ ಸಾವಿತ್ರ್ಯಾ, ದೈವತ ಮನು ಸೃತ್ಯ, ಆರ್ಷಾದಿಕಂ ವಾ ಇತ್ಯುಪಕ್ರಮ್ಯ ಅಸ್ತ್ರಾಯಫಟ್ ಇತ್ಯಂತ ಮುಕ್ತ್ವಾ ವ ಏನಮೇಕೇನೇಚ್ಛಂತಿ ಸಹಿ ವಿಧಿರವೈದಿಕ ಇತಿ ॥ ಪ್ರಣವವ್ಯಾಹೃತಿ ಪೂರ್ವಿಕಾಂ, ಸಾವಿತ್ರೀಂ, ಜಪೇದಿತಿ ॥

ತಾತ್ಪರ್ಯ ॥ ಪ್ರಾತರ್ಮಧ್ಯಾಹ್ನ ಸಾಯಂಕಾಲ ಸಂಧ್ಯಾವಂದನಗಳಲ್ಲಿ ಅಂಗನ್ಯಾಸ, ಅಕ್ಷರನ್ಯಾಸ, ಪಾದನ್ಯಾಸ ಮುದ್ರಾದಿ ವಿಧಿ, ಶಾಪಮೋಚನಾದಿ ವಿಧಿ ಮುಂತಾದವುಗಳು ತಾಂತ್ರಿಕವಾಗಿರುತ್ತಾಗಿ ಅವೈದಿಕವೆಂದೆನಿಸಿ ವೈದಿಕ ವಾದ ಈ ಕರ್ಮಗಳಲ್ಲಿ ಅನವಶ್ಯಕವೆಂದು ತಿಳಿಯತಕ್ಕದ್ದು, ಮಂತ್ರಾರ್ಥವನ್ನು ಚಿಂತಿಸಿ ಮೌನವ್ರತದಿಂದ ಪ್ರಾತಃಕಾಲದಲ್ಲಿ ಸೂರ್ಯಾಭಿಮುಖನಾಗಿ ನಿಂತು ಕೈ ಗಳನ್ನು ಕಣ್ಣಿನಸಮಕ್ಕೆ ಜೋಡಿಸಿ ಪ್ರಣವವ್ಯಾಹೃತಿಗಳಿಂದ ಕೂಡಿದ ಗಾಯಿತ್ರೀ ಮಂತ್ರದ ಜಪವನ್ನು ನೂರೆಂಟು—ಐವತ್ನಾಲ್ಕು—ಇಪ್ಪತ್ತೆಂಟು—ಇಪ್ಪತ್ತೇಳು ಕೊನೆಗೆ ಹತ್ತುಸಲವಾದರೂ ಜಪಿಸಬೇಕು ॥ ಸಾಯಂಕಾಲ ವಾಯವ್ಯಾಭಿ ಮುಖವಾಗಿ ಅಥವಾ ಪಶ್ಚಿಮಾಭಿಮುಖವಾಗಿಯಾದರೂ ಕುಳಿತು ನಕ್ಷತ್ರ ದರ್ಶನ ಪರ್ಯಂತ ಜಪಮಾಡಬಹುದೆಂಬುದು ವಿಶೇಷ ॥ ವೈ. ಆಹ್ನಿಕಕಾಂಡದಲ್ಲಿ ಅತಏವ ಗೃಹ್ಯಪರಿಶಿಷ್ಟೇ ಏಷೊಂಗನ್ಯಾಸಃ ಎಂದು ಆರಂಭಿಸಿ ಏನಮಪ್ಯೇಕೆ ನೇಚ್ಛಂತಿ ಸಹಿವಿಧಿರ ವೈದಿಕಃ ॥ ಎಂದು ಇದೆ ॥

ಸಂಧ್ಯಾಭಾಷ್ಯೇಪಿ ॥ ಸಂಧ್ಯಾತ್ರಯೇ ಪ್ಯರ್ಘ್ಯದಾನಾನಂತರಂ ಜಪ ಕಾಲೇ; ಕೇಚಿತ್; ಅಸ್ತ್ರೋಪಸಂಹರಣಂ; ಅಂಗುಳಿನ್ಯಾಸ; ಧ್ಯಾನಾದಿಕಂಕು ರ್ವನ್ತಿ ॥ ತತ್ತಾನ್ತ್ರಿಕಸಂಧ್ಯಾವಿಷಯಂ; ನತು ವೈದಿಕಸಂಧ್ಯಾವಿಷಯಂ । ಪ್ರತ್ಯ ಕ್ಷವೇದೇ ವೇದಮೂಲಮನ್ವಾದಿಮಹಾಸ್ಮೃತಿಷುಚ, ಅಸ್ತ್ರೋಪಸಂಹರಣಾದೇ ರನುಕ್ತತ್ವಾತ್ ॥ ತಸ್ಮಾತ್ ಅಸ್ತ್ರೋಪಸಂಹಾರಾದಿಕಂ ನಕರ್ತವ್ಯಮಿತಿ ಸರ್ವಂ ರಮಣೀಯಮಿತಿ ॥

೫. ಗಾಯತ್ರೀಜಪವಿಧಿಃ —

ಶ್ಲೋಕ. ಉಷ್ಣೀಷೀ ಕಂಚುಕೀ ನಗ್ನ: ಮುಕ್ತಕೇಶೋಗಳಾವೃತಃ |
ಅಪವಿತ್ರಕರ ಶ್ಚೈವ ಪ್ರಲಪನ್ನಜಪೇತ್ಕ್ವಚಿತ್ ||

ಅರ್ಥ. ತಲೆಗೆ ಬಟ್ಟೆಸುತ್ತಿ ಷರಟು ಮುಂತಾದ್ದನ್ನು ಹಾಕಿಕೊಂಡು ನಗ್ನನಾಗಿ ಅಂದರೆ ಕಚ್ಚೆ ಇಲ್ಲದೆ ಪುಚ್ಛಕಚ್ಛನಾಗಿ ಅಡ್ಡಕಚ್ಚೆಯಿಂದ ಊರ್ಧ್ವಕಚ್ಛನಾಗಿ ಕೌಪೀನಹಾಕಿಕೊಂಡು ಜುಟ್ಟುಗಂಟುಹಾಕದೇ ಕತ್ತಿಗೆ ಬಟ್ಟೇಸುತ್ತಿ ಕೈಯಲ್ಲಿ ಪವಿತ್ರವಿಲ್ಲದೆ ಮಾತನಾಡುತ್ತಾ ಯಾವಾಗಲೂ ಜಪವನ್ನು ಮಾಡಬಾರದು.

ಶ್ಲೋಕ || ಓಂಕಾರಂ ಪೂರ್ವಮುಚ್ಚಾರ್ಯ ಭೂರ್ಭುವಸ್ಸ್ವಸ್ತತಃ ಪರಂ |
ಗಾಯತ್ರ್ಯುಚ್ಚಾರಣಂ ಚಾನ್ತೇ ಜಪಸ್ಯೈ ಷವಿಧಿಸ್ಸ್ಮೃತಃ ||

ಅರ್ಥ || ಗಾಯತ್ರೀ ಜಪಕಾಲದಲ್ಲಿ ಮಂತ್ರೋಚ್ಚಾರಣ ವಿಧಿ ಅಂದರೆ ಮೊದಲು ಪ್ರಣವ ಮೂರು ವ್ಯಾಹೃತಿ ಗಾಯತ್ರೀ ಪಾದತ್ರಯ ಈ ರೀತೀ ಹೇಳಬೇಕು.

ಶ್ಲೋಕ || ವಾಚಿಕಾಖ್ಯ ಉಪಾಂಶುಶ್ಚಮಾನಸಸ್ತ್ರಿವಿಧಃ ಸ್ಮೃತಃ |
ತ್ರಯಾಣಾಂ ಜಪಯಜ್ಞಾನಾಂ ಶ್ರೇಯಸ್ಸ್ಯಾದುತ್ತರೋತ್ತರಮ್ ||

ಅರ್ಥ || ಜಪಕಾಲದಲ್ಲಿ ಮಂತ್ರ ಹೇಳತಕ್ಕ ಕ್ರಮ ಮೂರು ವಿಧವಾಗಿರುತ್ತೆ. ವಾಚಿಕ, ಉಪಾಂಶು, ಮಾನಸ ಈ ಮೂರು ವಿಧದಲ್ಲಿ ಒಂದಕ್ಕಿಂತ ಒಂದು ಕ್ರಮವಾಗಿ ಶ್ರೇಷ್ಠವಾದದ್ದು.

ಶ್ಲೋಕ || ಯದುಚ್ಚನೀಚಸ್ವರಿತೈಃ ಶಬ್ದೈಃ ಸ್ಪಷ್ಟಪದಾಕ್ಷರೈಃ |
ಮಂತ್ರಮುಚ್ಚಾರಯೇ ದ್ವಾಚಾವಾಚಿಕೋಽಯಂ ಜಪಸ್ಸ್ಮೃತಃ || ೧ ||
ಶನೈರುಚ್ಚಾರಯೇನ್ಮಂತ್ರಂ ಮಂದಗೋಷ್ಠೌ ಪ್ರಚಾಲಯನ್ |
ಅಪರೈರ ಶ್ರುತಂಕಿಂಚಿತ್ ಉಪಾಂಶುಸ್ಸಜಪಸ್ಸ್ಮೃತಃ || ೨ ||
ಧಿಯಾಯಚಾಕ್ಷರಶ್ರೇಣೀಂವರ್ಣಾದ್ವರ್ಣ ಮುದಾಹೃತಂ |
ಶಬ್ದಾರ್ಥ ಚಿಂತನಂ ಭೂಯಃ ಕಥ್ಯತೇ ಮಾನಸೋ ಜಪಃ || ೩ ||

ಅರ್ಥ || ವಾಚಿಕ ಅಂದರೆ ಉದಾತ್ತಾನುದಾತ್ತಸ್ವರಿತಗಳಿಂದ ಕೂಡಿದ ಶಬ್ದ, ಪದ, ಅಕ್ಷರಗಳನ್ನು ಸ್ಪಷ್ಟವಾಗಿ ವಾಕ್ಕಿನಿಂದ, ಕೇಳುವಂತೆ ಮಂತ್ರವನ್ನು ಹೇಳಿ ಜಪಮಾಡುವುದು || ಉಪಾಂಶು ಅಂದರೆ ಮೆಲ್ಲಗೆ ತುಟಿಗಳನ್ನು ಅಲ್ಲಾಡಿಸುತ್ತಾ ಪರರಿಗೆ ಕೇಳದಂತೆ ಮಂತ್ರವನ್ನು ಉಚ್ಚರಿಸಿ ಜಪಮಾಡುವುದು || ಮಾನಸ ಅಂದರೆ ಬಾಯಿಮುಚ್ಚಿಕೊಂಡು ಅಕ್ಷರ ಶ್ರೇಣಿಯನ್ನು ಒಂದೊಂದಾಗಿ ಮನಸ್ಸಿನಿಂದ ಶಬ್ದಾರ್ಥಗಳನ್ನು ಸ್ಮರಿಸುತ್ತಾ ಮಂತ್ರ ಹೇಳಿ ಜಪಮಾಡುವುದು. ||

ಶ್ಲೋಕ || ಮಾನಸ ಸ್ಸಿದ್ಧಿಕಾಮಾನಾಂ ಪುತ್ರಕಾಮ ಉಪಾಂಶು ಕೈಃ |
ವಾಚಿಕೋ ಮರಣೇಚ್ಛೈವ ಪ್ರಶಸ್ತೋ ಜಪ ಈರಿತಃ ||

ಅರ್ಥ || ಮಂತ್ರಸಿದ್ಧ್ಯಾದ್ಯಪೇಕ್ಷೆಯುಳ್ಳವರಿಗೆ ಮಾನಸಜಪವು ಪುತ್ರಕಾಮರಿಗೆ ಉಪಾಂಶುಜಪವು, ಮರಣಕಾಮರಿಗೆ ವಾಚಿಕಜಪವು ಪ್ರಶಸ್ತವು. ||

ಶ್ಲೋಕ || ವಾಚಿಕಸ್ತ್ವೇಕ ಏವಸ್ಯಾತ್ ಉಪಾಂಶುಶ್ಶತಮುಚ್ಯತೇ |
ಸಹಸ್ರಂ ಮಾನಸಃ ಪ್ರೋಕ್ತಂ ಮನ್ವತ್ರಿಭೃಗುನಾರದೈಃ ||

ಅರ್ಥ || ಈ ಪೂರ್ವೋಕ್ತ ಮೂರು ವಿಧವಾದ ಜಪಗಳಿಗೆ ಫಲವಿಶೇಷವೇನೆಂದರೆ, ವಾಚಿಕಕ್ಕೆ ಒಂದೇ ಫಲ, ಉಪಾಂಶು ಜಪಕ್ಕೆ ನೂರು ಫಲ, ಮಾನಸ ಜಪಕ್ಕೆ ಸಹಸ್ರ ಫಲವೆಂದು ಉಕ್ತವಾಗಿದೆ.

ಶ್ಲೋಕ || ಬ್ರಹ್ಮಚಾರೀ ಗೃಹಸ್ಥಶ್ಚ ಶತಮಷ್ಟೋತ್ತರಂ ಜಪೇತ್ |
ವಾನಪ್ರಸ್ಥೋ ಯತಿಶ್ಚೈವ ಸಹಸ್ರಾದಧಿಕಂ ಜಪೇತ್ || ೧ ||
ಅಷ್ಟೋತ್ತರ ಜಪಂನಿತ್ಯಂ ಅಷ್ಟಾವಿಂಶತಿಮೇವಚ |
ಅಪಿವಾದಶಕಂಚಾಪಿತ್ರಿಕಾಲೇ ಸಂಜಪೇ ದ್ದ್ವಿಜಃ || ೨ ||
ಶ್ರಾದ್ಧೇ ಪ್ರದೋಷೇ ದರ್ಶೇಚ ಗಾಯತ್ರೀಂ ದಶಸಂಖ್ಯಯಾ |
ಅಷ್ಟಾವಿಂಶತ್ಯನಧ್ಯಾಯೇ ಸಂಜಪೇತ್ತು ಯಥಾಕ್ರಮಂ ||

ಅರ್ಥ || ಆಶ್ರಮಿಗಳಿಗೆ ಜಪಸಂಖ್ಯೆಗಳನ್ನು ಹೇಳಿರುವ ಕ್ರಮ || ಬ್ರಹ್ಮಚಾರೀ, ಗೃಹಸ್ಥನೂ ಕೂಡ ನೂರೆಂಟು ಜಪವನ್ನು ಮಾಡಬೇಕು. ವಾನ

ಪ್ರಸ್ಥ—ಯತಿ ಇವರಿಬ್ಬರೂ ಸಹಸ್ರಕ್ಕೆ ಹೆಚ್ಚಾಗಿ ಜಪಮಾಡಬೇಕು. ನಿತ್ರ ತ್ರಿಕಾಲದಲ್ಲೂ ನೂರೆಂಟು ಅಥವಾ ಇಪ್ಪತ್ತೆಂಟು ಮತ್ತು ಹತ್ತು ಜಪವನ್ನಾದರೂ ದ್ವಿಜರು ಜಪಿಸಬೇಕು. ಅಲ್ಲದೆ ಶ್ರಾದ್ಧಭೋಜನದಿನದಲ್ಲಿ, ಪ್ರದೋಷ ಕಾ ಲ ದ ಲ್ಲಿ, ದರ್ಶದಿನದಲ್ಲಿ ಗಾಯಿತ್ರಿಯನ್ನು ಹತ್ತುಸಲಮಾಡಬೇಕು. ಅಷ್ಟಮಿ, ಚತುರ್ದಶಿ ಮುಂತಾದ ಅನಧ್ಯಯನದಲ್ಲಿ ಯಥಾಕ್ರಮವಾಗಿ ಇಪ್ಪತ್ತೆಂಟು ಜಪಗಳನ್ನು ಮಾಡಬೇಕು.

ವ್ಯಾಸಃ || ತಿಷ್ಠನ್ ಪ್ರಾತರ್ಜಪೇದ್ದೇವೀಂ ಆಸೀನಃ ಪಶ್ಚಿಮಾಂಜಪೇತ್ ಇತಿ || ಏವಂಚ || ಗಾಯತ್ರೀ ಜಪಸ್ಯ ಪ್ರಧಾನತ್ವಾತ್ ತದನುವರ್ತಿತ್ವಾದಂಗಸ್ಯ ಉದಯಾನಂತರಂ ಗೌಣಕಾಲೇ ಜಪಂಕುರ್ವನ್ನಪಿತಿಷ್ಠನ್ನೇವಕುರ್ಯಾದಿತಿ ಸರ್ವಂ ಸುಸಮಂಜಸಂ || ಪಿತಾಮಹಃ || ಪ್ರಣವಂವ್ಯಾಹೃತೀಸ್ತಿಸ್ರಃ ಗಾಯತ್ರೀಂಚ ಜಪೇತ್ಕ್ರಮಾತ್ | ಪ್ರಣವವ್ಯಾಹೃತಿಯುತಾ ಸ್ವಾಹಾನ್ತಾ ಹೋಮಕರ್ಮಣಿ || ಶುದ್ಧಾವಾತ್ರ ಪ್ರಯೋಕ್ತವ್ಯಾವ್ಯಾಹೃತಿ ಪ್ರಣವೈರ್ವಿನಾ ಇತಿ || ಸ್ಮೃತಿರತ್ನೇ - ಶುದ್ಧಯ್ಯೈವತು ಹೋತವ್ಯಂ ಗಾಯತ್ರ್ಯಾ ಹೋಮಕರ್ಮಣಿ || ತ್ರಿಕೇಣೈವ ಜಪಃ ಕಾರ್ಯಃ ಜಪಯಜ್ಞಪ್ರಸಿದ್ಧಯೇ || ಪ್ರಣವೋ ವ್ಯಾಹೃತಯೋ ಗಾಯತ್ರೀಚೇತಿತ್ರಿಕಮ್ ಇತಿ || ಬೋಧಾಯನಃ || ಪ್ರಣವೋ ವ್ಯಾಹೃತಯಸ್ತಿಸ್ರಃ ಸಾವಿತ್ರೀ ಚೇತ್ಯೇತೇ ಪಂಚ ಬ್ರಹ್ಮಯಜ್ಞಾಃ ಅಹರಹಃ ಬ್ರಾಹ್ಮಣಂ ಕಿಲ್ಬಿಷಾತ್ ಪಾವಯನ್ತಿ ಇತಿ ||

ಅರ್ಥ || ಪ್ರಾತಸ್ಸಂಧ್ಯಾ ಜಪವನ್ನು ನಿಂತುಕೊಂಡು ಮಾಡಬೇಕು ಸಾಯಂ ಸಂಧ್ಯಾ ಜಪವನ್ನು ಕೂತುಕೊಂಡು ಮಾಡಬೇಕು. ಉದಯಾನಂತರ ಗೌಣಕಾಲದಲ್ಲಿ ಜಪವನ್ನು ಮಾಡತಕ್ಕವರೂಕೂಡ ನಿಂತುಕೊಂಡೇ ಮಾಡಬೇಕು. ಆಮಂಡಲದರ್ಶನಾತ್ —ಆನಕ್ಷತ್ರೋದಯಾತ್—ಎಂಬುವ ವಾಕ್ಯಗಳಿಗೆ ಮುಖ್ಯಕಾಲ ಬೋಧನಾರ್ಥವೆಂದು ತಿಳಿಯತಕ್ಕದ್ದು || ಗಾಯತ್ರೀ ಜಪಮಂತ್ರವನ್ನು ಪ್ರಣವ–ಮೂರು ವ್ಯಾಹೃತಿ–ಗಾಯತ್ರಿಯನ್ನು ಹೇಳಿ ಜಪಮಾಡಬೇಕು. ಗಾಯತ್ರೀ ಹೋಮಕಾಲದಲ್ಲಿ ಪ್ರಣವ ವ್ಯಾಹೃತಿಗಳನ್ನು ಬಿಟ್ಟು ಶುದ್ಧವಾದ ಗಾಯತ್ರೀ ಮಂತ್ರದಿಂದಲೇ ಹೋಮಮಾಡಬಹುದು. ಈ ರೀತಿ ಪ್ರಣವ-ಮೂರುವ್ಯಾಹೃತಿ-ಗಾಯತ್ರೀ ಮಂತ್ರ ಇವುಗಳಿಗೆ ಪಂಚಬ್ರಾಹ್ಮಯಜ್ಞ

ವೆಂದು ಬೋಧಾಯನರು ಹೆಸರು ಕೊಟ್ಟು ಇದರಂತೆ ಪ್ರತಿನಿತ್ಯವೂ ಜಪಮಾಡ ತಕ್ಕ ಬ್ರಾಹ್ಮಣನನ್ನು ಪಾಪದಿಂದ ಬಿಡಿಸಿ ಪರಿಶುದ್ಧನನ್ನಾಗಿ ಮಾಡುವುವು ಎಂದು ಬೋಧಾಯನವಚನ ||

"ಗಾಯತ್ರೀ ಜಪಮಾಡುವ ಕ್ರಮಃ"

ವ್ಯಾಸಃ || ತ್ರಿಸಂಧ್ಯಾಸು ಜಪೇದ್ದೇವೀಂ ವಿಚ್ಛಿದ್ಯೈವ ಪದತ್ರಯಂ | ಅವಿಚ್ಛಿನ್ನಾಂ ಜಪೇದ್ಯಸ್ತು ರೌರವಂ ನರಕಂವ್ರಜೇತ್ || ವಿಷ್ಣುಃ || ಅಚ್ಛಿನ್ನ ಪಾದಾ ಗಾಯತ್ರೀ ಬ್ರಹ್ಮಹತ್ಯಾಂ ಪ್ರಯಚ್ಛತಿ | ಛಿನ್ನಪಾದಾತು ಗಾಯತ್ರೀ ಬ್ರಹ್ಮಹತ್ಯಾಂ ವ್ಯಪೋಹತಿ || ತಸ್ಮಾತ್ಪದತ್ರಯಂಛಿತ್ವಾ ಜಪಯಜ್ಞಂ ಸಮಾ ಚರೇತ್ || ಸ್ಮೃತಿರತ್ನಾವಳ್ಯಾಂ || ಅಚ್ಛಿನ್ನಪಾದಂ ಗಾಯತ್ರ್ಯಾಃಜಪಂ ಕುರ್ವನ್ತಿಯೇ ದ್ವಿಜಾಃ | ಅಧೋಮುಖಾಸ್ತೇ ತಿಷ್ಠನ್ತಿ ಕಲ್ಪಕೋಟಿ ಶತಾನ್ಯ ಪೀತಿ ||

ಅರ್ಥ || ಸಂಧ್ಯಾತ್ರಯದಲ್ಲೂ ಗಾಯತ್ರೀ ಮಂತ್ರದ ಮೂರು ಪಾದ ಗಳನ್ನು ಬಿಡಿಸಿ ಬೇರೆ ಬೇರೆ ಹೇಳಿ ಜಪಮಾಡಬೇಕು. ಹೀಗೆ ಮಾಡದೆ ಪಾದ ಗಳನ್ನು ಸೇರಿಸಿ ಗಾಯತ್ರೀ ಜಪವನ್ನು ಮಾಡಿದ್ದೇ ಆದರೆ ರೌರವಾದಿ ನರಕ ಗಳಲ್ಲಿ ಕಲ್ಪಕೋಟಿಶತಕಾಲಗಳವರಿವಿಗೂ ತಲೆ ಕೆಳಕ್ಕೆ ಹಾಕಿ ನಿಲ್ಲುತ್ತಾನೆ || ಸಂಧ್ಯಾಭಾಷ್ಯದಲ್ಲಿ ಮಾತ್ರ ಗಾಯತ್ರೀ ಮಂತ್ರವನ್ನು ಸಂಹಿತಾಪಾಠದಂತೆ ಪಾದವನ್ನು ಸೇರಿಸಿ ಜಪಮಾಡಬೇಕೆಂದು ಇದೆ. ಇದಕ್ಕೆ ಹೇಳಿರುವ ಕಾರಣವು ಸಮರ್ಪಕವಾಗಿ ಕಾಣುವುದಿಲ್ಲ ||

ಗಾಯತ್ರೀಜಪಪ್ರಕಾರಮಾಹ ವ್ಯಾಸಃ ||

ಪರ್ವಭಿಸ್ತುಜಪೇದ್ದೇವೀಂ ಅನ್ಯತ್ರಾ ನಿಯಮಃಸ್ಮೃತಃ | ಗಾಯತ್ರ್ಯಾ ವೇದಬೀಜತ್ವಾತ್ ವೇದಃ ಪರ್ವಸುಗೀಯತ ಇತಿ || ಆರಭ್ಯಾನಾಮಿಕಾಯಸ್ತು ಮಧ್ಯಮೋ ಪರ್ವಣಿಕ್ರಮಾತ್ | ತರ್ಜನೀ ಮೂಲ ಪರ್ಯನ್ತಂ ಜಪೇದ್ದಶಸುಪ ರ್ವಸು || ಮಧ್ಯಮಾಂಗುಳಿಮೂಲೇತು ಯತ್ಪರ್ವ ದ್ವಿತಯಂಭವೇತ್ | ತದ್ವೈ ಮೇರುಂ ವಿಜಾನೀಯಾತ್ ಜಪೇ ತನ್ನಾತಿಲಂಘಯೇತ್ || ಮಧ್ಯಮಾ ಪರ್ವ ದ್ವಯ ಮನತಿಕ್ರಮ್ಯೈವ ಪರಾವೃತ್ಯ ಪುನರಪ್ಯನಾಮಿಕಾಮಧ್ಯಮಪರ್ವಾರಭ್ಯ

ಜಪಃ ಕರ್ತವ್ಯ ಇತ್ಯರ್ಥಃ || ಪರ್ವಭಿರೇವಜಪಃ ಕಾರ್ಯಃ ನಾಂಗುಳೀಭಿರಿತ್ಯಾಹ ವ್ಯಾಸಃ | ಪರ್ವಭಿಸ್ತು ಜಪಃ ಕಾರ್ಯೋನಾಂಗುಳೀನಾಂ ನಿಪಾತನೈಃ | ನಿಪಾತ ನೈಸ್ತು ಯಜ್ಜಪ್ತಂ ತತ್ಸರ್ವಂ ರಾಕ್ಷಸಂ ಭವೇದಿತಿ ||

ಅರ್ಥ|| ಗಾಯತ್ರೀ ಜಪಮಾಡುವವರು ದಕ್ಷಿಣ ಹಸ್ತದ ಅನಾಮಿಕಾ ಮಧ್ಯದ ಗೆರೆಯಿಂದ ಮೊದಲುಮಾಡಿ ಆ ಬೆರಳನ್ನು ಒಂದನೇ ಗೆರೆಗೆ ತಂದು ಆಮೇಲೆ ಕಿರಬೆರಳು ಮೊದಲನೇ ಗೆರೆಯಿಂದ ಕ್ರಮವಾಗಿ ತರ್ಜನೀ ಮೊದ ಲನೆಯ ಗೆರೆವರಿವಿಗೆ ಪ್ರದಕ್ಷಿಣವಾಗಿ ಮಧ್ಯದ ಬೆರಳಿನ ಒಂದೆರಡನೇ ಗೆರೆ ಗಳನ್ನು ಬಿಟ್ಟು ಅಂಗುಷ್ಠದಿಂದ ಹತ್ತು ಗೆರೆಗಳನ್ನು ಮುಟ್ಟಿ ಜಪಮಾಡಿದರೆ ಹತ್ತು ಸಂಖ್ಯೆಯಾಗುತ್ತೆ. ಪುನಃ ಅಂಗುಷ್ಠವನ್ನು ತರ್ಜನೀ ಒಂದನೇ ಗೆರೆ ಯಿಂದ ಹಿಂತಿರುಗಿಸಿ ಮೇಲಕ್ಕೆ ತಂದು ಹಿಂದಿನಂತೆ ಅನಾಮಿಕೆಯ ಮಧ್ಯದ ಗೆರೆಗೆ ನಿಲ್ಲಿಸಿ ಮೊದಲಿನಂತೆ ಲೆಖ್ಖವಾಗಿ ಜಪಮಾಡಬೇಕು. ಮಧ್ಯದ ಬೆರ ಳಿನ ಒಂದೆರಡನೇ ಗೆರೆಗಳನ್ನು ದಾಟಬಾರದು ಮತ್ತು ರೇಖೆಗಳಲ್ಲದ ಬರೀ ಬೆರಳುಗಳಿಂದ ಜಪಮಾಡಬಾರದು.|| ಈ ಅರ್ಥವನ್ನೇ ಗ್ರಂಥಕರ್ತರು ಬರೆ ದಿರುತ್ತಾರೆ||

ತತ್ರ ಅನಾಮಿಕಾಮಧ್ಯರೇಖಾಮಾರಭ್ಯ ತರ್ಜನೀಮೂಲರೇಖಾ ಪರ್ಯನ್ತಂ ಪ್ರಾದಕ್ಷಿಣ್ಯಕ್ರಮೇಣ ಅಂಗುಷ್ಠಾಗ್ರೇಣ ಸ್ಪೃಶನ್ ಮಧ್ಯಮಾಂಗುಳಿ ಮಧ್ಯರೇಖಾದ್ವಯಂ ಮೇರುಮನತಿಲಂಘ್ಯ ಪ್ರಾತಿಲೋಮ್ಯೇನ ಅಂಗುಷ್ಠ ಮಾನೀಯ ಪೂರ್ವವದ್ಗಣಯನ್ ತತ್ತಜ್ಜಪಸಮಾಪನೋಕ್ತಕಾಲಪರ್ಯನ್ತಂಜ ಪೇದಿತಿ||

ಗಾಯತ್ರ್ಯಾಃ ಪಶ್ಚಾತ್ಪುರಸ್ತಾತ್ಪ್ರಾಣಾಯಾಮಾಸ್ತ್ರಯಸ್ತ್ರಯ ಇತಿ| ವಿಪ್ರೋ ವೃಕ್ಷಸ್ತಸ್ಯ ಮೂಲಂಹಿ ಸಂಧ್ಯಾ ವೇದಾಶ್ಶಾಖಾಃ ಸರ್ವಕರ್ಮಾಣಿ ಪತ್ರಂ" ಮೂಲೇ ನಷ್ಟೇ ನೈವಶಾಖಾ ನ ಪತ್ರಂ! ಇತ್ಯಾದಿನಾ ಸಂಧ್ಯಾಯಾ ಅವಶ್ಯಮನುಷ್ಠೇಯತಾ ಪ್ರತೀಯತ ಇತಿ ಸರ್ವಂ ಸುಸಮಂಜಸಂ||

ಯಾಜುಷ ಸಂಧ್ಯೋಪಸ್ಥಾನವಿಧಿಃ ||

ಪಿತಾಮಹಃ || ಏವಂಜಪ್ತ್ವಾ ಯಥಾಶಕ್ತಿ ಹ್ಯುದಿತೇತು ದಿವಾಕರೇ | ಉತ್ತಮೇತ್ಯನುವಾಕೇನ ಹ್ಯುಪಸ್ಥಾಯ ಯಥಾಗತಂ ||

ವ್ಯಾಸಃ|| ಅಥೋಪತಿಷ್ಠೇತಾದಿತ್ಯ ಮುದಯನ್ತಂ ಸಮಾಹಿತಃ | ಉಪಸ್ಥಾನಂತು ಸ್ವಶಾಖಾಧೀತೈರ್ಮಂತ್ರೈಃ ಕಾರ್ಯಂ || ಉಪಸ್ಥಾನಂಸ್ವಕೈರ್ಮಂತ್ರೈರಾದಿತ್ಯಸ್ಯತು ಕಾರಯೇದಿತಿ-ವಸಿಷ್ಠಸ್ಮರಣಾತ್|| ಚಂದ್ರಿಕಾಯಾಂ|| ಯಜುಶ್ಶಾಖಿನಾಂ ಮಿತ್ರಸ್ಯ-ಮಿತ್ರೋಜನಾನ್-ಪ್ರಸಮಿತ್ರೇತಿತಿಸೃಭಿರುಪಸ್ಥಾನಂ || ಸಾಯಂಸಂಧ್ಯೋಪಸ್ಥಾನ ಮಂತ್ರಾನಾಹನಾರಾಯಣಃ || ಪಶ್ಚಿಮಾಭಿಮುಖಸ್ಸಾಯಂ ವಾರುಣೀಭಿ ರಾದಿತ್ಯಮುಪಸ್ಥಾಯ ಪ್ರದಕ್ಷಿಣಂ ಕುರ್ವನ್ ದಿಶೋ ನಮಸ್ಕುರ್ಯಾದಿತಿ || ಇಮಂಮೇವರುಣ-ತತ್ವಾಯಾಮಿ-ಯಚ್ಚಿದ್ಧಿ-ಯತ್ಕಿಂಚೇದಂ-ಕಿತವಾಸ ಇತಿ ||

ಪ್ರಾತಃ ಪ್ರಾಙ್ಮುಖಸ್ತಿಷ್ಠನ್ ಮೈತ್ರೀಭಿರಹರುಪತಿಷ್ಠತೇ | ಮಿತ್ರಸ್ಯ-ಮಿತ್ರೋಜನಾನ್-ಪ್ರಸಮಿತ್ರೇತಿ ||

ಮಧ್ಯಂದಿನೋಪಸ್ಥಾನ ಮಂತ್ರಾನಾಹ ನಾರಾಯಣಃ ||

ಆಸತ್ಯೇನ-ಉದ್ವಯಂ-ಉದುತ್ಯಂ- ಚಿತ್ರಂ ತಚ್ಚಕ್ಷುರ್ದೇವಹಿತಂ-ಜ್ಯೋಕ್ಚಸೂರ್ಯಂದೃಶೇ || ಇತ್ಯಂತಂ ಏವಮಾದೀನಿ ಸೌರಾಣಿ ಜಪನ್ನೀಕ್ಷೇತ ಭಾಸ್ಕರಮಿತಿ ||

ಸ್ಮೃತ್ಯರ್ಥಸಾರೇ || ದಿಗ್ಭ್ಯೋದೇವತಾಭ್ಯೋ ನಮಸ್ಕೃತ್ಯ ಸಂಧ್ಯಾಯೈ ಸಾವಿತ್ರ್ಯೈ-ಗಾಯತ್ರ್ಯೈ-ಸರಸ್ವತ್ಯೈ – ಸರ್ವಾಭ್ಯೋದೇವತಾಭ್ಯೋನಮೋ ನಮ ಇತ್ಯಾದಿ ಯಥಾಸ್ವಾಚಾರಂ ಕುರ್ಯಾದಿತಿ || ಕಾಮೋಕಾರ್ಷೀನ್ಮನ್ಯುರಕಾರ್ಷೀನ್ನಮೋನಮ ಇತ್ಯಪಿ ||

ಉಕ್ತ್ವಾಪ್ರದಕ್ಷಿಣೇನೈವ ದೇವೀಂ ವಿಪ್ರೋಭಿವಾದಯೇತ್ | ಕರ್ಣಯುಗ್ಮಂ ಸ್ವಹಸ್ತಾಭ್ಯಾಂ ಸ್ಪೃಷ್ಟ್ವಾ ಜಾನುದ್ವಯಾದಿಕಂ | ಚರಣಾಂಗುಷ್ಠಪರ್ಯಂತಂ ಸಂಸ್ಪೃಶ್ಯತು ಶನೈಃ ಶನೈಃ || ಅಭಿವಾದ್ಯತು ಗಾಯತ್ರೀಂ ನಮಸ್ಕುರ್ಯಾದ್ದಿಶಸ್ತಥಾ| ಪ್ರಾಚೀಚ ದಕ್ಷಿಣಾಚೈವ ಪ್ರತೀಚೀಚೋತ್ತರೋರ್ಧ್ವಗಾ | ಅಧಶ್ಚಾಪ್ಯಂತರಿಕ್ಷಂಚ ಭೂಮಿಕಾಪ್ಯೋದಿತಾದಿಶಃ| ಏತಾಃ ಪ್ರದಕ್ಷಿಣೇನೈವ ಪ್ರಣಮೇ ತ್ಸ್ವಸ್ವಮಂತ್ರತಃ| ಯಮವಿಷ್ಣು ವಿರೂಪಾಕ್ಷ

ಸವಿತ್ಯೂಣಾ ಮುಪಸ್ಥಿತಿಂ || ಕುರ್ಯಾತ್ತಲ್ಲಿಂಗಕೈರ್ಮಂತ್ರೈಃ ದಿಶೋಯಾಮಾದಿ ದಿಙ್ಮುಖಃ |

ಚಂದ್ರಿಕಾಯಾಂ || ಆತ್ಮಪ್ರಾದೌತಥಾಭೂಮಿಂ ಸಂಧ್ಯಾಕಾಲೇಽಭಿವಾದಯೇತ್ | ಆಯುರ್ವಿದ್ಯಾಂ ಧನಾರೋಗ್ಯೇ ಪ್ರಾಪ್ನೋತಿ ಪುರುಷಸ್ಸದೇತಿ ||

ಸಾವಿತ್ರ್ಯಾದಿ ಕ್ರಿಯಾಸ್ಸರ್ವಾಃ ಆದಿತ್ಯಾಭಿಮುಖಶ್ಚರೇತ್ | ದೇವಾಲಯ ಸಮೀಪೇತು ತಮೇವಾಭಿಮುಖಶ್ಚರೇತ್ ||

ಹಾರೀತಃ | ಆರ್ದ್ರವಾಸಾ ಜಲೇ ಕುರ್ಯಾತ್ತರ್ಪಣಾಚಮನಂಜಪಂ | ಉಪಸ್ಥಾತುಂ ನನಿರ್ಗಚ್ಛೇದ್ವರ್ಜಯೇಚ್ಚ ಪ್ರದಕ್ಷಿಣಮಿತಿ ಯಾಜುಷಸಂಧ್ಯೋಪಸ್ಥಾನವಿಧಿಃ ||

|| ಕೃಚ್ಛ್ರಚಾಂದ್ರಾಯಣಾದಿಗಳಿಗೆ ಪ್ರತಿನಿಧಿವ್ಯವಸ್ಥಾಮಾಹ |

ಕೃಛ್ರೇಗವಾದೀನಾಂ ತತ್ಪ್ರತಿನಿಧೀನಾಂಚ ವ್ಯವಸ್ಥಾತು ದೇಶಕಾಲಾದ್ಯಪೇಕ್ಷಯಾವಿಧಾತವ್ಯಾ-ತಥಾಚ ಬೋಧಾಯನಃ || ದೇಶಂಕಾಲಂ ತಥಾಽಽತ್ಮಾನಂ ದ್ರವ್ಯಂ ದ್ರವ್ಯಪ್ರಯೋಜನಮ್| ಉಪಪತ್ತಿಮವಸ್ಥಾಂ ಚಜ್ಞಾತ್ವಾ ಶೌಚಂ ಪ್ರಕಲ್ಪಯೇದಿತಿ || ಶೌಚಶಬ್ದೇನ ಶುದ್ಧಿಕಾರಣಂ ಸರ್ವಮಭಿಧೀಯತೇ || ಏವಮನ್ಯತ್ರಾಪಿ ನ್ಯೂನಾಧಿಕಕಲ್ಪೇಷು ಶಕ್ತ್ಯಾದ್ಯಪೇಕ್ಷೋ ವಿಕಲ್ಪೋ ಬೋದ್ಧವ್ಯಃ || ತತ್ರಚ ಸಮೃದ್ಧಧನೇನ ಚಾಂದ್ರಾಯಣ ಪ್ರತ್ಯಾಮ್ನಾಯತ್ವೇನ ಅಷ್ಟೌಗಾವೋದೇಯಾಃ | ತಥಾ ಚತುರ್ವಿಂಶತಿಮತೇ || ಅಷ್ಟೌ ಚಾಂದ್ರಾಯಣೇ ದೇಯಾಃ ಪ್ರತ್ಯಾಮ್ನಾಯ ವಿಧೌಸದೇತಿ || ಅಲ್ಪಧನೇನತುತಿಸ್ರೋಗಾವೋದೇಯಾಃ || ತಥಾ ಚಪರಾಶರನಿಬಂಧೆ || ಪ್ರಾಜಾಪತ್ಯೇತು ಗಾಮೇಕಾಮತಿಕೃಛ್ರೇದ್ವಯಂಸ್ಮೃತಂ| ಚಾಂದ್ರಾಯಣೇ ಪರಾಕೇಚ ತಿಸ್ರಸ್ತಾ ದಕ್ಷಿಣಾಸ್ಸ್ಮೃತಾ ಇತಿ | ಎತಚ್ಚಧೇನುತ್ರಯದಾನಂ ಯವಮಧ್ಯಪಿಪೀಲಿಕಾಮಧ್ಯಯತಿಚಾಂದ್ರಾಯಣಾದಿಷ್ವಪಿ ಯೋಜ್ಯಂ | ಎವಂಶಕ್ತ್ಯಪೇಕ್ಷಯಾ ಯಾವತ್ಯೋಧೇನವೋ ದೀಯನ್ತೇ-ತತ್ರತದಭಾವೇ || ಗವಾಮಭಾವೇ ನಿಷ್ಕಂಸ್ಯಾತ್ತದರ್ಧಂ ಪಾದಮೆ.ವವೇತ್ಯುಕ್ತರೀತ್ಯಾದಾತವ್ಯಮ್ || ಅಥವಾ ಪ್ರತಿಧೇನುಚಾಯುತಮಯುತಂ ಗಾಯತ್ರೀ ಜಪೋವಾ-ತಥಾಧೇನು

ಸಂಖ್ಯಾಕಾ ಉಪವಾಸಾವಾಥೇನುದ್ವಾದಶದಶದ್ವಾದಶ ಬ್ರಾಹ್ಮಣ ಸಂಖ್ಯಾಕಾನಿ ಪ್ರಾಣಾಯಾಮಶತದ್ವಯಾನಿವಾಥೇನುಸಂಖ್ಯಾಕಾನಿ – ವೇದಪಾರಾಯಣಾನಿವಾ – ತತ್ಸಂಖ್ಯಾತಿಲಹೋಮಸಹಸ್ರಾಣಿವಾ ನಿತ್ಯಂಥೇನುದ್ವಾದಶ ದ್ವಾದಶ ಸ್ನಾನಾನಿವಾಕಾರ್ಯಾಣಿ ॥ ಎತೇಚಪೂರ್ವವದೇವ ಸ್ವಾಶಕ್ತ್ಯಾದ್ಯಪೇಕ್ಷಯಾಯೋಜ್ಯಾಃ ॥ಇತಿ॥

ತೈತ್ತಿರೀಯಶಾಖಾ ಅಪಸ್ತಂಬ ಸೂತ್ರದವರಿಗೆ ಸಂಕ್ಷೇಪಶಾಸ್ತ್ರ ಸಂಧ್ಯಾಕರ್ಮ ಪ್ರಯೋಗ ॥

ಪ್ರಾತಸ್ಸಂಧ್ಯಾವಂದನ ಪ್ರಯೋಗ

ಸ್ವಸೂತ್ರೋಕ್ತ ಆಚಮನ ಮಾಡತಕ್ಕ ಕ್ರಮ :—

ಬ್ರಾಹ್ಮಣನು ಶುದ್ಧವಾದ ಸ್ಥಳದಲ್ಲಿ ಮಂಡಿಗಳನ್ನು ಮೇಲಕ್ಕೆ ಮಾಡಿ ಕುಕ್ರಗಾಲು ಹಾಕಿ ಪೂರ್ವ ಅಥವಾ ಉತ್ತರ ಮುಖನಾಗಿ ಕೂತುಕೊಂಡು ಮಂಡಿಗಳ ಮಧ್ಯದಲ್ಲಿ ತೋಳುಗಳನ್ನಿಟ್ಟು ದಕ್ಷಿಣ ಹಸ್ತದಲ್ಲಿ ಉದ್ದಿನಕಾಳು ಮುಳುಗುವಷ್ಟು ಶುದ್ಧೋದಕವನ್ನು ಗ್ರಹಿಸಿ ಹೃದಯಕ್ಕೆ ವ್ಯಾಪಿಸುವಂತೆ ಬ್ರಹ್ಮತೀರ್ಥದಿಂದ ಕುಡಿಯಬೇಕು. ಹೀಗೆ ಮೂರು ಸಲ ಕುಡಿದಮೇಲೆ ಮಧ್ಯದ ಮೂರು ಬೆರಳುಗಳಿಂದ ಬೇರೆಬೇರೆ ನೀರು ಮುಟ್ಟಿ ಮೂರು ಸಲ ಅಥವಾ ಎರಡು ಸಲ ತುಟಿಗಳನ್ನು ಒರಸಿ ಹಸ್ತವನ್ನು ತೊಳಿಯಬೇಕು. ಆಮೇಲೆ ದಕ್ಷಿಣ ಹಸ್ತದಿಂದ ನೀರು ತೆಗೆದು ವಾಮಹಸ್ತ; ಪಾದಗಳು; ಶಿರಸ್ಸು ಇವುಗಳನ್ನು ಪ್ರೋಕ್ಷಿಸಿ ಅಂಗುಷ್ಠಾನಾಮಿಕಗಳಿಂದ ದಕ್ಷಿಣ ವಾಮ ಚಕ್ಷಸ್ಸುಗಳನ್ನು ಮುಟ್ಟಿ; ಅಂಗುಷ್ಠತರ್ಜನಿಗಳಿಂದ ದಕ್ಷಿಣವಾಮ ನಾಸಿಕಗಳನ್ನು ಮುಟ್ಟಿ ಅಂಗುಷ್ಠ ಕನಿಷ್ಠಿಕಗಳಿಂದ ದಕ್ಷಿಣಾವಾಮ ಕಿವಿಗಳನ್ನು ಮುಟ್ಟಿ ಹಸ್ತಗಳನ್ನು ತೊಳಿಯಬೇಕು. ॥

ಊಟಮಾಡುವವನು ಶುದ್ಧನಾಗಿದ್ದರೂ ಎರಡು ಸಲ ಆಚಮನಮಾಡಿ ಭೋಜನಮಾಡಬೇಕು ॥ ಆದರೆ ಪ್ರತ್ಯಾಚಮನದಲ್ಲೂ ಎರಡು ಸಲ ತುಟಿ

ಯನ್ನು ಒರಸಿ ಒಂದು ಸಲ ಹಸ್ತವನ್ನು ತೊಳೆಯಬೇಕು.॥ ಭೋಜನಾ ನಂತರ ಆಸನದ ಮೇಲೆ ಕೂತು ಎರಡು ಸಲ ಆಚಮನ ಮಾಡಬೇಕು. ಭೋಜನಕಾಲದಲ್ಲಿ ಮಾತ್ರ ಇಷ್ಟು ತಿಳಿಯತಕ್ಕದ್ದು.)

ವಾಕ್ಯ–ಏತಾವದಾಚಮನ ವಿಧಾವಶಕ್ತಃ ತ್ರಿಃ ಪೀತ್ವಾ ಕರಂ ಪ್ರಕ್ಷಾಳ್ಯ ದಕ್ಷಿಣಕರ್ಣಂಸ್ಪೃಶೇತ್ ॥

ಅರ್ಥ ॥ ಇಲ್ಲಿ ಹೇಳಿದಂತೆ ಆಚಮನಮಾಡುವುದಕ್ಕೆ ಶಕ್ತಿ ಇಲ್ಲದವನು ಮೂರು ಸಲ ಜಲಪಾನಮಾಡಿ ಹಸ್ತವನ್ನು ತೊಳೆದು ಬಲದ ಕಿವಿಯನ್ನು ಮುಟ್ಟಿದರೆ ಸಾಕಾಗಿರುತ್ತೆ ॥ ಆ ಮೇಲೆ ಪುಂಡರೀಕಾಕ್ಷನನ್ನುಸ್ಮರಿಸಿ.

೧. (ಮಂತ್ರ ॥ ಅಪವಿತ್ರಃ ಪವಿತ್ರೋವಾ । ಸರ್ವಾವಸ್ಥಾಂ ಗತೋಪಿವಾ । ಯಸ್ಮರೇತ್ಪುಂಡರೀಕಾಕ್ಷಂ । ಸಬಾಹ್ಯಾಭ್ಯಂತರಶ್ಶುಚಿಃ ॥

ಇದರ ಪ್ರತಿವಾಕ್ಯಾಂತದಲ್ಲೂ ಅಂಗುಷ್ಠ ಮಧ್ಯಮಾನಾಮಿಕಗಳಿಂದ ನೀರು ತೆಗೆದು ಶಿರಸ್ಸಿಗೆ ಪ್ರೋಕ್ಷಿಸಬೇಕು. ॥ ಒಂದು ಸಲ ಆಚಮನ ಮಾಡಬೇಕು.)

ಪ್ರಾಣಾಯಾಮಕ್ರಮ—ತರ್ಜನೀ ಮಧ್ಯಮ ಬೆರಳುಗಳನ್ನು ಮಡಿಸಿಕೊಂಡು ಅಂಗುಷ್ಠಾನಾಮಿಕ ಕನಿಷ್ಠಗಳಿಂದ ನಾಸಿಕಾಗ್ರವನ್ನು ದೃಢವಾಗಿ ಹಿಡಿದು ಮಂತ್ರಗಳನ್ನು ಜಪಿಸಬೇಕು॥ ಮಂತ್ರಾಂತದಲ್ಲಿ ದಕ್ಷಿಣ ಕಿವಿಯನ್ನು ಮುಟ್ಟಬೇಕು॥ ಶಕ್ತನಾದವನು ಪೂರ್ವದಂತೆ ಮೂಗನ್ನು ಹಿಡಿದುಕೊಂಡು ಎಡದ ಮೂಗಿನಿಂದ ಶ್ವಾಸಗ್ರಹಣಮಾಡಿ ಆಶ್ವಾಸಧಾರಣಾ ಕಾಲದಲ್ಲಿ ಮೂರು ಸಲ ಮನಸ್ಸಿನಿಂದ ಪ್ರಾಣಾಯಾಮ ಮಂತ್ರಗಳನ್ನು ಜಪಿಸಿ ದಕ್ಷಿಣ ಮೂಗಿನಿಂದ ನಿಧಾನವಾಗಿ ಶ್ವಾಸವನ್ನು ಬಿಟ್ಟರೇ ಇದು ಒಂದು ಪ್ರಾಣಾಯಾಮವೆನಿಸುವುದು. ಈ ರೀತಿ ಪ್ರತಿ ಕರ್ಮಾದಿಯಲ್ಲೂ ಮೂರು ಸಲ ಪ್ರಾಣಾಯಾಮವನ್ನು ಮಾಡಬೇಕು॥

೨. → ಪ್ರಾಣಾಯಾಮ ಮಂತ್ರ. ಓಂ ಭೂಃ—ಓಂ ಭುವಃ—ಓಗ್ಂಸುವಃ—ಓಂ ಮಹಃ—ಓಂ ಜನಃ—ಓಂ ತಪಃ—ಓಗ್ಂ ಸತ್ಯಂ—ಓಂ ತತ್ಸವಿತುರ್ವರೇಣ್ಯಂ ಭರ್ಗೋದೇವಸ್ಯಧೀಮಹಿ। ಧಿಯೋಯೋನಃ ಪ್ರಚೋದಯಾತ್ ॥ ಓಮಾಪೋಜ್ಯೋತೀರಸೋಽಮೃತಂ ಬ್ರಹ್ಮಭೂರ್ಭುವಸ್ಸುವರೋಮ್ ॥

ಸಂಕಲ್ಪಕ್ರಮ ॥ ಬಲದ ಕಾಲಿನ ಮಂಡೀಮೇಲೆ ಎಡಗೈಯನ್ನು ಮೇಲು ಮುಖವಾಗಿಟ್ಟು ಅದರ ಮೇಲೆ ಬಲಗೈಯನು ಕೆಳಮುಖವಾಗಿ ಪ್ರಾಗಗ್ರ ವಾಗಿಟ್ಟು ದಕ್ಷಿಣಾಂಗುಷ್ಠದಿಂದ ವಾಮಾಂಗುಷ್ಠವನ್ನು ಘಟ್ಟಿಯಾಗಿ ಹಿಡಿದು ಕೊಂಡು * ಮಮಉಪಾತ್ತ (ಸಮಸ್ತ) ದುರಿತಕ್ಷಯ ದ್ವಾರಾ ಪರಮೇಶ್ವರ ಪ್ರೀತ್ಯರ್ಥಂ (ಶ್ರೀಮನ್ನಾರಾಯಣ ಪ್ರೀತ್ಯರ್ಥಂ) (ಶ್ರೀ ಭಗವತ್ಕೈಂಕರ್ಯ ರೂಪಂ) ಎಂಬುದಾಗಿ ಅವರವರ ಸಂಪ್ರದಾಯಾನುಸಾರ ಹೇಳಿ ಪ್ರಾತಸ್ಸಂಧ್ಯಾ ಮುಪಾಸಿಷ್ಯೇ ಎಂದು ಸಂಕಲ್ಪ ಮಾಡಬೇಕು. ॥ (ಅನಾಮಿಕಾಂಗುಳಿಯಿಂದ ನೀರು ಮುಟ್ಟಿ)

→ ಮಂತ್ರ॥ (ಓಂ ಶ್ರೀ ಕೇಶವಾಯನಮಃ ॥) ಇತ್ಯಾದಿ ಮಂತ್ರ ವನ್ನು ಹೇಳಿ ಸಂಪ್ರದಾಯಾನುಸಾರ ಜಲದಿಂದ ಪುಂಡ್ರವನ್ನು ಮಾಡಬಹುದು॥ ದಕ್ಷಿಣ ಹಸ್ತದ ಚುಳಕದಲ್ಲಿ ನೀರನ್ನಿಟ್ಟುಕೊಂಡು ಇದನ್ನು ನೋಡುತ್ತಾ.

೩. → ಮಂತ್ರ॥ ಸೂರ್ಯಶ್ಚಮಾಮನ್ಯುಶ್ಚ ಮನ್ಯುಪತಯಶ್ಚ ಮನ್ಯು ಕೃತೇಭ್ಯಃ । ಪಾಪೇಭ್ಯೋರಕ್ಷನ್ತಾಮ್ । ಯದ್ರಾತ್ರಿಯಾಪಾಪ ಮಕಾರ್ಷಂ। ಮನಸಾವಾಚಾ ಹಸ್ತಾಭ್ಯಾಂ । ಪದ್ಭ್ಯಾಮುದರೇಣಶಿಶ್ನಾ । ರಾತ್ರಿಸ್ತದವಲುಂಪತು । ಯತ್ಕಿಂಚದುರಿತಂಮಯಿ । ಇದಮಹಂಮಾಮಮೃತಯೋನೌ।

ಸೂರ್ಯೇಜ್ಯೋತಿಷಿ ಜುಹೋಮಿಸ್ವಾಹಾ ॥ ಈ ಮಂತ್ರವನ್ನು ಹೇಳಿ ಹಸ್ತಗತ ಜಲವನ್ನು ಪ್ರಾಶನಮಾಡಬೇಕು. ಒಂದು ಸಲ ಆಚಮನಮಾಡಬೇಕು ॥ ಮಧ್ಯಮಾನಾಮಿಕಾಂಗುಷ್ಠಗಳಿಂದ ಅಥವಾ ದರ್ಭಾಗ್ರಗಳಿಂದ ಜಲವನ್ನು ತೆಗೆದು ಶಿರಸ್ಸಿಗೆ ಪ್ರೋಕ್ಷಿಸಿಕೊಳ್ಳುವ ಮಂತ್ರ.

೪. ಓಂ ದಧಿಕ್ರಾವ್ಣ್ಣೋ ಅಕಾರಿಷಂ। ಓಂಜಿಷ್ಣೋರಶ್ವಸ್ಯವಾಜಿನಃ। ಓಂ ಸುರಭಿನೋಮುಖಾಕರತ್ । ಓಂ ಪ್ರಣ ಆಯೂಗ್ಂಷಿತಾರಿಷತ್ ॥ ಓಂ ಆಪೋಹಿಷ್ಠಾ ಮಯೋಭುವಃ । ಓಂ ತಾನಊರ್ಜೇದಧಾತನ । ಓಂ ಮಹೇರಣಾಯ ಚಕ್ಷಸೇ । ಓಂ ಯೋವಶ್ಶಿವತಮೋರಸಃ । ಓಂ ತಸ್ಯಭಾಜಯ ತೇಹನಃ । ಓಂ ಉಶತೀರಿವ ಮಾತರಃ । ಓಂ ತಸ್ಮಾ ಅರಂಗಮಾಮವಃ । ಓಂ ಯಸ್ಯಕ್ಷಯಾಯ ಜಿನ್ವಥ । ಈ ವಾಕ್ಯಾಂತದಲ್ಲಿ ಮಾತ್ರ ತನ್ನ ಪಾದಗಳಿಗೆ ಅಥವಾ ಭೂಮಿಗೆ ಪ್ರೋಕ್ಷಣಮಾಡಿ ॥ ಓಂ ಆಪೋಜನಯಥಾಚನಃ ॥ ಪುನಃ ಶಿರಸ್ಸಿಗೆ ಪ್ರೋಕ್ಷಿಸಿ ಓಂ ಭೂರ್ಭುವಸ್ಸುವಃ ಎಂಬ ಮಂತ್ರದಿಂದ ತನ್ನ ಶರೀರಕ್ಕೆ ನೀರಿನಿಂದ ಪರಿಷೇಚನ ಮಾಡಿಕೊಳ್ಳಬೇಕು॥

(ಪುನಃ ದಕ್ಷಿಣ ಹಸ್ತದಲ್ಲಿ ನೀರಿಟ್ಟುಕೊಂಡು)

೫. ಮಂತ್ರ ॥ ದ್ರುಪದಾದಿವೇನ್ಮುಮುಚಾನಃ । ಸ್ವಿನ್ನಸ್ನಾತ್ವೀ ಮಲಾದಿವ । ಪೂತಂ ಪವಿತ್ರೇಣೇವಾಜ್ಯಂ । ಆಪಶ್ಶುಂಧನ್ತು ಮೈನಸಃ ॥ ಈ ಮಂತ್ರವನ್ನು ಹೇಳಿ ಪಾಪಗಳನ್ನೆಲ್ಲಾ ಸ್ಮರಿಸಿ ಹಸ್ತಗತ ಜಲವನ್ನು ಮಂತ್ರಾಂತದಲ್ಲಿ ಮೂಸಿನೋಡಿ ಎಡಭಾಗದ ಭೂಮಿಯ ಮೇಲೆ ಚಲ್ಲಬೇಕು. ಅದನ್ನು

ನೋಡಬಾರದು॥ (ಪುನಃ ಒಂದಾವರ್ತಿ ಆಚಮನ ಮಾಡಬೇಕು.) ಪ್ರಾಣಾಯಾಮಮಾಡಿ ಪ್ರಾತಸ್ಸಂಧ್ಯಾರ್ಘ್ಯ ಪ್ರದಾನಂಕರಿಷ್ಯೇ ಎಂದು ಸಂಕಲ್ಪಿಸಿ— ಪ್ರಾತಃ ಕಾಲದಲ್ಲಿ ಮೂರುಸಲ ಅರ್ಘ್ಯ ಪ್ರದಾನವನ್ನು ನಿಂತುಕೊಂಡು ಅಂಗುಷ್ಠ ತರ್ಜನಿಗಳನ್ನು ಸೇರಿಸದೆ ಅಂಜಲಿಯಿಂದ ಶುದ್ಧೋದಕವನ್ನು ಗ್ರಹಿಸಿ ಪೂರ್ವಮುಖನಾಗಿ ;

→ ಮಂತ್ರ ॥ ಓಂ ಭೂರ್ಭುವಸ್ಸುವಃ । ತತ್ಸವಿತುರ್ವರೇಣ್ಯಂಭರ್ಗೋ ದೇವಸ್ಯ ಧೀಮಹಿ । ಧಿಯೋಯೋನಃ ಪ್ರಚೋದಯಾತ್ ॥ ಹೀಗೆ ಮಂತ್ರವನ್ನು ಹೇಳಿ ಅಂಜಲಿಗತ ಜಲವನ್ನು ನೋಡಿ ಮಂತ್ರದ ಕೊನೆಯಲ್ಲಿ ಕಣ್ಣಿನ ಸಮಕ್ಕೆ ಕೈಯನ್ನೆತ್ತಿ ಶುದ್ಧವಾದ ನೀರಿನಲ್ಲಿ ಬೇರೆಬೇರೆ ಮೂರು ಸಲ ಜಲವನ್ನು ಗ್ರಹಿಸಿ ಅರ್ಘ್ಯವನ್ನು ಬಿಡಬೇಕು॥

ಪುನಃ ಪ್ರಾಣಾಯಾಮಮಾಡಿ, ಪ್ರಾಯಶ್ಚಿತ್ತಾರ್ಥಂ ಅರ್ಘ್ಯಪ್ರದಾನಂ ಕರಿಷ್ಯೇ ಎಂದು ಸಂಕಲ್ಪಿಸಿ ಪೂರ್ವದಂತೆ ಮಂತ್ರ ಹೇಳಿ ಒಂದಾವರ್ತಿ ಅರ್ಘ್ಯವನ್ನು ಕೊಡಬೇಕು.॥

ಅನಂತರ ಕೊತುಕೊಂಡು ಎರಡುಸಲ ಆಚಮನಮಾಡಿ ನಿಂತು ಹಸ್ತಗಳಿಂದ ಜಲವನ್ನು ಗ್ರಹಿಸಿ–ಓಂ ಭೂರ್ಭುವಸ್ಸುವಃ ಈ ಮಂತ್ರ ಹೇಳಿ ಆತ್ಮ ಪ್ರದಕ್ಷಿಣೆಮಾಡಿ ಕೂತು ಒಂದು ಸಲ ಆಚಮನಮಾಡಿ ನಿಂತು ದಕ್ಷಿಣ ಹಸ್ತವನ್ನು ಸೂರ್ಯನಿಗೆ ತೋರಿಸಿ |' ಅಸಾವಾದಿತ್ಯೋಬ್ರಹ್ಮ । ಈ ಮಂತ್ರ ಹೇಳಿ ಹೃದಯ ಸ್ಪರ್ಶಮಾಡಿ ಆತ್ಮೈಕ್ಯವೆಂದು ಭಾವಿಸಬೇಕು॥ ಆಮೇಲೆ ಕೂತುಕೊಂಡು ತಮ್ಮ ತಮ್ಮ ಪೂರ್ವಾಚಾರದಂತೆ ದೇವತೀರ್ಥದಿಂದ ಜಲ ತರ್ಪಣವನ್ನು ಮಾಡುವುದು ಸರ್ವಸಮ್ಮತವೆಂದು ತೋರುತ್ತೆ.

ಯಥಾಚಾರಂ ಗ್ರಹಾದೀನ್ ತರ್ಪಯೇತ್ ಎಂದು ಹೇಳಿದೆ॥ ತ್ರಿಕಾಲ ಸಂಧ್ಯೆಯಲ್ಲೂ ಆದಿತ್ಯಾದಿ ನವಗ್ರಹಗಳಿಗೆ–ಕೇಶವಾದಿ ದ್ವಾದಶ ಮೂರ್ತಿಗಳಿಗೆ

ಮತ್ತು ಯಮಾದಿ ಚತುರ್ದಶ ದೇವತೆಗಳಿಗೂ ತರ್ಪಣಮಾಡಿದರೆ ಇವರುಗಳಿಗೆ ಸಂತೋಷ ಉಂಟಾಗಿ ನಮ್ಮಗಳಿಗೆ ಸಮಸ್ತ ಕಷ್ಟಗಳಿಂದಲೂ ಬಿಡಗಡೆಮಾಡುವುದರಲ್ಲಿ ಸಂಶಯುವಿಲ್ಲ ||

ಓಂ ಆದಿತ್ಯಂ ತರ್ಪಯಾಮಿ.
" ಸೋಮಂ "
" ಅಂಗಾರಕಂ "
" ಬುಧಂ "
" ಬೃಹಸ್ಪತಿಂ "
ಓಂ ಶುಕ್ರಂ "
" ಶನೈಶ್ಚರಂ "
" ರಾಹುಂ "
" ಕೇತುಂ ತರ್ಪಯಾಮಿ

ಓಂ ಕೇಶವಂ ತರ್ಪಯಾಮಿ
" ನಾರಾಯಣಂ "
" ಮಾಧವಂ "
" ಗೋವಿಂದಂ "
" ವಿಷ್ಣುಂ "
ಓಂ ಮಧುಸೂದನಂ "
" ತ್ರಿವಿಕ್ರಮಂ "
" ವಾಮನಂ "
" ಶ್ರೀಧರಂ "
" ಹೃಷೀಕೇಶಂ "
" ಪದ್ಮನಾಭಂ "
" ದಾಮೋದರಂ ತರ್ಪಯಾಮಿ

ಓಂ ಯಮಂ ತರ್ಪಯಾಮಿ.
" ಧರ್ಮರಾಜಂ "
" ಮೃತ್ಯುಂ "
" ಅಂತಕಂ "
" ವೈವಸ್ವತಂ "
" ಕಾಲಂ "
" ಸರ್ವಭೂತಕ್ಷಯಂ "

ಓಂ ಔದುಂಬರಂ ತರ್ಪಯಾಮಿ
" ದಧ್ನಂ "
" ನೀಲಂ "
" ಪರಮೇಷ್ಠಿನಂ "
" ವೃಕೋದರಂ "
" ಚಿತ್ರಂ "
" ಚಿತ್ರಗುಪ್ತಂ "

ಬ್ರಹ್ಮಾರ್ಪಣಂ.

ಒಂದು ಸಲ ಆಚಮನ ಮಾಡಬೇಕು.

1. ಅನಂತರ ಶುದ್ಧವಾದ ಜಪಸ್ಥಾನವನ್ನು ಗಾಯತ್ರಿಯಿಂದ ಪ್ರೋಕ್ಷಿಸಿ ಮೊದಲು ಬರೆದಿರುವಂತೆ ಆಸನವನ್ನು ಹಾಕಿಕೊಂಡು ಅದರ ಮೇಲೆ ಪೂರ್ವಾಭಿಮುಖನಾಗಿ ನಿಂತು ||

(ಶ್ಲೋಕ) ಶುಕ್ಲಾಂಬರಧರಂವಿಷ್ಣುಂ | ಶಶಿವರ್ಣಂ ಚತುರ್ಭುಜಂ | ಪ್ರಸನ್ನವದನಂಧ್ಯಾಯೇತ್ | ಸರ್ವವಿಘ್ನೋಪಶಾಂತಯೇ || ಅಭೀಪ್ಸಿತಾರ್ಥ ಸಿದ್ಧ್ಯರ್ಥಂ | ಪೂಜಿತೋ ಯಸ್ಸುರೈರಪಿ | ಸರ್ವವಿಘ್ನಚ್ಛಿದೇತಸ್ಮೈ | ಗಣಾಧಿಪತಯೇನಮಃ || . (ಕೈಮುಷ್ಟಿಗಳಿಂದ ತಲೆಯ ಪಾರ್ಶ್ವಗಳನ್ನು ಮುಟ್ಟಿಕೊಳ್ಳಬೇಕು.)

(ಶ್ಲೋಕ) ಗುರುರ್ಬ್ರಹ್ಮಾ ಗುರುರ್ವಿಷ್ಣುಃ| ಗುರುರ್ದೇವೋ ಮಹೇಶ್ವರಃ| ಗುರುಸ್ಸಾಕ್ಷಾತ್‌ಪರಂಬ್ರಹ್ಮ ತಸ್ಮೈ ಶ್ರೀ ಗುರವೇನಮಃ || ಗುರವೇ ಸರ್ವ ಲೋಕಾನಾಂ | ಭಿಷಜೇ ಭವರೋಗಿಣಾಂ | ನಿಧಯೇ ಸರ್ವವಿದ್ಯಾನಾಂ | ದಕ್ಷಿಣಾಮೂರ್ತಯೇನಮಃ ||

ಆಬ್ರಹ್ಮಲೋಕದಾಶೇಷಾತ್ | ಆಲೋಕಾ ಲೋಕ ಪರ್ವತಾತ್ | ಯೇ ವಸಂತಿದ್ವಿಜಾದೇವಾಃ | ತೇಭ್ಯೋ ನಿತ್ಯಂ ನಮೋ ನಮಃ || ಈ ಮಂತ್ರಗಳನ್ನು ಹೇಳಿ ಗುರು-ದಕ್ಷಿಣಾಮೂರ್ತಿ-ದೇವ, ಬ್ರಾಹ್ಮಣರುಗಳನ್ನು ನಮಸ್ಕಾರ ಮಾಡಬೇಕು.

ಆಸನಮಂತ್ರಸ್ಯ || ಪೃಥಿವ್ಯಾಃ ಮೇರುಪೃಷ್ಠಋಷಿಃ || ಕೂರ್ಮೋದೇವತಾ-ಸುತಲಂಛಂದಃ-ಆಸನೇವಿನಿಯೋಗಃ | ಪೃಥ್ವಿ ತ್ವಯಾಧೃತಾಲೋಕಾಃ| ದೇವಿತ್ವಂ ವಿಷ್ಣುನಾಧೃತಾ | ತ್ವಂಚಧಾರಯಮಾಂದೇವಿ | ಪವಿತ್ರಂಕುರು ಚಾಸನಂ || ಇತಿ ಭೂಮಿಂಪ್ರಾರ್ಥ್ಯ ||

(ಶ್ಲೋಕ) ಅಪಸರ್ಪಂತು ಯೇಭೂತಾಃ | ಯೇಭೂತಾಃಭುವಿಸಂಸ್ಥಿತಾಃ| ಯೇ ಭೂತಾಃ ವಿಘ್ನಕರ್ತಾರಃ | ತೇ (ನಶ್ಯಂತು) ಗಚ್ಛಂತು ಶಿವಾಜ್ಞಯಾ || (ತೇಗಚ್ಛಂ ತ್ವಾಜ್ಞಯಾಹರೇಃ) ಇದರಿಂದ ಭೂತೋಚ್ಚಾಟನೆಯನ್ನು ಮಾಡಬೇಕು.

ಭೂರಾದಿ ಸಪ್ತವ್ಯಾಹೃತೀನಾಂ ಅತ್ರಿ; ಭೃಗು; ಕುತ್ಸ; ವಸಿಷ್ಠ; ಗೌತಮ; ಕಾಶ್ಯಪ, ಆಂಗೀರಸಾ ಋಷಯಃ | ಗಾಯತ್ರೀ ಉಷ್ಣಿಕ್ ಅನುಷ್ಟುಪ್ ಬೃಹತೀಪಂಙ್ಕ್ತೀ ತ್ರಿಷ್ಟುಪ್ ಜಗತೀ ಛಂದಾಂಸಿ | ಅಗ್ನಿ;

ವಾಯು, ಅರ್ಕ, ವಾಗೀಶ; ವರುಣೇಂದ್ರ, ವಿಶ್ವೇದೇವಾದೇವತಾಃ|| ಅಕಾರೋಬೀಜಂ-ಭರ್ಗಶ್ಶಕ್ತಿಃ-ಶಿರಸಿ ಋಷಿರ್ಬ್ರಹ್ಮಾ-ದೇವೀಗಾಯತ್ರೀಚ್ಛಂದಃS ಸವಿತಾ ಪರಮಾತ್ಮಾ ದೇವತಾ| ||

ಅನಂತರ ಯಥಾವಿಧಿ ಪೂರಕಾದಿ ಕ್ರಮದಿಂದ ಪ್ರಾಣಾಯಾಮವನ್ನು ನೂರು ಸಲ ಮಾಡಬೇಕು. (ಇದಕ್ಕೆ ಅಶಕ್ತರಾದವರು ಬಾಯಿಯಲ್ಲಿ ಮಂತ್ರ ವನ್ನು ಹೇಳಿ ಹತ್ತು ಪ್ರಾಣಾಯಾಮಗಳನ್ನು ಮಾಡಬೇಕು.)

ಮಮ ಉಪಾತ್ತ-ಪ್ರೀತ್ಯರ್ಥಂ-ಅಷ್ಟೋತ್ತರ ಶ ತ ಸ ಂ ಖ್ಯಾ ಕ ಂ ಗಾಯತ್ರೀಮಂತ್ರ ಜಪಂಕರಿಷ್ಯೆ || ಇದಕ್ಕೆ ಕಮ್ಮಿಯಾಗಿ ಜಪಮಾಡತಕ್ಕವರು ಆಯಾಯಾ ಸಂಖ್ಯೆಗಳನ್ನು ಉಚ್ಚರಿಸಿ ಸಂಕಲ್ಪಮಾಡಬೇಕು.

(ಈ ಸ್ಥಳದಲ್ಲಿ ಕೆಲವರು ಅಕ್ಷರನ್ಯಾಸ-ಪಾದನ್ಯಾಸ-ಮುದ್ರಾದಿವಿಧಿ-ಶಾಪವಿಮೋಚನವಿಧಿ ಇವುಗಳನ್ನು ಅನುಷ್ಠಾನ ಮಾಡುವ ಸಂಪ್ರದಾಯ ವನ್ನು ಇಟ್ಟುಕೊಂಡಿರುತ್ತಾರೆ. ಈ ನ್ಯಾಸಾದಿಗಳೆಲ್ಲಾ ಈ ವೈದಿಕ ಕರ್ಮ ದಲ್ಲಿ ಮಾಡಬೇಕಾದ್ದಿಲ್ಲಾ ಎಂಬುದಾಗಿ ಪರಿಭಾಷೆಯಲ್ಲಿ ವಿಸ್ತಾರವಾಗಿ ಬರೆದಿರುತ್ತೆ.

ಗಾಯತ್ರೀ ಜಪಸಂಖ್ಯಾದಿ ವಿಷಯಗಳನ್ನು ಪರಿಭಾಷೆಯಲ್ಲಿ ದಯವಿಟ್ಟು ನೋಡಿ.

ಸಂಕಲ್ಪಾನಂತರದಲ್ಲಿ ಆಯಾತು ಎಂಬ ಮಂತ್ರವನ್ನು ಹೇಳಿ ತನ್ನಲ್ಲಿ ಗಾಯತ್ರ್ಯಾದಿ ದೇವತಾವಾಹನವನ್ನು ಮಾಡಿಕೊಳ್ಳಬೇಕು.

(ಮಂತ್ರ) ಆಯಾತುವರದಾ ದೇವೀ ಅಕ್ಷರಂ ಬ್ರಹ್ಮಸಮ್ಮಿತಂ |

ಗಾಯತ್ರೀಂ ಛಂದಸಾಂ ಮಾತೇದಂ ಬ್ರಹ್ಮಜುಷಸ್ವನಃ | ಓಜೋಽಸಿ—

ಸಹೋಽಸಿ–ಬಲಮಸಿ–ಭ್ರಾಜೋಽಸಿ–ದೇವಾನಾಂ ಧಾಮನಾಮಾಸಿ–ವಿಶ್ವಮಸಿ ವಿಶ್ವಾಯುು ಸ್ಸರ್ವಮಸಿ ಸರ್ವಾಯುುರಭಿಭೂರೋಂ ಗಾಯತ್ರೀ ಮಾವಾಹ ಯಾಮಿ–ಸಾವಿತ್ರೀ ಮಾವಾಹಯಾಮಿ—ಸರಸ್ವತೀ ಮಾವಾಹಯಾಮಿ—ಸಾವಿತ್ರ್ಯಾ ಋಷಿರ್ವಿಶ್ವಾಮಿತ್ರೋದೈವೀ ಗಾಯತ್ರೀಛ್ಛಂದಸ್ಸವಿತಾ ಪರಮಾತ್ಮಾದೇವತಾ ||

ಆಂಧ್ರ ಸಂಪ್ರದಾಯದವರು ಹೇಳತಕ್ಕದ್ದು.

ಮಂತ್ರ || ಆಯಾತು ವರದಾದೇವೀ+ಮಾತೇದಂ ಬ್ರಹ್ಮಜುಷಸ್ವಮೇ || ಯದಹ್ನಾತ್ಕುರುತೇ ಪಾಪಂ ತದಹ್ನಾತ್ಪ್ರತಿಮುುಚ್ಯತೇ | ಯದ್ರಾತ್ರಿಯಾತ್ಕುರುತೇ ಪಾಪಂ ತದ್ರಾತ್ರಿಯಾತ್ಪ್ರತಿಮುುಚ್ಯತೇ | ಸರ್ವವರ್ಣೇ ಮಹಾದೇವಿ ಸಂಧ್ಯಾವಿದ್ಯೇ ಸರಸ್ವತಿ | ಅಜರೇ ಅಮರೇ ದೇವಿ ಸರ್ವದೇವಿ ನಮೋಸ್ತುತೇ || ಒಜೋಽಸಿ–ಸಹೋಽಸಿ+ಸರಸ್ವತೀ ಮಾವಾಹಯಾಮಿಛಂದ ಋಷೀನಾವಾಹಯಾಮಿ–ಶ್ರಿಯಮಾವಾಹಯಾಮಿ ಇತ್ಯಾವಾಹ್ಯ ||

ಗಾಯತ್ರೀಮಂತ್ರ ಜಪವನ್ನು ಗುರೂಪದೇಶದಂತೆ ಹಸ್ತಗತ ಪರ್ವಗಳಿಂದ ಕ್ರಮವಾಗಿ ಗಾಯತ್ರೀ ಮಂತ್ರದ ಮೂರು ಪಾದಗಳನ್ನು ಬೇರೆ ಬೇರೆ ನಿಲ್ಲಿಸಿ ಹೇಳಿ ಜಪಮಾಡಬೇಕು. ಈ ವಿಷಯಗಳೆಲ್ಲಾ ಪರಿಭಾಷೆಯಲ್ಲಿ ವಿಸ್ತಾರವಾಗಿರುತ್ತೆ.

ಮಂತ್ರ || ಓಂ ಭೂರ್ಭುವಸ್ಸುವಃ | ತತ್ಸವಿತುರ್ವರೇಣ್ಯಂ | ಭರ್ಗೋ

ದೇವಸ್ಯ ಧೀಮಹಿ । ಧಿಯೋಯೋನಃ ಪ್ರಚೋದಯಾತ್ ॥

ಈ ರೀತಿ ಹೇಳಿ ಜಪಸಂಖ್ಯಾ ಪೂರ್ತಿಯಾದನಂತರ ಮೂರು ಪ್ರಾಣಾಯಾಮವನ್ನುಮಾಡಿ ; ಮಮ ಉಪಾತ್ತ ಪ್ರೀತ್ಯರ್ಥಂ ಪ್ರಾತಸ್ಸಂಧ್ಯೋಪಸ್ಥಾನಂಕರಿಷ್ಯೆ ಎಂದು ಸಂಕಲ್ಪಿಸಿ ನಿಂತು ॥

→ ಮಂತ್ರ ॥ ಅದ್ಯಾನೋದೇವಸವಿತಃ ॥ ಪ್ರಜಾವತ್ಸಾವೀಸೌಭಗಂ । ಪರಾದುಷ್ಷಪ್ನಿಯಗ್ಂಸುವ । ವಿಶ್ವಾನಿದೇವಸವಿತಃ । ದುರಿತಾನಿಪರಾಸುವ । ಯದ್ಭದ್ರಂತನ್ಮ ಆಸುವ ॥

ಈ ಮಂತ್ರಾಂತದಲ್ಲಿ ಜಪಸ್ಥಾನವನ್ನು ಪ್ರೋಕ್ಷಿಸಿ ಆ ಸ್ಥಳವನ್ನು ಮುಟ್ಟಿ ತನ್ನ ಎದೆಯನ್ನು ಮುಟ್ಟಿಕೊಳ್ಳಬೇಕು.

→ ಮಂತ್ರ ॥ ದ್ರಾವಿಡರು ಹೇಳತಕ್ಕದ್ದು.

ಉತ್ತಮೇ ಶಿಖರೇ ದೇವಿ ಭೂಮ್ಯಾಂ ಪರ್ವತಮೂರ್ಧನಿ ॥ ಬ್ರಾಹ್ಮಣೇಭ್ಯೋಹ್ಯನುಜ್ಞಾನಂ ಗಚ್ಛದೇವಿ ಯಥಾಸುಖಂ ॥

ಆಂಧ್ರ ಸಂಪ್ರದಾಯದವರು ಹೇಳತಕ್ಕದ್ದು.

→ ಮಂತ್ರ ॥ ಉತ್ತಮೇ ಶಿಖರೇಜಾತೇ । ಭೂಮ್ಯಾಂ.... ಬ್ರಾಹ್ಮಣೇಭ್ಯೋಽಭ್ಯನುಜ್ಞಾತಾ.... ಯಥಾಸುಖಂ ॥ ಈ ಮಂತ್ರವನ್ನು ಹೇಳಿ ಗಾಯಿತ್ರೀ ದೇವತೆಯನ್ನು ಯಥಾಸ್ಥಾನ ಮಾಡುವುದು.

→ ಉಪಸ್ಥಾನಮಂತ್ರ—ಮಿತ್ರಸ್ಯ ಚರ್ ಷಣೀ ಧೃತಶ್ರವೋದೇವಸ್ಯ

ಸಾನಸಿಂ । ಸತ್ಯಂ ಚಿತ್ರಶ್ರವಸ್ತಮಂ । ಮಿತ್ರೋಜನಾನ್ ಯಾತಯತಿ ಪ್ರಜಾನನ್ಮಿತ್ರೋದಾಧಾರ ಪೃಥಿವೀ ಮುತದ್ಯಾಂ । ಮಿತ್ರಃಕೃಷ್ಟೀರನಿಮಿಷಾಽಭಿಚಷ್ಟೇ ಸತ್ಯಾಯ ಹವ್ಯಂ ಘೃತವದ್ವಿಧೇಮ । ಪ್ರಸಮಿತ್ರಮರ್ತೋ ಅಸ್ತು ಪ್ರಯ ಸ್ವಾನ್ಯಸ್ತ ಆದಿತ್ಯ ಶಿಕ್ಷತಿವ್ರತೇನ । ನಹನ್ಯತೇನಜೀಯತೇ ತ್ವೋತೋ ನೈನಮಗ್ಂಹೋ ಅಶ್ನೋತ್ಯಂತಿ ತೋನದೂರಾತ್ ॥ ಈ ಮಂತ್ರ ಹೇಳಿ ॥ ಸಂಧ್ಯಾಯೈನಮಃ ಪೂರ್ವಕ್ಕೆ ಕೈಮುಗಿಯಬೇಕು ॥ ಸಾವಿತ್ರ್ಯೈನಮಃ ದಕ್ಷಿಣಕ್ಕೆ ಕೈಮುಗಿಯಬೇಕು ॥ ಗಾಯತ್ರ್ಯೈನಮಃ ಪಶ್ಚಿಮಕ್ಕೆ ಕೈಮುಗಿಯಬೇಕು ॥ ಸರಸ್ವತ್ಯೈನಮಃ ಉತ್ತರಕ್ಕೆ ಕೈಮುಗಿಯಬೇಕು ॥ ಸರ್ವಾಭ್ಯೋ ದೇವತಾಭ್ಯೋನಮಃ ॥ ಕಾಮೋಽಕಾರ್ಷೀ ನ್ಮನ್ಯುರಕಾರ್ಷೀನ್ನಮೋನಮಃ ॥ ಈ ಎರಡು ಮಂತ್ರಗಳನ್ನು ಹೇಳಿ ನಮಸ್ಕಾರ ಮಾಡಬೇಕು ॥

ಅಭಿವಾದಯೆ ॥ ಅಥವಾ ಚತುಸ್ಸಾಗರ ಪರ್ಯಂತಂ ಸಂಪ್ರದಾಯಾನುಸಾರ ಸ್ವಪ್ರವರವನ್ನು ಹೇಳಿ ಕಿವಿಯಿಂದ ಕೈಗಳನ್ನು ತನ್ನ ಕಾಲಿನವರಗೆ ಇಳಿಸಿ ಭೂಮಿಯನ್ನು ಮುಟ್ಟಬೇಕು ॥

(ಹೆಚ್ಚು ಅವಕಾಶವಿಲ್ಲದ ಕಾಲದಲ್ಲಿ ಇಷ್ಟು ಮಾತ್ರ ಮಾಡಿ ; ಯಸ್ಯ ಸ್ಮೃತ್ಯಾಚ ಕರ್ಮಸಮಾಪ್ತಿ ಮಾಡಿದರೂ ಸಾಕಾಗಿರುತ್ತೆ)

ಅವಕಾಶವಿದ್ದಲ್ಲಿ ॥ ಪ್ರಾಚ್ಯೈದಿಶೇನಮಃ ಪೂರ್ವದಿಕ್ಕಿಗೆ ನಮಸ್ಕಾರ ॥ ದಕ್ಷಿಣಾಯೈ ದಿಶೇನಮಃ ದಕ್ಷಿಣಕ್ಕೆ ॥ ಪ್ರತೀಚ್ಯೈ ದಿಶೇನಮಃ ಪಶ್ಚಿಮಕ್ಕೆ ॥ ಉದೀಚ್ಯೈ ದಿಶೇನಮಃ ಉತ್ತರಕ್ಕೆ ನಮಸ್ಕಾರ ಮಾಡಬೇಕು ॥ ಊರ್ಧ್ವಾಯೈನಮಃ ಮೇಲಕ್ಕೆ ಕೈಮುಗಿಯಬೇಕು. ಅಧರಾಯೈನಮಃ ಕೆಳಕ್ಕೆ ।

ಅಂತರಿಕ್ಷಾಯನಮಃ ಮೇಲಕ್ಕೆ । ಭೂಮ್ಯೈನಮಃ ಕೆಳಕ್ಕೆ । ಬ್ರಹ್ಮಣೇನಮಃ ವಿಷ್ಣವೇನಮಃ–ಯಮಾಯನಮಃ ॥ ಹೇಳಿ ದಕ್ಷಿಣಾಭಿಮುಖವಾಗಿ ನಿಂತು।

ಮಂತ್ರ॥ ಯಮಾಯ ಧರ್ಮರಾಜಾಯ ಮೃತ್ಯವೇಚಾಂತಕಾಯಚ । ವೈವಸ್ವತಾಯ ಕಾಲಾಯ ಸರ್ವಭೂತಕ್ಷಯಾಯಚ । ಔದುಂಬರಾಯ ದಧ್ನಾಯ ನೀಲಾಯ ಪರಮೇಷ್ಠಿನೇ । ವೃಕೋದರಾಯ ಚಿತ್ರಾಯ ಚಿತ್ರ ಗುಪ್ತಾಯವೈನಮಃ ॥ ಮಂತ್ರ ಹೇಳಿ ನಮಸ್ಕರಿಸಿ । ಪಶ್ಚಿಮಾಭಿಮುಖವಾಗಿ ನಿಂತು ।

→ ಮಂತ್ರ ॥ ಋತಗ್ಂ ಸತ್ಯಂ ಪರಂ ಬ್ರಹ್ಮಪುರುಷಂ ಕೃಷ್ಣಪಿಂಗಲಮ್ । ಊರ್ಧ್ವರೇತಂ ವಿರೂಪಾಕ್ಷಂ ವಿಶ್ವರೂಪಾಯವೈ ನಮೋ ನಮಃ ॥

ಈ ಮಂತ್ರವನ್ನು ಹೇಳಿ ನಮಸ್ಕರಿಸಿ ಉತ್ತರಮುಖವಾಗಿ ನಿಂತು ನರ್ಮದಾಯೈನಮಃ ಪ್ರಾತಃ ನರ್ಮದಾಯೈ ನಮೋನಿಶಿ । ನಮೋಽಸ್ತು ನರ್ಮದೇತುಭ್ಯಂ । ತ್ರಾಹಿಮಾಂ ವಿಷಸರ್ಪತಃ ॥ ಈ ಮಂತ್ರವನ್ನು ಹೇಳಿ ನಮಸ್ಕರಿಸಿ । ಪೂರ್ವಾಭಿಮುಖವಾಗಿ ನಿಂತು ಜರತ್ಕಾರೋರ್ಜ್ಜರ–ತ್ಕಾರ್ಯಾಂ ಸಮುತ್ಪನ್ನೋ ಮಹಾಯಶಾಃ । ಆಸ್ತೀಕಸ್ಸತ್ಯಸಂಧೋಮಾಂ ಪನ್ನಗೇಭ್ಯೋಽಭಿರಕ್ಷತು ॥ ಸರ್ಪಾಪಸರ್ಪಭದ್ರಂತೇ ದೂರಂಗಚ್ಛ ಮಹಾಯಶಾಃ । ಜನಮೇಜಯಸ್ಯ ಯಜ್ಞಾನ್ತೇ ಆಸ್ತೀಕವಚನಂ ಸ್ಮರ್ ॥ ನಮಸ್ಸವಿತ್ರೇ ಜಗದೇಕಚಕ್ಷುಷೇ ಜಗತ್ಪ್ರಸೂತಿಸ್ಥಿತಿ ನಾಶಹೇತವೇ । ತ್ರಯೀಮಯಾಯ ತ್ರಿಗುಣಾತ್ಮ ಧಾರಿಣೇ ವಿರಿಂಚಿ ನಾರಾಯಣ ಶಂಕರಾತ್ಮನೆ ॥ ಧ್ಯೇಯಸ್ಸದಾ ಸವಿತೃ ಮಂಡಲ ಮಧ್ಯವರ್ತೀನಾರಾಯಣ ಸ್ಸರಸಿಜಾಸನ ಸನ್ನಿವಿಷ್ಟಃ। ಕೇಯೂರವಾನ್ಮಕರ ಕುಂಡಲವಾನ್ ಕಿರೀಟೀಹಾರೀ ಹಿರಣ್ಮಯವಪುರ್ಧೃತಶಂಖಚಕ್ರಃ ॥ ಶಂಖಚಕ್ರ ಗದಾಪಾಣೇ ದ್ವಾರಕಾ ನಿಲಯಾಚ್ಯುತ । ಗೋವಿಂದ ಪುಂಡರೀಕಾಕ್ಷ ರಕ್ಷ ಮಾಂ ಶರಣಾಗತಂ ॥ ಆಕಾಶಾತ್ಪತಿತಂ ತೋಯಂ ಯಥಾಗಚ್ಛತಿ ಸಾಗರಂ । ಸರ್ವದೇವ ನಮಸ್ಕಾರಃ ಕೇಶವಂ ಪ್ರತಿಗಚ್ಛತಿ ॥ ಈ ಮಂತ್ರಗಳನ್ನು ಹೇಳಿ ಸೂರ್ಯನಿಗೆ ನಮಸ್ಕಾರ ಮಾಡಬೇಕು ॥

ಅಭಿವಾದಯೆ ಚತುಸ್ಸಾಗರಪರ್ಯಂತ್ತ–ಪೂರ್ವದಂತೆ ಸ್ವಪ್ರವರವನ್ನು ಹೇಳಿ ನಮಸ್ಕರಿಸಿ ಕೂತುಕೊಂಡು ||

ಯಸ್ಯಸ್ಮೃತ್ಯಾ ಚ ನಾಮೋಕ್ತ್ಯಾ ತಪಸ್ಸಂಧ್ಯಾ ಕ್ರಿಯಾದಿಷು | ನ್ಯೂನಂ ಸಂಪೂರ್ಣತಾಂ ಯಾತಿ ಸದ್ಯೋವಂದೇ ತಮಚ್ಯುತಂ | ಮಂತ್ರ ಹೀನಂ ಕ್ರಿಯಾಹೀನಂ ಭಕ್ತಿಹೀನಂ ಮಹೇಶ್ವರ (ಜನಾರ್ದನ) ಯತ್ಕೃತಂತು ಮಯಾದೇವ ಪರಿಪೂರ್ಣಂ ತದಸ್ತುತೇ || ಅನೇನ ಪ್ರಾತಸ್ಸಂಧ್ಯಾವಂದನೇನ ಭಗವಾನ್ ಸರ್ವಾತ್ಮಕಃ | ವಾಸುದೇವಃ ಪ್ರೀಣಾತು || ಎಂದು ನೀರನ್ನು ಬಿಡುವುದು ||

ಮಧ್ಯೇಮಂತ್ರ ತಂತ್ರಸ್ವರವರ್ಣ ವಿಧಿವಿಪರ್ಯಾಸ ನ್ಯೂನಾತಿರಿಕ್ತ ಲೋಪದೋಷ ಪ್ರಾಯಶ್ಚಿತ್ತಾರ್ಥಂ ನಾಮತ್ರಯ ಮಂತ್ರಜಪಂ ಕರಿಷ್ಯೆ || ಅಚ್ಯುತಾಯನಮಃ–ಅನಂತಾಯನಮಃ–ಗೋವಿಂದಾಯನಮಃ|| ಈ ಮೂರು ನಾಮಗಳನ್ನು ಮೂರು ಸಲ ಎಣಿಸಿ ಹೇಳಬೇಕು || ಕಾಯೇನ ವಾಚಾ ಮನಸೇಂದ್ರಿಯೈರ್ವಾ ಬುಧ್ಯಾತ್ಮನಾವಾ ಪ್ರಕೃತೇಸ್ಸ್ವಭಾವಾತ್ || ಕರೋಮಿ ಯದ್ಯತ್ಸಕಲಂ ಪರಸ್ಮೈ ನಾರಾಯಣಾಯೇತಿ ಸಮರ್ಪಯಾಮಿ || ಎರಡು ಸಲ ಆಚಮನವನ್ನು ಮಾಡಬೇಕು || ಪ್ರಾತಃಸಂಧ್ಯಾವಂದನಂ ಸಂಪೂರ್ಣಂ||

ಆಂಧ್ರ ಸಂಪ್ರದಾಯ ಪ್ರಾತಸ್ಸಂಧ್ಯೆಯಲ್ಲಿ ಮಾತ್ರ ಹೇಳಬಹುದಾದ ಮಂತ್ರ||

→ ನಮಃಪ್ರಾಚ್ಯೈದಿಶೇಯಾಶ್ಚ ದೇವತಾ ಏತಸ್ಯಾಂ ಪ್ರತಿವ ಸಂತ್ಯೇತಾಭ್ಯಶ್ಚ ನಮೋನಮೋ ದಕ್ಷಿಣಾಯ್ಯೆದಿಶೇಯಾಶ್ಚ ದೇವತಾಏತಸ್ಯಾಂ ಪ್ರತಿವಸಂತ್ಯೇತಾಭ್ಯಶ್ಚ ನಮೋನಮಃ ಪ್ರತೀಚ್ಯೈದಿಶೇಯಾಶ್ಚ ದೇವತಾ ಏತ ಸ್ಯಾಂ ಪ್ರತಿವಸಂತ್ಯೇತಾಭ್ಯಶ್ಚ ನಮೋನಮ ಉದೀಚ್ಯೈ ದಿಶೇಯಾಶ್ಚದೇವತಾ

ಏತಸ್ಯಾಂಪ್ರತಿವಸಂತ್ಯೈತಾಭ್ಯಶ್ಚ ನಮೋನಮ ಊರ್ಧ್ವಾಯೈ ದಿಶೇಯಾಶ್ಚ ದೇವತಾ ಏತಸ್ಯಾಂ ಪ್ರತಿವಸಂತ್ಯೈತಾಭ್ಯಶ್ಚ ನಮೋನಮೋ ಧರಾಯೈದಿಶೇ ಯಾಶ್ಚ ದೇವತಾ ಏತಸ್ಯಾಂ ಪ್ರತಿವಸಂತ್ಯೈತಾಭ್ಯಶ್ಚ ನಮೋನಮೋಽವಾಂತರಾಯೈ ದಿಶೇಯಾಶ್ಚ ದೇವತಾ ಏತಸ್ಯಾಂ ಪ್ರತಿವಸಂತ್ಯೈತಾಭ್ಯಶ್ಚ ನಮೋ ನಮೋ ಗಂಗಾಯಮುನಯೋರ್ಮಧ್ಯೇಯೇ ವಸಂತಿತೇಮೇ ಪ್ರಸನ್ನಾತ್ಮಾನಶ್ಚಿರಂಜೀವಿತಂ ವರ್ಧಯಂತಿ ನಮೋ ಗಂಗಾಯಮುನಯೋರ್ಮುನಿಭ್ಯಶ್ಚ ನಮೋ ನಮೋ ಗಂಗಾಯಮುನಯೋರ್ಮುನಿಭ್ಯಶ್ಚನಮಃ ॥ ಈ ಮಂತ್ರಗಳಿಂದ ನಮಸ್ಕಾರಗಳನ್ನು ಮಾಡಬೇಕು.

→ ಸಂಮಾಸಿಂಚನ್ತು ಮರುತ ಸ್ಸಮಿಂದ್ರಸ್ಸಂಬೃಹಸ್ಪತಿಃ । ಸಂಮಾಯಮಗ್ನಿ ಸ್ಸಿಂಚತ್ವಾಯುಷಾಚ ಬಲೇನ ಚಾಯುಷ್ಮನ್ತಂ ಕರೋತುಮಾ॥ ಈ ಮಂತ್ರವನ್ನು ಹೇಳಿ ಪ್ರಾರ್ಥನೆ ಮಾಡಿಕೊಳ್ಳಬಹುದು ॥ ಹೀಗೆ ಅವರವರ ಸಂಪ್ರದಾಯದಂತೆ ಉಪಸ್ಥಾನಮಾಡಿ ಆಚಮನ–ಯಸ್ಯಸ್ಮೃತ್ಯೇತ್ಯಾದಿ ಸಂಧ್ಯಾಕರ್ಮ ಸಮಾಪ್ತಿಮಾಡಬೇಕು.

ಮಾಧ್ಯಾಹ್ನಿಕ ಸಂಧ್ಯಾವಂದನ ಪ್ರಯೋಗ । ಇದನ್ನು ಪ್ರಾತಸ್ಸಂಧ್ಯಾವಂದನದಂತೆ ಮಾಡಬೇಕಾದ ಕ್ರಮವನ್ನು ಸೂಚಿಸಿ ವಿಶೇಷ ಮಂತ್ರಗಳನ್ನು ಮಾತ್ರ ಬರೆಯುತ್ತೇವೆ.

ಪಾದೌಪ್ರಕ್ಷಾಳ್ಯ ದ್ವಿರಾಚಮ್ಯ । ಅಪವಿತ್ರಃ ಪವಿತ್ರೋವಾ–ಆಚಮ್ಯ ಪ್ರಾಣಾನಾಯಮ್ಯ–ಮಮ ಉಪಾತ್ತ–ಮಾಧ್ಯಾಹ್ನಿಕ ಸಂಧ್ಯಾಮುಪಾಸಿಷ್ಯೇ–ಪುಂಡ್ರವನ್ನು ಧರಿಸದಿದ್ದರೆ–ನೀರಿನಿಂದ ಊರ್ಧ್ವ-ತ್ರಿಪುಂಡ್ರಗಳನ್ನು ಮಾಡಿ ॥

ಮಂತ್ರ ॥ ಆಪಃಪುನಂತು ಪೃಥಿವೀಂ ಪೃಥಿವೀ ಪೂತಾಪುನಾತುಮಾಂ । ಪುನಂತು ಬ್ರಹ್ಮಣಸ್ಪತಿರ್ಬ್ರಹ್ಮಪೂತಾಪುನಾತುಮಾಂ । ಯದುಚ್ಛಿಷ್ಟಮ ಭೋಜ್ಯಂಯದ್ವಾದುಶ್ಚರಿತಂ ಮಮ । ಸರ್ವಂ ಪುನಂತುಮಾಮಾಪೋಽಸ ತಾಂಚ ಪ್ರತಿಗ್ರಹಗ್ಂ ಸ್ವಾಹಾ ॥ ಹಸ್ತಗತ ಜಲವನ್ನು ಪ್ರಾಶನಮಾಡಿ ಆಚಮನ ಮಾಡಬೇಕು. ॥

→ ದಧಿಕ್ರಾವ್ಣ್ಣೋ ಅಕಾರಿಷಂ–ಆಪೋಹಿಷ್ಠಾ ಮಯೋಭುವಃ ॥ ದ್ರುಪದಾದಿವೇನ್ಮು ಮುಚಾನಃ ॥ ಆಚಮನ ॥ ಪ್ರಾಣಾನಾಯಮ್ಯ ಮಮ ಉಪಾತ್ತ ಮಾಧ್ಯಾಹ್ನಿಕ ಸಂಧ್ಯಾರ್ಘ್ಯಪ್ರದಾನಂ ಕರಿಷ್ಯೇ ॥ ನಿಂತು ಒಂದು ಸಲ ಅರ್ಘ್ಯಪ್ರದಾನ ಮಾಡಬೇಕು. ॥

ಆಂಧ್ರ ಸಂಪ್ರದಾಯ ಮಂತ್ರ ॥ ಹಗ್ಂಸಶ್ಶುಚಿಷದ್ವಸು ರನ್ತರಿಕ್ಷ ಸದ್ಧೋತಾವೇ ದಿಷದತಿಥಿರ್ದುರೋಣಸತ್ । ನೃಷದ್ವರ ಸದೃತ ಸದ್ವ್ಯೋ ಮಸದಬ್ಜಾ ಗೋಜಾ ಋತಜಾ ಅದ್ರಿಜಾ ಋತಂ ಬೃಹತ್ ॥ ಇದರಿಂದ ಕೆಲವರು ಮೊದಲನೇ ಅರ್ಘ್ಯವನ್ನು ಕೊಡುತ್ತಾರೆ ॥ ಪುನಃ ಪ್ರಾಣಾನಾ ಯಮ್ಯ–ಮಮ ಉಪಾತ್ತ–ಮಾಧ್ಯಾಹ್ನಿಕ ಸಂಧ್ಯಾಯಾಃ ಕಾಲಾತೀತ ದೋಷಪ್ರಾಯಶ್ಚಿತ್ತಾರ್ಥಂ ಅರ್ಘ್ಯಪ್ರದಾನಂ ಕರಿಷ್ಯೇ ॥ ಗಾಯತ್ರಿಯಿಂದ

ಒಂದು ಅರ್ಘ್ಯವನ್ನು ಕೊಟ್ಟು ಕೂತುಕೊಂಡು ಒಂದು ಸಲ ಆಚಮನ ಮಾಡಿ ನಿಂತು ಜಲದಿಂದ ಆತ್ಮಪ್ರದಕ್ಷಿಣೆಮಾಡಿ ಕೂತು ಆಚಮನಮಾಡಿ ನಿಂತು ಆತ್ಮಧ್ಯಾನವನ್ನು ಮಾಡಿ ಕೂತು ಸಂಪ್ರದಾಯಾನುಸಾರ ತರ್ಪಣಗಳನ್ನು ಮಾಡಿ ಗಾಯತ್ರೀ ಜಪಮಾಡತಕ್ಕದ್ದು.

ಪ್ರಾತಃಸಂಧ್ಯೆಯಂತೆ ಪ್ರಾಣಾಯಾಮ–ಮಮ ಉಪಾತ್ತ ಮಾಧ್ಯಾಹ್ನಿಕ ಸಂಧ್ಯಾ ಗಾಯತ್ರಿ ಮಂತ್ರ ಜಪಂ ಕರಿಷ್ಯೆ || ಆಯಾತು–ಅವರವರ ಸಂಪ್ರದಾಯ ಪ್ರಕಾರ ಗಾಯತ್ರ್ಯಾದ್ಯಾವಾಹನೆ ಮಾಡಿ ಅವಕಾಶವಿದ್ದಷ್ಟು ಗಾಯತ್ರೀ ಜಪಮಾಡಿ ಮೂರು ಪ್ರಾಣಾಯಾಮ ಮಾಧ್ಯಾಹ್ನಿಕ ಸಂಧ್ಯೋಪಸ್ಥಾನಂ ಕರಿಷ್ಯೆ–ಎಂದು ಸಂಕಲ್ಪಿಸಿ ಎದ್ದು ನಿಂತು–ಅದ್ಯಾನೋ ದೇವಸವಿತಃ ಉತ್ತಮೇ ಮಾಡಿ ||

ಉಪಸ್ಥಾನ ಮಂತ್ರ || ಆಸತ್ಯೇನ ರಜಸಾ ವರ್ತಮಾನೋ ನಿವೇಶಯನ್ನಮೃತಂ ಮರ್ತ್ಯಂಚ | ಹಿರಣ್ಯಯೇನ ಸವಿತಾರಥೇನಾ ದೇವೋಯಾತಿ ಭುವನಾ ವಿಪಶ್ಯನ್ | ಉದ್ವಯಂ ತಮಸಸ್ಪರಿಪಶ್ಯಂತೋ ಜ್ಯೋತಿರುತ್ತರಮ್ | ದೇವಂ ದೇವತ್ರಾ ಸೂರ್ಯ ಮಗನ್ಮಜ್ಯೋತಿ ರುತ್ತಮಮ್ | ಉದುತ್ಯಂ ಜಾತವೇದಸಂ ದೇವಂ ವಹನ್ತಿ ಕೇಶವಃ | ದೃಶೇ ವಿಶ್ವಾಯ ಸೂರ್ಯಂ | ಚಿತ್ರಂ ದೇವಾ ನಾಮುದಗಾದನೀಕಂ ಚಕ್ಷುರ್ಮಿತ್ರಸ್ಯ ವರುಣ ಸ್ಯಾಗ್ನೇಃ ಆಪ್ರಾದ್ಯಾವಾ ಪೃಥಿವೀ ಅಂತರಿಕ್ಷಗ್‌ಂ ಸೂರ್ಯ ಆತ್ಮಾಜಗತ

ಸ್ತ್ರಸ್ಥುಷಶ್ಚ । ತಚ್ಚಕ್ಷುರ್ದೇವಹಿತಂ ಪುರಸ್ತಾಚ್ಛುಕ್ರಮುಚ್ಚರತ್ । ಪಶ್ಯೇವು ಶರದಶ್ಶತಂ ಜೀವೇಮ ಶರದಶ್ಶತಂ ನಂದಾವು ಶರದಶ್ಶತಂ ವೋದಾವು ಶರದಶ್ಶತಂ ಭವಾವುಶರದಶ್ಶತಗ್ಂ ಶೃಣವಾವು ಶರದಶ್ಶತಂ ಪ್ರಬ್ರವಾವು ಶರದಶ್ಶತವು ಜೀತಾಸ್ಸ್ಯಾವುಶರದ ಶ್ಶತಂಜ್ಯೋಕ್ಚಸೂರ್ಯಂದೃಶೇ ॥ ಈ ವುಂತ್ರಗಳ ಕೊನೆಯಲ್ಲಿ ಸೂರ್ಯನ ಕಣ್ಣುಮಾಡಿಕೊಂಡು ಬಲದ ಕಣ್ಣಿನಿಂದ ಸೂರ್ಯನನ್ನು ನೋಡಬೇಕು.॥ ಯ ಉದಗಾನ್ಮಹತೋರ್ಣವಾದ್ವಿ ಭ್ರಾಜಮಾನ ಸ್ಸರಿರಸ್ಯ ಮಧ್ಯಾತ್ಸಮಾ ವೃಷಭೋಲೋಹಿತಾಕ್ಷ ಸೂರ್ಯೋವಿಪಶ್ಚಿನ್ಮನಸಾಪುನಾತು ॥ ಸಂಧ್ಯಾಯೈನಮಃ ಇತ್ಯಾದಿ ಪ್ರಾತಸ್ಸಂಧ್ಯೆಯಂತೆ ಮಾಡಿ ಯಸ್ಯಸ್ಮೃತ್ಯಾಚಮಾಧ್ಯಾಹ್ನಿಕಸಂಧ್ಯಾವಂದನೇನ ಇಷ್ಟು ಮಾತ್ರ ವಿಶೇಷ- ಆಚಮನ ಮಾಡಬೇಕು ॥

ಸಾಯಂಸಂಧ್ಯಾವಂದನ ಪ್ರಯೋಗ । ಇದನ್ನೂ ಸಹ ಪ್ರಾತಸ್ಸಂಧ್ಯಾವಂದನ ಕ್ರಮದಂತೆ ಎಲ್ಲವನ್ನೂ ಮಾಡಬೇಕು । ಸಾಯಂಸಂಧ್ಯಾ ಮಂತ್ರವನ್ನು ಮಾತ್ರ ಬರೆಯುತ್ತೇವೆ. ಸಾಯಂಸಂಧ್ಯಾಮುಪಾಸಿಷ್ಯೇ-ಎಂದು ಸಂಕಲ್ಪ ಮಾಡಬೇಕು. ಜಲಪ್ರಾಶನಮಂತ್ರ ॥ ಅಗ್ನಿಶ್ಚಮಾಮನ್ಯುಶ್ಚಮನ್ಯುಪತಯಶ್ಚ ಮನ್ಯುಕೃತೇಭ್ಯಃ । ಪಾಪೇಭ್ಯೋ ರಕ್ಷನ್ತಾಮ್ । ಯದಹ್ನಾ ಪಾಪಮಕಾರ್ಷಂ । ಮನಸಾ ವಾಚಾ ಹಸ್ತಾಭ್ಯಾಂ । ಪದ್ಭ್ಯಾಮುದರೇಣಶಿಶ್ನಾ । ಅಹಸ್ತದ

ವಲುಂಪತು । ಯತ್ಕಿಂಚ ದುರಿತಂಮಯಿ। ಇದಮಹಂ ಮಾಮಮೃತಯೋನೌ।
ಸತ್ಯೇಜ್ಯೋತಿಷಿಜುಹೋಮಿ ಸ್ವಾಹಾ॥ ಸಾಯಂಸಂಧ್ಯಾರ್ಘ್ಯಪ್ರದಾನಂ ಕರಿಷ್ಯೆ॥

ಪಶ್ಚಿಮಾಭಿಮುಖವಾಗಿ ಕೂತು ಶುದ್ಧವಾದ ಭೂಮಿಯಲ್ಲಿ ಪ್ರೋಕ್ಷಿಸಿ ಮೂರು ಅರ್ಘ್ಯಪ್ರದಾನವನ್ನು ಮಾಡಿ–ಸಾಯಂಸಂಧ್ಯಾ ಕಾಲಾತೀತ ಪ್ರಾಯ ಶ್ಚಿತ್ತಾರ್ಥಂ ಎಂದು ಸಂಕಲ್ಪಿಸಿ ಇನ್ನೊಂದು ಅರ್ಘ್ಯವನ್ನು ಕೊಟ್ಟು ಪೂರ್ವ ದಂತೆ ಪ್ರದಕ್ಷಿಣ–ಆತ್ಮಧ್ಯಾನ–ತರ್ಪಣಗಳನ್ನು ಮಾಡಿ। ಸಾಯಂಸಂಧ್ಯಾ ಗಾಯತ್ರೀ ಮಂತ್ರ ಜಪವನ್ನು ಪಶ್ಚಿಮಾಭಿಮುಖವಾಗಿ ಕುಳಿತು ಮಾಡ ಬೇಕು.॥ ಅನಂತರ ಸಾಯಂ ಸಂಧ್ಯೋಪಸ್ಥಾನಂ ಕರಿಷ್ಯೆ ಎಂದು ಸಂಕಲ್ಪ ಮಾಡಿ ನಿಂತು–ಅದ್ಯಾನಃ–ಉತ್ತಮೇ–ಮಾಡಿ–ಪಶ್ಚಿಮಾಭಿಮುಖನಾಗಿ ನಿಂತು ಉಪಸ್ಥಾನ ಮಂತ್ರ ॥

→ ಇಮಂಮೇ ವರುಣಶ್ರುಧೀ ಹವಮದ್ಯಾಚಮೃಡಯ । ತ್ವಾಮ ವಸ್ಯುರಾಚಕೇ । ತತ್ತ್ವಾಯಾಮಿ ಬ್ರಹ್ಮಣಾವಂದ ಮಾನಸ್ತದಾಶಾಸ್ತೇ ಯಜಮಾನೋ ಹವಿರ್ಭಿಃ । ಅಹೇಡಮಾನೋ ವರುಣೇ ಹಬೋಧ್ಯುರುಶಗ್ಂ ಸಮಾನ ಆಯುಃ ಪ್ರಮೋಷೀಃ ॥ ಯಚ್ಚಿದ್ಧಿತೇ ವಿಶೋಯಥಾ ಪ್ರದೇವ ವರುಣವ್ರತಮ್ । ಮಿನೀಮಸಿದ್ಯವಿದ್ಯವಿ । ಯತ್ಕಿಂಚೇದಂ ವರುಣದೈವ್ಯೇ ಜನೇಽಭಿದ್ರೋಹಂ ಮನುಷ್ಯಾಶ್ಚರಾಮಸಿ । ಅಚಿತ್ತೀಯತ್ತವ ಧರ್ಮಾಯು ಯೋಪಿಮ ಮಾನಸ್ತಸ್ಮಾದೇನಸೋ ದೇವರೀರಿಷಃ । ಕಿತವಾಸೋ ಯದ್ರಿರಿ ಪುರ್ನ ದೀವಿಯದ್ವಾಘಾ ಸತ್ಯಮುತಯನ್ನವಿದ್ಮ। ಸರ್ವಾತಾವಿಷ್ಯ ಶಿಥಿರೇವ ದೇವಾಥಾತೇಸ್ಯಾಮ ವರುಣಪ್ರಿಯಾಸಃ ॥ ಸಂಧ್ಯಾಯೈನಮಃ ಇತ್ಯಾದಿ

ಪಶ್ಚಿಮದಿಕ್ಕಿನಿಂದ ಮೊದಲುಮಾಡಿ ಯಸ್ಯಸ್ಮೃತ್ಯಾದಿ ಸಾಯಂಸಂಧ್ಯಾ
ವಂದನೇನ ಎಂದು ಸಂಧ್ಯಾಕರ್ಮಸಮಾಪ್ತಿ ||

ಸಮಿದಾಧಾನ ಪ್ರಯೋಗ

ಸ್ನಾನಮಾಡಿ ಶುದ್ಧವಾದ ಕೌಪೀನ ವಸ್ತ್ರಗಳನ್ನು ಧರಿಸಿ ಕಾಲು
ತೊಳೆದು ಎರಡು ಸಲ ಆಚಮನಮಾಡಿ ಸಂಧ್ಯಾವಂದನಮಾಡಿ ಶುದ್ಧವಾದ
ಸ್ಥಳದಲ್ಲಿ ಅಗ್ನಿಯನ್ನಿಟ್ಟುಕೊಂಡು ಪ್ರೋಕ್ಷಿಸಿದ ಸೌದೆಹಾಕಿ ಹತ್ತಿಸಿ ಗುಡ್ಡೆ
ಮಾಡಿ ಶುದ್ಧೋದಕವನ್ನು-ಹನ್ನೆರಡು ಸಮಿತ್ತನ್ನು-ಇಟ್ಟುಕೊಂಡು (ಶುಕ್ಲಾಂ
ಬರಧರಂ) ಪ್ರಾಣಾಯಾಮಮಾಡಿ ಮಮೋಪಾತ್ತ ಹೇಳಿ-ಬೆಳಿಗ್ಗೆ ಪ್ರಾತ
ಸ್ಸಮಿದಾಧಾನಂ ಕರಿಷ್ಯೇ-ಸಾಯಂಕಾಲ ಸಾಯಂಸಮಿದಾಧಾನಂ ಕರಿಷ್ಯೇ
ಎಂದು ಸಂಕಲ್ಪಮಾಡಿ.

→ ಮಂತ್ರ || ಪರಿತ್ವಾಗ್ನೇ ಪರಿಮೃಜಾ ಮ್ಯಾಯುಷಾಚ ಧನೇನಚ
ಸುಪ್ರಜಾಃ ಪ್ರಜಯಾ ಭೂಯಾಸಗ್ಂ ಸುವೀರೋ ವೀರೈಸ್ಸುವರ್ಚಾವರ್ಚಸಾ
ಸುಪೋಷಃ ಪೋಷೈಸ್ಸುಗೃಹೋ ಗೃಹೈಸ್ಸುಪತಿಃ ಪತ್ಯಾಸು ಮೇಧಾ ಮೇಧಯಾ
ಸು ಬ್ರಹ್ಮಾ ಬ್ರಹ್ಮಚಾರಿಭಿಃ || ಅಗ್ನಿಯ ಸುತ್ತಲೂ ನೀರಿನಿಂದ ಒರಸಿ = ದೇವ
ಸವಿತಃ ಪ್ರಸುವ = ಈ ಮಂತ್ರ ಹೇಳಿ ಸುತ್ತಲೂ ಪರಿಷೇಚನಮಾಡಬೇಕು ||

ಸಮಿತ್ತನ್ನು ಕೈಯಲ್ಲಿ ಹಿಡಿದು | ಅಗ್ನಯೇ ಸಮಿಧ ಮಹಾರ್‌ಷಂ
ಬೃಹತೇ ಜಾತವೇದಸೇ ಯಥಾತ್ವಮಗ್ನೇ ಸಮಿಧಾ ಸಮಿಧ್ಯಸ್ವೈವಂ ಮಾ
ಮಾಯುಷಾ ವರ್ಚಸಾಸನ್ಯಾಮೇಧಯಾ ಪ್ರಜಯಾ ಪಶುಭಿರ್ಬ್ರಹ್ಮವರ್ಚಸೇ
ನಾನ್ನಾದ್ಯೇನ ಸಮೇಧಯ ಸ್ವಾಹಾ ||

ಇದೇ ರೀತಿ ಸುಮಿತ್ತು ಕೈಯಲ್ಲಿಟ್ಟು ಮಂತ್ರ ಹೇಳಿ ಸ್ವಾಹಾಂತ್ರದಲ್ಲಿ ಅಗ್ನಿಯಲ್ಲಿಡಬೇಕು॥ ಎಧೋಽಸ್ಯೇಧಿಷೀಮಹಿಸ್ವಾಹಾ ॥

ಸಮಿದಸಿ ಸಮೇಧಿಷೀ ಮಹಿಸ್ವಾಹಾ ॥ ತೇಜೋಽಸಿ ತೇಜೋಮ ಯಿಧೇಹಿಸ್ವಾಹಾ ॥ ಅಪೋ ಅದ್ಯಾನ್ವಚಾರಿಷಗ್ಂ ರಸೇನ ಸಮಸೃಕ್ಷ್ಮಹಿ। ಪಯಸ್ವಾಗ್ಂ ಅಗ್ನ ಆಗಮಂ ತಂ ಮಾ ಸಗ್ಂಸೃಜ ವರ್ಚಸಾ ಸ್ವಾಹಾ ॥ ಸಂಮಾಗ್ನೇ ವರ್ಚಸಾಸೃಜ ಪ್ರಜಯಾ ಚಧನೇನಚ ಸ್ವಾಹಾ ॥ ವಿದ್ಯುನ್ಮೆ ಅಸ್ಯ ದೇವಾ ಇಂದ್ರೋ ವಿದ್ಯಾತ್ಸಹಋಷಿಭಿಸ್ಸ್ವಾಹಾ ॥ ಅಗ್ನಯೇ ಬೃಹ ತೇನಾಕಾಯ ಸ್ವಾಹಾ ॥ ದ್ಯಾವಾ ಪೃಥಿವೀಭ್ಯಾಗ್ಂ ಸ್ವಾಹಾ ॥ ಎಷಾತೇ ಅಗ್ನೇ ಸಮಿತ್ತಯಾವರ್ಧಸ್ವಚಾಪ್ಯಾ ಯಸ್ವಚತಯಾಹಂ ವರ್ಧಮಾನೋ ಭೂಯಾ ಸಮಾಪ್ಯಾಯಮಾನಶ್ಚ ಸ್ವಾಹಾ ॥ ಯೋಮಾಗ್ನೇ ಭಾಗಿನಗ್ಂ ಸಂತಮಥಾ ಭಾಗಂಚಿಕೀರ್ ಷತ್ಯ ಭಾಗಮಗ್ನೇ ತಂ ಕುರುಮಾ ಮಗ್ನೇ ಭಾಗಿನಂ ಕುರು ಸ್ವಾಹಾ ॥ ಸಮಿಧಮಾಧಾಯಾಗ್ನೇ ಸರ್ವವ್ರತೋ ಭೂಯಾ ಸಗ್ಂ ಸ್ವಾಹಾ ॥

ದೇವಸವಿತಃ ಪ್ರಾಸಾವೀಃ — ಅಗ್ನಿಗೆ ಪರಿಷೇಚನಮಾಡಬೇಕು ॥

ನಿಂತುಕೊಂಡು ದಂಡವನ್ನು ಧರಿಸಿ ಅಂಜಲಿಬದ್ಧನಾಗಿ ಹೇಳಬೇಕು.

ಮಂತ್ರ=ಯತ್ತೇ ಅಗ್ನೇ ತೇಜಸ್ತೇನಾಹಂ ತೇಜಸ್ವೀ ಭೂಯಾಸಂಯತ್ತೇ ಅಗ್ನೇ ವರ್ಚಸ್ತೇನಾಹಂ ವರ್ಚಸ್ವೀ ಭೂಯಾಸಂ ಯತ್ತೇ ಅಗ್ನೇ ಹರಸ್ತೇ ನಾಹಗ್‌ಂ ಹರಸ್ವೀ ಭೂಯಾಸಂ || ಮಯಿ ಮೇಧಾಂ ಮಯಿ ಪ್ರಜಾಂ.

ಮಯ್ಯಗ್ನಿಸ್ತೇಜೋದಧಾತು ಮಯಿ ಮೇಧಾಂ ಮಯೀ ಪ್ರಜಾಂ ಮಯೀಂದ್ರ ಇಂದ್ರಿಯಂ ದಧಾತು ಮಯಿ ಮೇಧಾಂ ಮಯಿ ಪ್ರಜಾಂ ಮಯಿ ಸೂರ್ಯೋ ಭ್ರಾಜೋದಧಾತು || ಸ್ವಸ್ತಿ || ಶ್ರದ್ಧಾಂ ಮೇಧಾಂ ಯಶಃ ಪ್ರಜ್ಞಾಂ ವಿದ್ಯಾಂ ಬುದ್ಧಿಂ ಶ್ರೀಯಂ ಬಲಂ | ಆಯುಷ್ಯಂ ತೇಜ ಆರೋಗ್ಯಂ ದೇಹಿಮೇ ಹವ್ಯವಾಹನ ||

(ಅಭಿವಾದಯೇ) (ಚತುಸ್ಸಾಗರಪರ್ಯನ್ತಂ) ನಮಸ್ಕಾರಮಾಡಬೇಕು.

ಕೂತುಕೊಂಡು ಉತ್ತರ ದಿಕ್ಕಿನಲ್ಲಿ ಹೋಮ ಭಸ್ಮ ತೆಗೆದು ನೀರಿಂದ ಕಲಸಿ=ಮಂತ್ರ=ಮಾನಸ್ತೋಕೆ ತನಯೇ ಮಾನ ಆಯುಷಿ ಮಾನೋ ಗೋಷು ಮಾನೋ ಅಶ್ವೇಷು ರೀರಿಷಃ | ವೀರಾನ್ಮಾನೋ ರುದ್ರಭಾಮಿತೋ ವಧೀರ್ ಹವಿಷ್ಮಂತೋ ನಮಸಾವಿಧೇಮ ತೇ|| ಈ ಮಂತ್ರ ಹೇಳಿ= ಮೇಧಾವೀ ಭೂಯಾಸಂ–ಇದರಿಂದ ವಿಭೂತಿಯಂತೆ ಹಣೆಗೆ ಧರಿಸಿ | ತೇಜಸ್ವೀ ಭೂಯಾಸಂ–ದಕ್ಷಿಣ ತೋಳಿಗೆ | ವರ್ಚಸ್ವೀ ಭೂಯಾಸಂ-ವಾಮ ತೋಳಿಗೆ–

ಬ್ರಹ್ಮ ವರ್ಚಸೀ ಭೂಯಾಸಂ-ಹೃದಯಕ್ಕೆ । ಆಯುಷ್ಮಾನ್ಭೂಯಾಸಂ-ಕತ್ತಿಗೆ । ಅನ್ನಾದೋ ಭಯಾಸಂ-ಶಿರಸ್ಸಿಗೆ ॥ ಈ ರೀತಿ ರಕ್ಷೆಯನ್ನು ಧರಿಸ ಬೇಕು॥ ಹೋಮಾಂತೇ ಯಜ್ಞೇಶ್ವರಾಯ ನಮಃ ಸಕಲಾರಾಧನೈಸ್ಸ್ವರ್ಚಿತಂ ಯಸ್ಯಸ್ಮೃತ್ಯಾಚ+ತಪೋಹೋಮ+ಹುತಾಶನಂ । ಮಂತ್ರ ಹೀನಂ ಕ್ರಿಯಾ ಹೀನಂ ಭಕ್ತಿ-ಹೀನಂ ಹುತಾಶನ । ಯದ್ಧುತಂತು+ತೇ ॥ ಅನೇನಸಮಿದಾಧಾನೇನ+ಯಜ್ಞೇಶ್ವರಃ ಪ್ರೀಣಾತು । ನಾಮತ್ರಯ ಜಪ । ಓಂ ತತ್ಸತ್ ॥

ಸಂಕ್ಷೇಪವಾದ ನಿತ್ಯ ಸೂರ್ಯನಮಸ್ಕಾರ ಪ್ರಯೋಗ

ಆಚಮ್ಯ ॥ ಒಂದು ಶುದ್ಧವಾದ ಪಾತ್ರೆಯಲ್ಲಿ ಶುದ್ಧೋದಕವನ್ನು ತುಂಬಿ ಆ ನೀರಿನಲ್ಲಿ ಸಾವಿತ್ರ್ಯಾಷ್ಟಾಕ್ಷರವನ್ನು ಬರೆದು (ಶುಕ್ಲಾಂಬರಧರಂ) ಪ್ರಾ....ಮ್ಯ (ದೇಶಕಾಲೌ ಸಂಕೀರ್ತ್ಯ) ಮಮ ಉಪಾತ್ತ....ಪ್ರೀತ್ಯರ್ಥಂ ಗಣಪತ್ಯರುಣ ಧ್ಯಾಯಾಸಂಜ್ಞಾ ಸಮೇತ ಶ್ರೀ ಸೂರ್ಯನಾರಾಯಣ ದೇವತಾ ಮುದ್ದಿಶ್ಯ...ಪ್ರೀತ್ಯರ್ಥಂ ತ್ರಿಚಕಲ್ಪಾದಿ ಮಂತ್ರೈರ್ಯಥಾಶಕ್ತಿ ಪ್ರದಕ್ಷಿಣ ನಮಸ್ಕಾರಂ ಕರಿಷ್ಯೇ॥ ಆ ಕಲಶಕ್ಕೆ (ಆವಾಹನ ಪಂಚೋಪಚಾರ ಮಾಡಿ) ಪ್ರದಕ್ಷಿಣಮಾಡಿ-ಗಣಪತಿ-ಅರುಣ-ಗುರು ಮಂತ್ರಗಳಿಂದ ನಮಸ್ಕಾರಮಾಡಿ ತ್ರಿಚಕಲ್ಪ ಮಂತ್ರ ಹೇಳಬೇಕು.

ಗಣಪತಿ ಮಂತ್ರ ॥ ಗಣಾನಾಂತ್ವಾ ॥

ಅರುಣ ಮಂತ್ರ ॥ ವಿನತಾ ತನಯೋದೇವಃ ಕರ್ಮಸಾಕ್ಷೀ ಸುರೇಶ್ವರಃ । ಸಪ್ತಾಶ್ವಸ್ಸಪ್ತರಜ್ಜುಶ್ಚ ಅರುಣೋಮೇ ಪ್ರಸೀದತು ॥ ರಜ್ಜುವೇತ್ರ ಕಶಾಪಾಣಿಂ ಪ್ರಸನ್ನಂ ಕಶ್ಯಪಾತ್ಮಜಂ । ಸರ್ವಾಭರಣದೀಪ್ತಾಂಗಂ ಅರುಣಂ ಪ್ರಣಮಾಮ್ಯಹಂ ॥

ಗುರು ಮಂತ್ರ ॥ ಗುರುಬ್ರ್ಹಹ್ಮಾ ಗುರುರ್ವಿಷ್ಣುಃ ಗುರುರ್ದೇವೋ ಮಹೇಶ್ವರಃ । ಗುರುಸ್ಸಾಕ್ಷಾತ್ಪರಂಬ್ರಹ್ಮ ತಸ್ಮೈ ಶ್ರೀ ಗುರುವೇನಮಃ ॥

ತ್ರಿಚಕಲ್ಪ ಮಂತ್ರಗಳು॥ ಓಂಹ್ರಾಂ-ಉದ್ಯನ್ನದ್ಯಮಿತ್ರಮಹಃ-ಮಿತ್ರಾಯ

ನಮಃ || ಪ್ರದಕ್ಷಿಣ ನಮಸ್ಕಾರಂ ಸಮರ್ಪಯಾಮಿ || ಓಂ ಹ್ರೀಂ—ಆರೋಹನ್ನುತ್ತರಾಂದಿವಂ—ರವಯೇನಮಃ ಪ್ರ...ಮಿ || ಓಂ ಹ್ರೂಂ-ಹೃದ್ರೋಗಂ ಮಮ ಸೂರ್ಯ—ಸೂರ್ಯಾಯನಮಃ ಪ್ರ....ಮಿ || ಓಂ ಹ್ರೈಂ ಹರಿಮಾಣಂಚನಾಶಯ-ಭಾನವೇ ನಮಃ ಪ್ರ....ಮಿ| ಓಂ ಹ್ರೌಂ-ಶುಕೇಷುಮೇ ಹರಿಮಾಣಂ-ಖಗಾಯನಮಃ ಪ್ರ....ಮಿ|| ಓಂ ಹ್ರಃ ರೋಪಣಾಕಾಸುದಧ್ಮಸಿ-ಪೂಷ್ಣೇ ನಮಃ ಪ್ರ....ಮಿ ಓಂ ಹ್ರಃ—ಅಥೋ ಹಾರಿದ್ರವೇಷುಮೇ—ಹಿರಣ್ಯ ಗರ್ಭಾಯನಮಃ ಪ್ರ....ಮಿ || ಓಂ ಹ್ರೌಂ—ಹರಿಮಾಣಂನಿದಧ್ಮಸಿ-ಮರೀಚಯೇ ನಮಃ ಪ್ರ....ಮಿ|| ಓಂ ಹ್ರೈಂ-ಉದಗಾದಯಮಾದಿತ್ಯಃ-ಆದಿತ್ಯಾಯ ನಮಃ ಪ್ರ....ಮಿ|| ಓಂ ಹ್ರೂಂ-ವಿಶ್ವೇನಸಹಸಾಸಹ—ಸವಿತ್ರೇನಮಃ ಪ್ರ....ಮಿ|| ಓಂ ಹ್ರೀಂ-ದ್ವಿಷನ್ತಂಮಮರಂಧಯನ್-ಅರ್ಕಾಯನಮಃ ಪ್ರ....ಮಿ || ಓಂ ಹ್ರಾಂ—ಮೋ ಅಹಂ ದ್ವಿಷತೋರಧಂ—ಭಾಸ್ಕರಾಯನಮಃ ಪ್ರ....ಮಿ||

ಓಂ ಹ್ರಾಂ-ಹ್ರೀಂ-ಉದ್ಯನ್ನದ್ಯ....ದಿವಂ || ಮಿತ್ರರವಿಭ್ಯಾಂ ನಮಃ ಪ್ರ....ಮಿ|| ಓಂ ಹ್ರೂಂ—ಹ್ರೈಂ-ಹೃದ್ರೋಗಂ....ನಾಶಯ || ಸೂರ್ಯಭಾನುಭ್ಯಾಂ ನಮಃ ಪ್ರ....ಮಿ|| ಓಂ ಹ್ರೌಂ—ಹ್ರಃ-ಶುಕೇಷುಮೇ....ದಧ್ಮಸಿ || ಖಗಪೂಷಭ್ಯಾಂನಮಃ ಪ್ರ...ಮಿ || ಓಂ ಹ್ರಃ-ಹ್ರೌಂ-ಅಥೋಹಾರಿ....ನಿದಧ್ಮಸಿ || ಹಿರಣ್ಯಗರ್ಭ ಮರೀಚಿಭ್ಯಾಂನಮಃ ಪ್ರ....ಮಿ || ಓಂ ಹ್ರೈಂ-ಹ್ರೂಂ-ಉದಗಾ....ಸಹ—ಆದಿತ್ಯಸವಿತೃಭ್ಯಾಂನಮಃ ಪ್ರ....ಮಿ || ಓಂ ಹ್ರೀಂ—ಹ್ರಾಂ—ದ್ವಿಷನ್ತಂ....ರಧಂ—ಅರ್ಕಭಾಸ್ಕರಾಭ್ಯಾಂನಮಃ ಪ್ರ...ಮಿ ||

ಓಂ ಹ್ರಾಂ—ಹ್ರೀಂ—ಹ್ರೂಂ—ಹ್ರೈಂ-ಉದ್ಯನ್ನದ್ಯ...ನಾಶಯ—ಮಿತ್ರ ರವಿ ಸೂರ್ಯ ಭಾನುಭ್ಯೋನಮಃ ಪ್ರ....ಮಿ|| ಓಂ ಹ್ರೌಂ—ಹ್ರಃ—ಹ್ರಃ—ಹ್ರೌಂ—

ಶುಕೇಷುಮೇ...ನಿದಧ್ಮಸಿ|| ಖಗ ಪೂಷ ಹಿರಣ್ಯಗರ್ಭ ಮರೀಚಿಭ್ಯೋ ನಮಃ ಪ್ರ....ಮಿ || ಓಂ ಹ್ರೈಂ–ಹ್ರೂಂ ಹ್ರೀಂ–ಹ್ರಾಂ–ಉದಗಾದಯಂ....ದ್ವಿಷತೋ ರಥಂ–ಆದಿತ್ಯ ಸವಿತ್ರರ್ಕಭಾಸ್ಕರೇಭ್ಯೋ ನಮಃ ಪ್ರ....ಮಿ||

ಓಂ ಹ್ರಾಂ – ಹ್ರೀಂ–ಹ್ರೂಂ–ಹ್ರೈಂ–ಹ್ರೌಂ – ಹ್ರಃ–ಉದ್ಯನ್ನದ್ಯ .... ದಧ್ಮಸಿ– ಮಿತ್ರ ರವಿ ಸೂರ್ಯ ಭಾನು ಖಗಪೂಷಭ್ಯೋನಮಃ ಪ್ರ....ಮಿ|| ಓಂ ಹ್ರಃ–ಹ್ರೌಂ–ಹ್ರೈಂ–ಹ್ರೂಂ–ಹ್ರೀಂ–ಹ್ರಾಂ–ಅಥೋಹಾರಿ .... ದ್ವಿಷ ತ್ರೋರಥಂ–ಹಿರಣ್ಯಗರ್ಭ ಮರೀಚ್ಯಾದಿತ್ಯಸವಿತ್ರರ್ಕ ಭಾಸ್ಕರೇಭ್ಯೋ ನಮಃ ಪ್ರ....ಮಿ ||

ಓಂ ಹ್ರಾಂ–ಹ್ರೀಂ–ಹ್ರೂಂ–ಹ್ರೈಂ–ಹ್ರೌಂ–ಹ್ರಃ–ಹ್ರಃ–ಹ್ರೌಂ–ಹ್ರೈಂ ಹ್ರೂಂ–ಹ್ರೀಂ-ಹ್ರಾಂಉದ್ಯನ್ನದ್ಯ....ದ್ವಿಷತೋರಥಂ–ಮಿತ್ರ–ರವಿ-ಸೂರ್ಯ- ಭಾನು–ಖಗ–ಪೂಷ-ಹಿರಣ್ಯಗರ್ಭ–ಮರೀಚ್ಯಾದಿತ್ಯ-ಸವಿತ್ರರ್ಕ ಭಾಸ್ಕರೇಭ್ಯೋ ನಮಃ ಪ್ರ....ಮಿ||

ಆವಾಹನಂ ನಜಾನಾಮಿ ನಜಾನಾಮಿ ವಿಸರ್ಜನಂ | ಪೂಜಾವಿಧಿಂ ನಜಾನಾಮಿಕ್ಷಮಸ್ವ ಪರಮೇಶ್ವರ || ಅಪರಾಧ ಸಹಸ್ರಾಣಿ ಕ್ರಿಯಂತೇಽಹರ್ನಿ ಶಂಮಯಾ | ದಾ ಸೋಽಯಮಿತಿಮಾಂಬುಧ್ವಾ ಕ್ಷಮಸ್ವ ಪುರುಷೋತ್ತಮ|| ಪ್ರಾರ್ಥನಾಂ ಸಮರ್ಪಯಾಮಿ || ಅನೇನ ಪ್ರದಕ್ಷಿಣ ನಮಸ್ಕಾರೇಣ ಭಗ ವಾನ್ ಸರ್ವಾತ್ಮಕಃ ಗಣಪತ್ಯರುಣ ಛಾಯಾಸಂಜ್ಞಾ ಸಮೇತ ಶ್ರೀ ಸೂರ್ಯನಾರಾಯಣಃ ಪ್ರೀಯತಾಂ || ಓಂ ತತ್ಸತ್ || ಕಲಶೋದಕದಿಂದ ಪ್ರೋಕ್ಷಣ ಪ್ರಾಶನಮಾಡಬಹುದು.

ಪ್ರತಿನಿತ್ಯದಲ್ಲೂ ಸೂರ್ಯನಮಸ್ಕಾರವನ್ನು ಇಷ್ಟು ಮಾತ್ರ ಮಾಡಿ ದರೂ ಸೂರ್ಯಾನುಗ್ರಹದಿಂದ ನಮ್ಮಗಳ ಶರೀರವು ಆರೋಗ್ಯ ಸ್ಥಿತಿಯಲ್ಲೇ ಇರುತ್ತಾಗಿ ನಂಬಬಹುದು ||

ಪ್ರಾತಃಸ್ಸಂಧ್ಯಾವಂದನ ಮಂತ್ರಾರ್ಥ ತಾತ್ಪರ್ಯ

ಅಪವಿತ್ರಃ ಪವಿತ್ರೋವಾ = ಯಾವಮನುಷ್ಯನಾದರೂ ಬಾಲ್ಯ ಕೌಮಾರ

ಯೌವನ ವಾರ್ಧಕ ಮತ್ತು ಜಾಗ್ರದಾದ್ಯವಸ್ಥೆಯಲ್ಲಿದ್ದು ಅಶುದ್ಧನಾಗಲಿ ಶುದ್ಧನಾಗಲಿ ಪುಂಡರೀಕಾಕ್ಷನಾದ ಭಗವಂತನನ್ನು ಸ್ಮರಿಸಿದರೆ ಅವನು ಅಂತ ರಂಗ ಬಹಿರಂಗದಲ್ಲೂ ಶುದ್ಧನಾಗಿರುವನು ‖ ಎಂದು ತಾತ್ಪರ್ಯವು ‖

ಓಂ ಭೂರಿತ್ಯಾದಿ ಪ್ರಾಣಾಯಾಮ ಮಂತ್ರ=ಪ್ರಣವವೆಂಬ ಓಂಕಾರ ಸ್ವರೂಪನಾದ ಪರಬ್ರಹ್ಮನನ್ನು ಮೊದಲು ಸ್ಮರಿಸಿದರೆ ಚಿತ್ತಸ್ಥೈರ್ಯವುಂಟಾ ಗುವುದು—ಭೂಃ-ಭುವಃ-ಮೊದಲು-ಸತ್ಯಂ ಎಂಬುವವರಿಗೆ ಸಪ್ತವ್ಯಾಹೃತಿ ಗಳು ಸಪ್ತಲೋಕಗಳು ಓಂ ಅಂದರೆ ಅಂಗೀಕಾರವೆಂದರ್ಥ । ಭೂಃ ಮೊದಲು ಸಪ್ತಲೋಕಕ್ಕೂ ಪರಬ್ರಹ್ಮವೇ ಅಭಿಮಾನಿ ದೇವತೆಯು ಭೂರಾದಿ ಪ್ರಪಂ ಚಕ್ಕೆ ಬ್ರಹ್ಮಸ್ಥಿತಿ ಹೊರತು ಬೇರೆ ಇಲ್ಲವಾದುದರಿಂದ ಭೂರಾದಿ ಲೋಕಾಭಿ ಮಾನಿಯಾದ ಪರಬ್ರಹ್ಮನು ನನ್ನಿಂದ ಮಾಡಲ್ಪಟ್ಟ ಸಂಧ್ಯಾದಿ ಕರ್ಮ ಗಳನ್ನು ಅಂಗೀಕರಿಸಲಿ ಆ ದೇವತೆಗೋಸ್ಕರ ಸ್ವಕೃತ ಕರ್ಮವನ್ನು ಸಮ ರ್ಪಣೆಮಾಡುವೆನು । ಮತ್ತು ಎಲ್ಲಾ ಬ್ರಹ್ಮಮಯವೆಂಬ ಜ್ಞಾನವು ದೃಢ ಪಡುವುದಕ್ಕಾಗಿ ಭೂರಾದಿ ಎಲ್ಲಾ ಮಂತ್ರಗಳಲ್ಲೂ ಮೊದಲು ಓಂಕಾರವು ಹೇಳಲ್ಪಟ್ಟಿರುತ್ತೆಂದು ತಿಳಿಯತಕ್ಕದ್ದು ‖

ತತ್ಸವಿತುಃ=ಸಮಸ್ತಲೋಕಕ್ಕೂ ಪ್ರಕಾಶನಾದ ಯಾವ ದೇವನು ನಮ್ಮಗಳಿಗೆ ಒಳ್ಳೆಜ್ಞಾನ-ಕರ್ಮಗಳನ್ನುಂಟುಮಾಡುವನೋ ಮತ್ತು ಎಲ್ಲ ರಿಂದಲೂ ಪ್ರಾರ್ಥನೀಯವಾದ-ಸಂಸಾರತಾರಕವಾದ ಅಂಥಾ ಸವಿತೃ ದೇವನ ತೇಜಸ್ಸನ್ನು ನಾವು ಧ್ಯಾನಮಾಡುವೆವು ‖

ಓಮಾಪೋಜ್ಯೋತಿಃ=ಆಪಃ ನದ್ಯಾದಿ ನೀರುಗಳು+ಜ್ಯೋತಿಃ ಆದಿ ತ್ಯಾದಿ ತೇಜಸ್ಸು । ರಸಃ-ಮಧುರಾದಿರಸಗಳು ಅಮೃತಂ-ದೇವತೆಗಳಿಗೆ ಪಾನಾ ರ್ಹವಾದದ್ದು ‖ ಬ್ರಹ್ಮ-ವೇದವು । ಈ ಸಮಸ್ತವೂ ಓಂಕಾರ ಪ್ರತಿಪಾದ್ಯ ಬ್ರಹ್ಮ ಸ್ವರೂಪವೆಂದು ತಿಳಿಸುವುದಕ್ಕಾಗಿ ಮೊದಲು ಓಂಕಾರ ಹೇಳಿದೆ ‖ ಈ ಗಾಯತ್ರೀ ಶಿರಸ್ಸು ವ್ಯಾಹೃತಿಗಳಿಂದ ಹೇಳಲ್ಪಟ್ಟ ಅಖಂಡೈಕರಸ ಸ್ವಭಾವ ವಾದ ಅರ್ಥವು-ಪರಬ್ರಹ್ಮವೇ ಎಂದು ಅಂತಿಮ ಪ್ರಣವವು ಅಂಗೀಕರಿಸುತ್ತೇ ‖

ಸೂರ್ಯಶ್ಚ = ಹಗಲನ್ನುಂಟುಮಾಡುವ ದೇವನು-ಕೋಪಾಭಿಮಾನಿ ..ವನು-ಯಾವ ಕೋಪಸ್ವಾಮಿಗಳಾದ ದೇವರುಗಳುಂಟೋ ಈ ಸಮಸ್ತರೂ

ನನ್ನ ಕೋಪದಿಂದ ಉಂಟಾಗುವ ಪಾಪಗಳನ್ನು ನಾಶಮಾಡಿ ಪಾಪಿಯಾದ ನನ್ನನ್ನು ರಕ್ಷಿಸಲಿ ॥ ಮತ್ತು ಪೂರ್ವ ರಾತ್ರಿಯಲ್ಲಿ ಮನಸ್ಸು ಮೊದಲು ಶಿಶ್ನಾಂತವಾದ ಅವಯವಗಳಿಂದ ನಾನು ಮಾಡಿದ ಸಮಸ್ತ ಪಾಪಗಳನ್ನೂ ರಾತ್ರ್ಯಭಿಮಾನಿದೇವನು ನಾಶಮಾಡಲಿ ॥ ಮನಸ್ಸು ಮೊದಲಾದ ಅವಯವ ಗಳಿಂದ ಉಂಟಾಗುವ ಪಾಪಗಳು ಯಾವುವು ಅಂದರೆ ಪರಹಿಂಸಾದಿ ಚಿಂತ ನವೇ ಮಾನಸಪಾಪ ॥ ಸುಳ್ಳು ಮುಂತಾದ ಭಾಷಣವೇ ವಾಚಿಕಪಾಪ ॥ ಅಯೋಗ್ಯಹೋಮ ಪ್ರಹಾರಾದಿಗಳು ಹಸ್ತಕೃತಪಾಪ ॥ ಕಾಲಿನಿಂದ ಗೋ-ಬ್ರಾಹ್ಮಣ ಸ್ಪರ್ಶಾದಿಗಳು ಪಾದಕೃತಪಾದ ॥ ನಿಷಿದ್ಧ ಪದಾರ್ಥ ಮುಂತಾದ ಭೋಜನವೇ ಉದರಕೃತಪಾಪ॥ ಅಗಮ್ಯಾಗಮನ ಮುಂತಾದ್ದು ಶಿಶ್ನಕೃತಪಾಪ॥ ಇದಲ್ಲದೆ ನನ್ನಿಂದ ಮಾಡಲ್ಪಟ್ಟ ಮತ್ಯಾವ ಪಾಪ ಉಂಟೋ ಆ ಸಮಸ್ತವನ್ನೂ ಲಿಂಗ ಶರೀರ ರೂಪನಾದ ನನ್ನನ್ನೂ ಸಹ ಮರಣವಿಲ್ಲದ ಸೂರ್ಯೋಪಾಧಿಕ ವಾದ ಸ್ವಯಂ ಪ್ರಕಾಶವಾದ ವಸ್ತುವಿನಲ್ಲಿ ಹೋಮಮಾಡಿ ಭಸ್ಮಮಾಡುವೆನು॥ ಇದಕ್ಕೋಸ್ಕರ ಅಭಿಮಂತ್ರಿತವಾದ ಜಲವು ನನ್ನ ಮುಖಾಗ್ನಿಯಲ್ಲಿ ಹುತ ವಾಗಲಿ ॥

ದಧಿಕ್ರಾವ್ಣ್ಣಃ=ದಧಿಪ್ರಿಯನಾಗಿ ಜಯಶೀಲ ಮತ್ತು ವ್ಯಾಪಕ ಅನ್ನಉಳ್ಳ ಅಗ್ನಿದೇವನು ನಮ್ಮಗಳ ಮುಖವನ್ನು ಕರ್ಪೂರಾದಿ ದ್ರವ್ಯದಾನ ದಿಂದ ಸುಗಂಧ ಉಳ್ಳದ್ದಾಗಿಮಾಡಲಿ-ಮತ್ತು ನಮ್ಮಗಳ ಆಯುಸ್ಸನ್ನು ವೃದ್ಧಿ ಹೊಂದಿಸಲಿ ॥

ಆಪೋಹಿಷ್ಠ=ಅಬ್ದೇವತೆಗಳಾದ ನೀವು ನಮ್ಮಗಳ ಸ್ನಾನಪಾನಾದಿ ಗಳಿಗೆ ಅನುಕೂಲರಾಗಿ ಸುಖವನ್ನುಂಟುಮಾಡಿ ಅನ್ನರಸವನ್ನು ಕೊಟ್ಟು ಪರ ಮಾತ್ಮನ ದರ್ಶನಕ್ಕೆ ಉತ್ತಮವಾದ ಕಣ್ಣುಗಳನ್ನು ಕೊಡುವಂಥಾವರಾಗಿ ॥

ಯೋವಶ್ಶಿವತಮೋರಸಃ=ಮತ್ತು ನಿಮ್ಮಲ್ಲಿ ಕಲ್ಯಾಣವಾದ ಯಾವ ಮಧುರಸ ಉಂಟೋ ಅದನ್ನು ತಾಯಿಯಂತೆ ಸಂತೋಷದಿಂದ ಭೂಮಿಯಲ್ಲಿರ ತಕ್ಕ ನಮ್ಮಗಳಿಗೆ ಕೊಟ್ಟು ಕಾಪಾಡಿ ॥

ತಸ್ಮಾ ಅರಂಗಮಾಮವಃ=ಅಲ್ಲದೆ ನೀವುಗಳು ನಮ್ಮಲ್ಲಿ ಹೆಚ್ಚಾದ

ಪ್ರೀತಿ ಇಟ್ಟು ನಮ್ಮ ಪಾಪಗಳನ್ನೆಲ್ಲಾ ನಾಶಮಾಡಲು ಶಕ್ತರೆಂದು ನಿಮ್ಮನ್ನು ನಾವು ಹೆಚ್ಚಾಗಿ ಹೊಂದಿದ್ದೇವೆ || ನಮ್ಮಗಳಿಗೆ ಪುತ್ರೋತ್ಪತಿ ಸಾಮರ್ಥ್ಯ ವನ್ನೂ ಕೊಟ್ಟು ರಕ್ಷಿಸಿ ||

ದ್ರುಪದಾದಿವೇನ್ಮುಮುಚಾನಃ=ರಾಜರು ಕಳ್ಳರೇ ಮುಂತಾದ ಅಪ ರಾಧಿಗಳನ್ನು ಕೈಕಾಲುಗಳಿಗೆ ಮರದ ಕೋಳಗಳನ್ನು ಹಾಕಿಸಿ ನಿರ್ಬಂಧಪಡಿ ಸಿದ್ದರೆ ಕಾಲಾಂತರದಲ್ಲಿ ಆ ನಿರ್ಬಂಧದ ದೆಸೆಯಿಂದ ಹೇಗೆ ಅಪರಾಧಿಗಳು ಮುಕ್ತರಾಗುವರೋ ಮನುಷ್ಯನು ಸ್ನಾನಮಾಡಿ ಶರೀರದ ಬೆವರು ಕೊಳೆ ಗಳಿಂದ ಹೇಗೆ ಬಿಡಲ್ಪಡುವನೋ ಪವಿತ್ರಗಳಿಂದ ಆಜ್ಯವು ಹೇಗೆ ಶುದ್ಧವಾಗು ವುದೋ ಹಾಗೆ ಜಲಾಭಿಮಾನಿ ದೇವರು ನನ್ನ ಪಾಪಗಳನ್ನು ನಾಶಮಾಡಿ ನನ್ನನ್ನು ಶುದ್ಧನನ್ನಾಗಿ ಮಾಡಲಿ ||

ಗಾಯತ್ರ್ಯಾವಾಹನ ಮಂತ್ರ=ಆಯಾತು ವರದಾ-ನಮಗೆ ಇಷ್ಟ ವಾದ ವರವನ್ನು ಕೊಡುವ ಗಾಯತ್ರೀ ಛಂದೋಭಿಮಾನಿ ದೇವತೆಯು ನಾಶವಿಲ್ಲದ ಚೆನ್ನಾಗಿ ವೇದಾಂತ ಪ್ರಮಾಣದಿಂದ ನಿಶ್ಚಿತವಾಗಿ ಜಗತ್ಕಾರಣ ವಾದ ಪರಬ್ರಹ್ಮ ತತ್ವವನ್ನೂ ನಮ್ಮಗಳಿಗೆ ಬೋಧಿಸುವುದಕ್ಕೋಸ್ಕರ ಬರಲಿ ಅಂದರೆ ತ್ರಿಷ್ಟು ಬಾದಿ ಛಂದಸ್ಸಿಗೂ ವೇದಗಳಿಗೂ ತಾಯಿಯಾದ ಗಾಯತ್ರಿ ಹೆಸರಿನ ದೇವತೆಯು ನಮಗೆ ವೇದಾಂತ ಪ್ರತಿಪಾದ್ಯಬ್ರಹ್ಮ ತತ್ವವನ್ನು ಉಪದೇಶಮಾಡಲಿ ಎಂದು ತಾತ್ಪರ್ಯವು ||

ಓ ಜೋಸಿ ಸಹೋಸಿ=ಹೇ ಗಾಯತ್ರಿ ನೀನು ಬಲಕಾರಣವಾದ ಅಷ್ಟಮ ಧಾತುರೂಪಳು ಶತ್ರು ತಿರಸ್ಕಾರ ಶಕ್ತಳು ಶರೀರಗಳ ಕಾರ್ಯ ಸಾಮರ್ಥ್ಯರೂಪಳು ಪ್ರಕಾಶರೂಪಳು ಅಗ್ನ್ಯಾದಿ ದೇವತೆಗಳ ತೇಜೋನಾಮ ಕಳಾಗಿ ಸರ್ವಜಗದ್ರೂಪಳಾಗಿ ಸಂಪೂರ್ಣಾಯುಸ್ಸ್ವರೂಪಳಾಗಿ ಸಮಸ್ತ ಪಾಪವನ್ನೂ ತಿರಸ್ಕರಿಸಿ ಪ್ರಣವಪ್ರತಿಪಾದ್ಯ ಪರಮಾತ್ಮ ಸ್ವರೂಪಳೂ ಆದ ಗಾಯತ್ರೀ ದೇವತೆಯನ್ನು ನನ್ನ ಮನಸ್ಸಿನಲ್ಲೇ ಅವಾಹನಮಾಡಿಕೊಳ್ಳು ವೆನು ||

ಮಿತ್ರಸ್ಯ ಚರ್ಷಣೀಧೃತಃ=ಮನುಷ್ಯರಿಗೆ ಪೋಷಕನಾದ ದೇವನ ಯಶಸ್ಸು ಕೇಳುವುದಕ್ಕೆ ಯೋಗ್ಯವಾದದ್ದು ಶಾನೇ ಇದೆ | ಫಲವನ್ನು ಕೊಡು

ವನಾಗಿ ಸತ್ಯ ಸ್ವರೂಪನಾಗಿ ಹೆಚ್ಚಾದ ಕೀರ್ತಿಯುಳ್ಳ ಆ ಸೂರ್ಯನನ್ನು ನಾನು ಪೂಜಿಸುವೆನು ||

ಮಿತ್ರೋಜನಾನ್ = ಈ ಮಿತ್ರದೇವನು ಅವರವರ ಅಧಿಕಾರವನ್ನು ತಿಳಿದು ಸರ್ವ ಜನರನ್ನೂ ತಮ್ಮ ತಮ್ಮ ಕೆಲಸದಲ್ಲಿ ಪರಿವರ್ತಿಸುವಂತೆ ಮಾಡುವನು | ಮತ್ತು ಮಿತ್ರನು ಭೂಮಿಯನ್ನು ಸ್ವರ್ಗವನ್ನೂ ಧರಿಸಿರುವನು | ಮತ್ತು ಮಿತ್ರನು ಮನುಷ್ಯರನ್ನೂ ದೇವತೆಗಳನ್ನೂ ಎಲ್ಲಾ ಕಡೆಗಳಲ್ಲಿಯೂ ನೋಡುತ್ತಿರುವನು | ನಾವು ಅಮೋಘವಾದ ಫಲಾರ್ಥವಾಗಿ ಆ ಮಿತ್ರ ನಿಗೋಸ್ಕರ ಘೃತಯುಕ್ತವಾದ ಅನ್ನವನ್ನು ಕೊಡುವೆವು ||

ಪ್ರಸಮಿತ್ರ = ಹೇ ಆದಿತ್ಯ ಯಾವ ಯಜಮಾನನು ನಿನ್ನ ಸಂಬಂಧವಾದ ಕರ್ಮವನ್ನು ಮಾಡಲು ಶಕ್ತನಾಗಿ ಅಪೇಕ್ಷಿಸುವನೋ ಹೇ ಮಿತ್ರ ಆ ಯಜಮಾನನಾದ ಮನುಷ್ಯನು ಕರ್ಮ ಫಲವನ್ನು ಹೊಂದಿ ಶ್ರೇಷ್ಠನಾಗಲಿ | ನಿನ್ನಿಂದ ರಕ್ಷಿತನಾದ ಆ ಯಜಮಾನನು ರೋಗಾದಿಗಳಿಂದ ಪೀಡಿತನಾಗುವುದಿಲ್ಲ, ವೈರಿಗಳಿಂದ ತಿರಸ್ಕೃತನಾಗುವುದಿಲ್ಲ ಮತ್ತು ನನ್ನಿಂದ ರಕ್ಷಿತನಾದ ಯಜಮಾನನನ್ನು ಪಾಪವು ಸಮೀಪದಲ್ಲಾಗಲೀ ದೂರದಲ್ಲಾಗಲೀ ವ್ಯಾಪಿಸುವುದಿಲ್ಲ ||

ಆದ್ಯಾನೋ ದೇವಸವಿತಃ = ಹೇ ಸವಿತೃ ದೇವನೇ ನಮ್ಮಗಳ ಸಮಸ್ತ ಪಾಪಗಳನ್ನು ನಾಶಮಾಡು | ಕಲ್ಯಾಣವನ್ನು ನಮಗೆ ಎಲ್ಲಾ ಕಡೆಯಲ್ಲೂ ಅನುಗ್ರಹಿಸು |

ಇವೆರಡು ಮಂತ್ರಗಳನ್ನೂ ಸವಿತೃದೇವತಾ ಕರ್ಮಗಳೆಂದು ತಿಳಿಯಬೇಕು.

ಉತ್ತಮೇಶಿಖರೇ = ಹೇ ದೇವಿ ಗಾಯತ್ರಿ ನಿನ್ನ ಉಪಾಸನಾ ರೂಪವಾದ ಸಂಧ್ಯಾಕರ್ಮಮುಗದ ಮೇಲೆ ಭೂಮಿಯಲ್ಲಿರುವ ಮೇರು ಪರ್ವತದ ತಲೆಯಲ್ಲಿ ಉತ್ತಮವಾದ ಶಿಖರವನ್ನು ಹೊಂದಿರುವ ಸೂರ್ಯಮಂಡಲವನ್ನು ಕುರಿತು ಹೋಗು | ಮತ್ತು ಉಪಾಸಕರಿಂದ ಎದುರಿಗೆ ಅಂಜಲಿಬದ್ಧರಾಗಿ ನಿಂತು ಪ್ರಾರ್ಥಿತಳಾದ ನೀನು ಇಷ್ಟ ಬಂದಂತೇ ಪ್ರಯಾಣಮಾಡು ||

ಮಾಧ್ಯಾಹ್ನಿಕ ಮಂತ್ರಾರ್ಥ

ಆಪಃಪುನಂತು = ವರ್ಷೋದಕಗಳು ಭೂಮಿಯನ್ನು ಶುದ್ಧಿಮಾಡಲಿ ಆ ಶುದ್ಧವಾದ ಭೂಮಿಯು ಕರ್ಮಮಾಡುವ ನನ್ನನ್ನು ಶುದ್ಧಿಮಾಡಲಿ । ಹಾಗೆ ವೇದ ಪ್ರತಿಪಾಲಕನಾದ ಆಚಾರ್ಯನನ್ನು ಈ ಉದಕಗಳು ಶುದ್ಧಿ ಮಾಡಲಿ । ಆ ಆಚಾರ್ಯನಿಂದ ಉಪದಿಷ್ಟವಾದ ವೇದಸ್ವರೂಪವು ತಾನು ಶುದ್ಧವಾಗಿ ನನ್ನನ್ನು ಶುದ್ಧಿಮಾಡಲಿ ಆಪಃ ಜಲದೇವತೆಗಳು ಅನ್ಯ ಭುಕ್ತಾ ವಶಿಷ್ಟ ರೂಪವಾದ ಉಚ್ಛಿಷ್ಟನ್ನೂ ಭೋಜನಕ್ಕೆ ಅಯೋಗ್ಯವಾದ್ದನ್ನೂ ನಾನು ಊಟಮಾಡಿದ್ದರೆ ಅಥವಾ ಬೇರೆ ನಿಷಿದ್ಧಾಚರಣರೂಪವಾದದ್ದು ನನಗೆ ಸ್ವಲ್ಪ ಉಂಟಾಗಿದ್ದರೂ ಆ ಸಮಸ್ತ ಪಾಪವನ್ನೂ ಹೋಗಲಾಡಿಸಿ ನನ್ನನ್ನು ಶುದ್ಧಿಮಾಡಲಿ ॥ ಹಾಗೆಯೇ ಶೂದ್ರಾದಿಗಳಿಂದ ಪ್ರತಿಗ್ರಹ ವನ್ನೂ ನಾನು ಮಾಡಿದ್ದರೆ ಶುದ್ಧಿಮಾಡಲಿ । ಅದಕ್ಕೋಸ್ಕರ ಈ ಅಭಿಮಂತ್ರಿತ ಜಲವು ನನ್ನ ವಾಗಗ್ನಿಯಲ್ಲಿ ಹುತವಾಗಲಿ ॥

ಆಸತ್ಯೇನ = ಸೂರ್ಯನು ವ್ಯಾವಹಾರಿಕವಾದ ಅಂತರಿಕ್ಷ ಲೋಕದಿಂದ ತಿರುಗಿ ಬರುವವನಾಗಿ ದೇವನನ್ನೂ ಮನುಷ್ಯನನ್ನೂ ಅವರವರ ಸ್ಥಾನಗಳ ಲಿಟ್ಟು ನೋಡುತ್ತಾ ಸುವರ್ಣ ನಿರ್ಮಿತವಾದ ರಥದಿಂದ ಬರುತ್ತಾನೆ ॥

ಉದ್ವಯಂ = ಉಪಾಸಕರಾದ ನಾವು ಪಾಪರಹಿತವಾದ ಅತ್ಯುತ್ಕೃಷ್ಟ ನಾದ ಜ್ಯೋತಿಸ್ವರೂಪನಾದ ದೇವತೆಗಳೊಳಗೆ ಪ್ರಕಾಶಮಾನನಾದ ಸೂರ್ಯ ನನ್ನು ಉಪಾಸನಾ ಬಲದಿಂದ ಪ್ರತ್ಯಕ್ಷಮಾಡಿಕೊಂಡವರಾಗಿ ಉತ್ತಮವಾದ ಸೂರ್ಯರೂಪವನ್ನು ಪಡೆದಿರುವೆವು ॥

ಉದುತ್ಯಂ = ಸರ್ವಜ್ಞನೆಂದು ಪ್ರಸಿದ್ಧನಾಗಿ ಪ್ರಕಾಶಮಾನನಾದ ಸೂರ್ಯನನ್ನು ಸಕಲ ಲೋಕದವರೂ ನೋಡಿ ಕೃತಾರ್ಥರಾಗಲೆಂದು ಅಶ್ವ ಗಳು ತಾನೇ ಎತ್ತರವಾದ ಪ್ರದೇಶವನ್ನು ನಿಶ್ಚಯವಾಗಿ ಹೊಂದಿಸಿರುತ್ತೆ ॥

ಚಿತ್ರಂ ದೇವಾನಾಂ = ಇಂದ್ರಾದಿ ದೇವತೆಗಳ ಮಧ್ಯದಲ್ಲಿ ಸಕಲ ದೇವ ಸಮೂಹಾತ್ಮಕವಾಗಿ ಆಶ್ಚರ್ಯಕರವಾದ ಮಿತ್ರಾದಿಗಳ ಕಣ್ಣಿನಂತಿರುವ

ಸೂರ್ಯನೆಂಬ ಚಕ್ಷುಸ್ಸು ಉದಯ ಪರ್ವತವನ್ನು ಹೊಂದಿ ಸ್ಥಾವರ ಜಂಗಮ ಶರೀರಗಳಿಗೆ ನಿಯಾಮಕವಾಗಿ ಪೃಥಿವ್ಯಂತ್ರರಿಕ್ಷ ದ್ಯುಲೋಕಗಳನ್ನು ತನ್ನ ತೇಜಸ್ಸಿನಿಂದ ವ್ಯಾಪಿಸಿರುತ್ತೆ ||

ತಚ್ಚಕ್ಷುಃ = ಪ್ರಸಿದ್ಧರಾಗಿ ಎಲ್ಲರನ್ನೂ ಪ್ರಕಾಶಮಾಡುವ ದೇವತೆಗಳಿಗೋಸ್ಕರ ಇಡಲ್ಪಟ್ಟ ನಿರ್ಮಲವಾದ ಒಳ್ಳೆ ಬೆಳಕುಉಳ್ಳ ಪೂರ್ವ ದಿಕ್ಕಿನಲ್ಲಿ ಹುಟ್ಟಿದ ಸೂರ್ಯಮಂಡಲವನ್ನು ನೂರು ವರ್ಷಕಾಲ ನಾವು ನೋಡುವೆವು || ಇದರಂತೇ ಜೀವೇಮ ನಂದಾಮ ಮುಂತಾದಕ್ಕೆ ಅರ್ಥಗಳನ್ನು ತಿಳಿಯಬೇಕು ||

ಸಾಯಂಸಂಧ್ಯಾ ಮಂತ್ರಾರ್ಥ

ಅಗ್ನಿಶ್ಚ ಮಂತ್ರಕ್ಕೆ ಸೂರ್ಯಶ್ಚ ಮಂತ್ರದಂತೆ ಅರ್ಥ ಸತ್ಯೇಜ್ಯೋತಿಷಿ ಕಾಲತ್ರಯದಲ್ಲೂ ಬಾಧಿಸಲ್ಪಡದೇ ಇರುವ ಜ್ಯೋತಿಸ್ಸಿನಲ್ಲಿ ಎಂದು ಅರ್ಥ ||

ಸಾಯಂ ಸಂಧ್ಯೋಪಸ್ಥಾನ ಮಂತ್ರ || ಇಮಂಮೇವರುಣ = ಹೇ ವರುಣ ನಾನು ನಿನ್ನನ್ನು ಕರೆಯುವೆನು | ಮತ್ತು ನಿನ್ನನ್ನು ರಕ್ಷಕನನ್ನಾಗಿ ಅಪೇಕ್ಷಿಸುವೆನು ಇಂಥಾ ನನ್ನ ಆಹ್ವಾನವನ್ನು ಕೇಳಿ ನನಗೆ ಸುಖವನ್ನು ಕೊಡು |

ತತ್ತ್ವಾಯಾಮಿ = ವೇದ ಮಂತ್ರದಿಂದ ಸ್ತುತಿಮಾಡಿ ಋತ್ವಿಕನಾದ ನಾನು ನಿನ್ನನ್ನು ಹೊಂದುವೆನು | ಮತ್ತು ಯಜಮಾನನೂ ಕೂಡ ಚರುಪುರೋಡಾಶಾದಿಗಳಿಂದ ಅದನ್ನೇ ಪ್ರಾರ್ಥಿಸುವನು | ಆದುದರಿಂದ ಹೇ ವರುಣ ನೀನು ಅನಾದರ ಮಾಡದೇ ನಾನು ಮಾಡುವ ಸ್ತೋತ್ರವನ್ನು ಗಮನಿಸು ಹೆಚ್ಚಾದ ಸ್ತೋತ್ರಕ್ಕೆ ಪಾತ್ರನಾದ ನೀನು ನನ್ನ ಆಯುಸ್ಸನ್ನು ಕಡಿಮೆಮಾಡಬೇಡ ||

ಯಚ್ಚಿದ್ಧಿತೇ = ಹೇ ದೇವ ವರುಣ ನಾನು ನಿನಗೆ ಪ್ರತಿ ದಿನದಲ್ಲೂ ಮಾಡುವ ಪೂಜಾದಿಗಳಿಂದ ನಿನ್ನನ್ನು ಹಿಂಸಿಸುವೆನು | ಆದಾಗ್ಯೂ ಪ್ರಜೆಗಳಂತೇ ಸ್ವಾಮಿಯಾದ ನಿನ್ನ ಅನುಗ್ರಹಕ್ಕೆ ಪಾತ್ರನಾಗಿರುವೆನು ||

ಯತ್ಕಿಂಚೇದಂ = ಹೇವರುಣ ದೇವಸಮೂಹ ಜನರಲ್ಲಿ ಮನುಷ್ಯರಾದ ನಾವು ಸ್ವಲ್ಪವಾದರೂ ಯಾವ ಅಪಕಾರವನ್ನು ಮಾಡುವೆವೋ ಮತ್ತು ಅಜ್ಞಾನದಿಂದ ನಿನಗೋಸ್ಕರ ಮಾಡುವ ಕರ್ಮಗಳನ್ನು ಮಾಡದೇಬಿಟ್ಟರು ವೆವೋ । ಹೇ ದೇವ ನೀನು ಆ ಪಾಪದಿಂದ ನಮ್ಮಗಳನ್ನು ಹಿಂಸಿಸಬೇಡ ॥

ಕಿತವಾಸಃ = ಕೆಟ್ಟ ಮಾತನ್ನಾಡತಕ್ಕವರು ಕ್ರೀಡಾ ಸ್ವರ್ಗದಲ್ಲಿದ್ದು ದ್ವೇಷ ವಶಾತ್ ಪಾಪವನ್ನು ನಮ್ಮಗಳಲ್ಲಿ ಆರೋಪಿಸುವರೋ ಅಥವಾ ಯಾವ ಪಾಪವನ್ನು ನಾವು ನಿಜವಾಗಿ ಮಾಡಿರುವೆವೋ ಮತ್ತು ಯಾವ ಪಾಪವು ನಿಮ್ಮಿಂದ ಮಾಡಿದ್ದು ಮಾಡದಿರುವುದು ಜ್ಞಾಪಕವಾಗಿಲ್ಲವೋ ಆ ಸಮಸ್ತ ಪಾಪಗಳನ್ನೂ ಅಸಮರ್ಥಗಳನ್ನಾಗಿ ಮಾಡಿ ವಿಶೇಷವಾಗಿ ನಾಶಮಾಡು ॥ ಹೇವರುಣ ಅನಂತರ ನಾವು ನಿನಗೆ ಪ್ರಿಯರಾಗುವೆವು ॥

ಸಮಿದಾಧಾನವನ್ನು ನಿತ್ಯದಲ್ಲೂ ತಪ್ಪದೇ ಮಾಡಬೇಕು ॥ ಮಾಡು ವುದಕ್ಕೆ ಕಾರಣವನ್ನು ಮಾಡದಿದ್ದರೆ ದೋಷವನ್ನು ತಿಳಿಸುತ್ತಾರೆ ॥ ಪೂರ್ವ ದಲ್ಲಿ ಮೃತ್ಯುವು ಬ್ರಹ್ಮಚಾರಿಗಳನ್ನು ಹಿಂಸಿಸುತ್ತಾ ಇದ್ದ ಆ ಕಾಲದಲ್ಲಿ ಅಗ್ನಿ ಭಗವಂತನು ಬ್ರಹ್ಮಚಾರಿಗಳು ಮಾಡುವ ಸಮಿಧಾನದಿಂದ ಸಂತುಷ್ಟನಾಗಿ ಆ ಮೃತ್ಯು ಹಿಂಸೆಯನ್ನು ತಪ್ಪಿಸಿ ಇವರುಗಳನ್ನು ಸಂರಕ್ಷಿಸಿದನು । ಆದುದ ರಿಂದ ನಿತ್ಯದಲ್ಲೂ ಸಮಿದಾಧಾನ ಮಾಡುವ ಬ್ರಹ್ಮಚಾರಿಗಳಿಗೆ ಹೆಚ್ಚಾಗಿ ಮೃತ್ಯು ಭಯವಿಲ್ಲದೇ ಬ್ರಹ್ಮತೇಜೋಽಭಿವೃದ್ಧಿಯಾಗಿ ದೀರ್ಘಾಯುಸ್ಸ ಉಂಟಾಗುತ್ತೆಂದು ಹಾರೀತರು ಹೇಳಿರುತ್ತಾರೆ ॥

ಸಮಿದಾಧಾನ ಮಂತ್ರಗಳಿಗೆ ತಾತ್ಪರ್ಯಾರ್ಥ

ಪರಿತ್ವಾಗ್ನೇ = ಸಮಿದಾಧಾನದಲ್ಲ ಮೊದಲು ಅಗ್ನಿಸುತ್ತಲೂ ನೀರಿ ನಿಂದ ಶುದ್ಧಿಮಾಡುವಮಂತ್ರ—ಹೇ ಅಗ್ನೇ, ನಿನ್ನ ಸುತ್ತಲೂ ನೀರಿನಿಂದ ಆದರವಾಗಿ ಶುದ್ಧಿಮಾಡಿ ಆಯುಸ್ಸನ್ನೂ ಧನವನ್ನೂ ಪ್ರಾರ್ಥಿಸುವೆನು ॥ ಮತ್ತು ಉತ್ತಮಗಳಾದ ಪುತ್ರಪೌತ್ರ ಬ್ರಹ್ಮವರ್ಚಸ್ಸು ಪುಷ್ಟಿ ಗೃಹಪಾಲಕ ನಾದ ಆಚಾರ್ಯ । ಧಾರಣಾಬುದ್ಧಿ ಸಹಾಧ್ಯಾಯಿ ಬ್ರಹ್ಮಚಾರಿ ಇವುಗಳುಳ್ಳ ವನಾಗುವೆನು ॥

ಸಮಿತ್ತನ್ನು ಹೋಮಮಾಡುವ ಮಂತ್ರಗಳು ॥ ಅಗ್ನಯೇ ಸಮಿಧಂ ತೇಜಸ್ಸು ಧನ ಇವುಗಳುಳ್ಳ ಅಗ್ನಿದೇವನಿಗೋಸ್ಕರ ಈ ಸಮಿತ್ತನ್ನು ತಂದಿಥೇನೆ ಇಂಥಾ ನನ್ನನ್ನು ಈ ಸಮಿತ್ತುಗಳಿಂದ ನೀನು ಹ್ಯಾಗೆ ವೃದ್ಧಿಹೊಂದುವೆಯೋ ಹಾಗೆ ಆಯುಸ್ಸು ವರ್ಚಸ್ಸು ಲಾಭ ಮೇಧಾ ಅನ್ನಾದನ ಶಕ್ತಿ ಮುಂತಾದವು ಗಳಿಂದ ವೃದ್ಧಿಹೊಂದಿಸು ॥

ಎಧೋಽಸಿ = ಹೇ ಸಮಿತ್ ನೀನು ಅಗ್ನಿಗೆ ದೀಪಕನಾಗಿದ್ಧೀಯೋ ನಿನ್ನನ್ನು ಹೋಮಮಾಡುವ ನಾವು ಕೂಡ ವೃದ್ಧಿ ಹೊಂದುವೆವು ॥

ಸಮಿದಸಿ = ಹಿಂದಿನಂತೆ ತಿಳಿಯಬೇಕು ॥

ತೇಜೋಽಸಿ = ಪ್ರಕಾಶಕಾರಣನಾದ ನೀನು ನನ್ನಲ್ಲೂ ತೇಜಸ್ಸನ್ನು ಸ್ಥಾಪಿಸು ॥

ಅಪೋಅದ್ಯ = ಈಗ ಸಮಿದಾಧಾನ ಕರ್ಮವನ್ನು ಕ್ರಮವಾಗಿ ಮಾಡುವೆನು। ಈ ಸಮಿದಾಧಾನ ಕರ್ಮದಲ್ಲಿ ನನಗೆ ಆಸ್ಥೆಯು ಹೆಚ್ಚಲಿ । ಹವಿಸ್ಸನ್ನು ತೆಗೆದು ಕೊಂಡು ನಿನ್ನನ್ನು ಕುರಿತು ನಾನು ಪ್ರತ್ಯಹದಲ್ಲೂ ಬರುವೆನು । ಇಂಥಾ ನನ್ನನ್ನು ಪ್ರಕಾಶಗೊಳಿಸು ॥

ಸಂಮಾಗ್ನೇ = ಹೇ ಅಗ್ನೇ ನನಗೆ ವರ್ಚಸ್ಸು–ಪ್ರಜಾ–ಧನ–ಇವುಗಳನ್ನು ಕೊಡು ॥

ವಿದ್ಯುನ್ಮೇ ಅಸ್ಯ ಈ ಕರ್ಮವನ್ನು ಮಾಡುವ ನನ್ನನ್ನು ದೇವತೆಗಳು ಬಲ್ಲರು। ಋಷಿಗಳೊಡನೇ ಸೇರಿದ ಇಂದ್ರನೂ ಸಹ ನನ್ನನ್ನು ತಿಳಿದಿದಾನೆ ॥

ಅಗ್ನಯೇ ಬೃಹತೇ = ಸ್ವರ್ಗದಲ್ಲಿ ನಾಕನೆಂದೆನಿಸಿ ಪೂಜ್ಯನಾದ ಅಗ್ನಿ ದೇವನಿಗೆ ಈ ಹವಿಸ್ಸು ಚೆನ್ನಾಗಿ ಹುತವಾಗಲಿ ॥

ದ್ಯಾವಾ ಪೃಥಿವೀಭ್ಯಾಂ = ಭೂಲೋಕ ದ್ಯುಲೋಕಾಭಿಮಾನಿ ದೇವತೆ ಗಳಿಗೂ ಈ ಹವಿಸ್ಸು ಚೆನ್ನಾಗಿ ಹುತವಾಗಲಿ ॥

ಎಷಾತೇ ಅಗ್ನೇ – ಹೇ ಅಗ್ನೇ ನಿನಿಗೋಸ್ಕರ ನನ್ನಿಂದ ಈ ಸಮಿತ್ತು

ಕೊಡಲ್ಪಡುತ್ತೆ । ಅದರಿಂದ ನೀನು ವೃದ್ಧಿಹೊಂದಿ ಪೂರ್ಣನಾಗು ನಾನೂ ಕೂಡ ಆ ಸಮಿತ್ತಿನಿಂದ ವೃದ್ಧಿಹೊಂದಿ ಪೂರ್ಣನಾಗುವೆನು ॥

ಯೋಮಾಗ್ನೇ—ಹೇ ಅಗ್ನೇ ಭಾಗವನ್ನು ಹೊಂದಲು ಯೋಗ್ಯನಾದ ನನ್ನನ್ನು ಯಾವನು ಅಭಾಗನನ್ನಾಗಿ ಮಾಡಲಪೇಕ್ಷಿಸುವನೋ ಅವನನ್ನು ಅಭಾಗನನ್ನಾಗಿ ಮಾಡು । ನನ್ನನ್ನಾದರೋ ಭಾಗ ಉಳ್ಳವನನ್ನಾಗಿ ಮಾಡು ॥

ಸಮಿಧಮಾಧಾಯ—ಹೇ ಅಗ್ನೇ ನಾನು ಈ ಸಮಿತ್ತನ್ನು ಹೋಮಮಾಡಿ ವ್ರತವನ್ನು ಸಂಪೂರ್ಣಮಾಡುವೆನು ॥

ಉಪಸ್ಥಾನ ಮಂತ್ರ—ಯತ್ತೇ ಅಗ್ನೇ–ಹೇ ಅಗ್ನೇ ನಿನ್ನ ತೇಜಸ್ಸು ವರ್ಚಸ್ಸು ಮತ್ತು ಪಾಪನಾಶಕ ಶಕ್ತಿ ಯಾವದುಂಟೋ ನಿನ್ನ ಉಪಸ್ಥಾನದಿಂದ ನಾನೂ ಕೂಡ ತೇಜಸ್ವೀ ವರ್ಚಸ್ವೀ ಆಗಿ ನಿಷ್ಪಾಪನಾಗುವೆನು ॥

ಮಯಿಮೇಧಾಂ—ಅಗ್ನಿ ಭಗವಂತನು ನನ್ನಲ್ಲಿ ಬುದ್ಧಿಶಕ್ತಿಯನ್ನು ಸಂತಾನವನ್ನು ತೇಜಸ್ಸನ್ನು ಇಡಲಿ । ಇಂದ್ರನೂ ಕೂಡ ಮೇಧಾದಿ ಇಂದ್ರಿಯ ಶಕ್ತಿಯನ್ನಿಡಲಿ । ಸೂರ್ಯನೂ ಸಹ ಮೇಧಾದಿಗಳನ್ನಿಟ್ಟು ಪಾಪಗಳನ್ನು ದೂರ ಮಾಡುವ ತೇಜಶ್ಶಕ್ತಿಯನ್ನಿಡಲಿ ॥ ಸ್ವಸ್ತಿ ಶ್ರದ್ಧಾಂ ಮೇಧಾಂ ಇತ್ಯಾದಿಗಳನ್ನು ಹವ್ಯವಾಹನ ನಾಮಕನಾದ ನೀನು ಕೊಡು ॥

ಮಾನಸ್ತೋಕೇ—ಹೇ ರುದ್ರನಾಮಕಾಗ್ನಿಯೇ ॥ ನೀನು ನಮ್ಮಿಂದ ಪೂಜಿತನಾಗಿ ನಮ್ಮ ಪುತ್ರಪೌತ್ರಾಯುಸ್ಸು ಗೋವು ಅಶ್ವ ಇವುಗಳನ್ನು ಹಿಂಸಿಸ ಬೇಡ । ಇದಕ್ಕಾಗಿ ನಾವು ನಿನಿಗೆ ಸಮಿದಾದಿ ಹವಿಸ್ಸುಗಳನ್ನು ತಂದು ಕೊಟ್ಟು ನಮಸ್ಕಾರಮಾಡುವೆವು ॥

ಸೂರ್ಯ ನಮಸ್ಕಾರ ಮಂತ್ರಾರ್ಥ

ಉದ್ಯನ್ನದ್ಯಮಿತ್ರಮಹಃ— ನಾಶಯ–ಹೇ ಸೂರ್ಯ ಅನುಕೂಲವಾದ ತೇಜಸ್ಸುಳ್ಳ ನೀನು ಈ ದಿನ ಉದಯಿಸಿ ಉತ್ಕೃಷ್ಟವಾದ ಸ್ವರ್ಗಲೋಕವನ್ನು

ಹತ್ತುವವನಾಗಿ ನನ್ನ ಮನೋವ್ಯಥೆಯನ್ನು ಶರೀರ ಸಂಬಂಧವಾದ ಹರಿತವರ್ಣ ವನ್ನೂ ಅಂದರೆ ದುಃಖದಿಂದ ಉಂಟಾದ ಮತ್ತು ವ್ಯಾಧಿಯಿಂದ ಉಂಟಾದ ಶರೀರದ ವಿವರ್ಣ ವಿರೂಪಗಳನ್ನೂ ಸಹ ನಾಶಮಾಡು ||

ಶುಕೇಷುಮೇ ಹರಿಮಾಣಂ–ನಿದಧ್ಮಸಿ–ನನ್ನ ಶರೀರ ಸಂಬಂಧವಾದ ಈ ಹಚ್ಚೀ ಬಣ್ಣವನ್ನು ಗಿಣಿ ಎಂಬ ಪಕ್ಷಿಗಳಲ್ಲಿ ಅದರಲ್ಲೂ ಸ್ತ್ರೀ ಜಾತಿಯು ಈ ಬಣ್ಣವನ್ನೇ ಅಪೇಕ್ಷಿಸೋಣದರಿಂದ ಆ ಪಕ್ಷಿಗಳಲ್ಲೂ ಹರಿತಾಳೆ ವೃಕ್ಷಗಳಲ್ಲೂ ಸ್ಥಾಪಿಸುವೆವು ||

ಉದಗಾದಯಮಾದಿತ್ಯಃ–ದ್ವಿಷತೋರಧವ್—ಈ ಆದಿತ್ಯನು ನನ್ನ ಶತ್ರುಗಳನ್ನು ಹಿಂಸಿಸುತ್ತಾ ಸಕಲ ಬಲದಿಂದಲೂ ಕೂಡಿದವನಾಗಿ ಉದಿಸುವನು| ಯಾವ ಕಾರಣದಿಂದ ಈ ರೀತಿ ಉದಿಸುವನೋ ಆ ಕಾರಣದಿಂದ ನಾನು ಅವನ ಪ್ರಸಾದವನ್ನು ಹೊಂದಿ ಶತ್ರುಗಳಿಂದ ಉಂಟಾಗುವ ಹಿಂಸೆಯನ್ನು ನಾನು ನಿಶ್ಚಯವಾಗಿ ಹೊಂದಲಾರೆ ||

ಬ್ರಹ್ಮಯಜ್ಞ ಪ್ರಯೋಗ

ಪ್ರಾತಸ್ನಾನ ಸಂಧ್ಯಾಗ್ನಿಕಾರ್ಯಾದ್ಯನಂತರ ಯಾವ ಆಹಾರವನ್ನೂ ಮಾಡದೇ ಬ್ರಹ್ಮಯಜ್ಞಮಾಡಬೇಕು. ಮಧ್ಯಾಹ್ನ ಬ್ರಹ್ಮಯಜ್ಞಮಾಡಿದರೆ ಮಾಧ್ಯಾಹ್ನಿಕಮಾಡಿ ಮಾಡಬೇಕು | ಬ್ರಹ್ಮಯಜ್ಞ ತರ್ಪಣವನ್ನು ಮಾತ್ರ ಯಾವಾಗಲೂ ಮಾಧ್ಯಾಹ್ನಿಕಾನಂತರದಲ್ಲೇ ಮಾಡಬೇಕು ||

ಕಾಲುತೊಳದು ಎರಡು ಕೈಯಲ್ಲೂ ಪವಿತ್ರವನ್ನು ಧರಿಸಿ ದರ್ಭಾಸನದಲ್ಲಿ ಪೂರ್ವಮುಖನಾಗಿ ಕೂತು ದ್ವಿರಾಚಮನಮಾಡಿ ಮೂರು ಪ್ರಾಣಾಯಾಮ ಮಾಡಿ ಮಮೋಪಾತ್ತ....ಬ್ರಹ್ಮಯಜ್ಞೇನಯಕ್ಷ್ಯೇ = ಎಂದು ಸಂಕಲ್ಪಮಾಡಿ–

ವಿದ್ಯುದಸಿ ವಿದ್ಯಮೇ ಪಾಪ್ಮಾನಮೃತಾತ್ಸತ್ಯಮುಪೈಮಿ ಈ ಮಂತ್ರ ಹೇಳಿ ಕೈ ಗಳನ್ನು ಮಣಿಬಂಧದವರಿಗೆ ತೊಳದು ಮೂರುಸಲ ಆಚಮನದಂತೆ ಜಲಪಾನ

ಮಾಡಿ ಬೆರಳುಗಳಿಂದ ನೀರುಮುಟ್ಟಿ ಎರಡುಸಲ ತುಟಿಗಳನ್ನು ಒರಿಸಿ ಕೈತೊಳೆದು ಬೆರಳುಗಳಿಂದ ಶಿರಸ್ಸನ್ನು ಮುಟ್ಟಿ ದಕ್ಷಿಣ ವಾಮಕಣ್ಣುಗಳನ್ನೂ ಮುಟ್ಟಿ ಈ ಕ್ರಮದಿಂದಲೇ ಮೂಗು ಕಿವಿಗಳನ್ನೂ ಮುಟ್ಟಿ ಹೃದಯವನ್ನು ಮುಟ್ಟಬೇಕು– ಪುನಃ ನೀರನ್ನು ತೆಗೆದು ಎಡದ ಕೈಯನ್ನೂ ಕಾಲುಗಳನ್ನೂ ಪ್ರೋಕ್ಷಿಸಿ ದಕ್ಷಿಣ ಪಾದಹಸ್ತಗಳನ್ನೂ ವಾಮಪಾದ ಹಸ್ತಗಳಮೇಲಿಟ್ಟುಕೊಂಡು

ಓಮ್ ಭೂರ್ಭುವಸ್ಸ್ವಃ (ಸ್ಸುವಃ) ತತ್ಸವಿತುರ್ವರೇಣ್ಯಂ । ಭರ್ಗೋ ....ಧೀಮಹಿ । ಧಿಯೋ....ಪ್ರಚೋದಯಾತ್ ॥ ತತ್ಸವಿತುರ್ವರೇಣ್ಯಂ ಭರ್ಗೋ ....ಧೀಮಹಿ । ಧಿಯೋ....ಯಾತ್॥ ತತ್ಸವಿತುರ್ವರೇಣ್ಯಂ ಭರ್ಗೋ.... ಧೀಮಹಿ ಧಿಯೋ....ಪ್ರಚೋದಯಾತ್॥ ಈ ಗಾಯತ್ರೀ ಮಂತ್ರವನ್ನು ಈ ರೀತಿಯಾಗಿ ಹೇಳಬೇಕು ॥

ಅನಂತರ ಅಧ್ಯಯನ ಮಾಡಿದವರು ಶ್ರೀ ಗುರುಭ್ಯೋನಮಃ ಹರಿಃ ಓಮ್ ॥ ಹೇಳಿ ಇಷೇತ್ವಾ ಮೊದಲುಮಾಡಿ ಒಂದು ಪ್ರಶ್ನ ಅಥವಾ ಅವಕಾಶ ಇದ್ದಷ್ಟು ಹೇಳಿ ಮುಗಿದ ಮೇಲೆ ಹರಿಃ ಓಂ ಶ್ರೀ ಕೃಷ್ಣಾರ್ಪಣಮಸ್ತು ಹೇಳಿ ॥

ಓಮ್ ಭೂರ್ಭುವಸ್ಸುವ ಸ್ಸತ್ಯಂತಪಶ್ಶ್ರದ್ಧಾಯಾಂ ಜುಹೋಮಿ ಹೇಳಿ ॥ ನಮೋ ಬ್ರಹ್ಮಣೇ ನಮೋ ಅಸ್ತ್ವಗ್ನಯೇ ನಮಃ ಪೃಥಿವ್ಯೈ ನಮ

ಓಷಧೀಭ್ಯಃ । ನಮೋ ವಾಚೇ ನಮೋ ವಾಚಸ್ಪತಯೇ ನಮೋ ವಿಷ್ಣವೇ ಬೃಹತೇ ಕರೋಮಿ ॥ ಈ ಮಂತ್ರವನ್ನು ಮೂರು ಸಲ ಹೇಳಿ ವೃಷ್ಟಿರಸಿ ವೃಶ್ಚಮೇ ಪಾಪ್ಮಾನ ಮೃತಾತ್ಸತ್ಯಮುಪಾಗಾಮ್–ಈ ಮಂತ್ರವನ್ನು ಹೇಳಿ ಪೂರ್ವದಂತೆ ಕೈಗಳನ್ನು ತೊಳೆಯಬೇಕು–ಆಚಮನಮಾಡಿ (ಮನೆಗೆಬಂದು ಯಾವದಾದರೂ ದಕ್ಷಿಣೆ ಕೊಡಬೇಕು)

ಎರಡನೇ ದಿನದಿಂದ ಮುಂದಕ್ಕೆ ಸಾಕಾದಷ್ಟು ಹೇಳಿ ಈ ರೀತಿ ಮುಗಿಸ ಬೇಕು ॥

ಈ ರೀತಿ ವೇದವನ್ನು ಹೇಳಲಶಕ್ತರು ಪುರುಷ ಸೂಕ್ತವನ್ನಾದರೂ ಹೇಳ ಬೇಕು ॥

ಇದಕ್ಕೂ ಶಕ್ತಿಯಿಲ್ಲದವರು ಪ್ರಣವವ್ಯಾಹೃತಿಯುಕ್ತವಾದ ಗಾಯತ್ರಿ ಯನ್ನಾದರೂ ಮೂರು ಸಲ ಹೇಳಿ ಮುಗಿಸಬೇಕು । ಈ ಕರ್ಮವನ್ನು ಬಿಡದೇ ಮಾಡಬೇಕು ॥

ಹೀಗೆ ನಿತ್ಯದಲ್ಲೂ ಬ್ರಹ್ಮಯಜ್ಞವನ್ನು ಮಾಡಿ ವೇದಪಾರಾಯಣ ಮಾಡುವವರಿಗೆ ಅಪಾರವಾದ ಫಲ ಉಂಟೆಂದು ಸ್ವಾಧ್ಯಾಯ ಬ್ರಾಹ್ಮಣದಲ್ಲಿ ಹೇಳಿರುತ್ತೆ ॥

ಇದರಲ್ಲಿ ಒಂದೆರಡನ್ನು ಮಾತ್ರ ಇಲ್ಲಿ ತಿಳಿಸುತ್ತೇವೆ–ಇದರಿಂದ ಸರ್ವಕ್ರತು ಫಲಉಂಟು ಮತ್ತು ಮೃತ್ಯುವನ್ನು ಜಯಿಸಿ ದೇವರ್ಷಿ ಪಿತೃಋಣ ಮುಕ್ತನಾಗಿ ದೇವಪಿತೃಮಾರ್ಗಗಳಲ್ಲಿ ನಿಶ್ಶಂಕವಾಗಿ ಸಂಚಾರಮಾಡುತ್ತಾ ಸಮಸ್ತ ಪಾಪ ಗಳಿಂದಲೂ ಬಿಡಲ್ಪಟ್ಟವನಾಗಿ ಬ್ರಹ್ಮ ಸಾಯುಜ್ಯವನ್ನು ಹೊಂದುವದರಲ್ಲಿ ಸಂಶಯವಿಲ್ಲವೆಂದು ನಂಬಬಹುದು ॥

ಬ್ರಹ್ಮಯಜ್ಞ ತರ್ಪಣಂ

ಆಚಮನ-ಪ್ರಾಣಾಯಾಮ-ಮಮ ಉಪಾತ್ತ-ಪ್ರೀತ್ಯರ್ಥಂ-ದೇವರ್ಷಿ ಪಿತೃ ತರ್ಪಣಂ ಕರಿಷ್ಯೇ || ದೇವತೀರ್ಥದಿಂದ ದೇವತರ್ಪಣ ಮಾಡಬೇಕು ||

ಓಂ ಬ್ರಹ್ಮಾದಯೋಯೇದೇವಾಃ ತಾಂ ದೇವಾಂ ಸ್ತರ್ಪಯಾಮಿ||
" ಸರ್ವಾಂ ದೇವಾಂ ಸ್ತರ್ಪಯಾಮಿ ||
" ಸರ್ವದೇವಗಣಾಂ ಸ್ತರ್ಪಯಾಮಿ ||
" ಸರ್ವದೇವಪತ್ನೀ ಸ್ತರ್ಪಯಾಮಿ ||
" ಸರ್ವದೇವಗಣಪತ್ನೀ ಸ್ತರ್ಪಯಾಮಿ ||
" ಸರ್ವದೇವ ಪುತ್ರಾಂ ಸ್ತರ್ಪಯಾಮಿ ||
" ಸರ್ವದೇವಪೌತ್ರಾಂ ಸ್ತರ್ಪಯಾಮಿ ||
" ಭೂ ರ್ದೇವಾಂ ಸ್ತರ್ಪಯಾಮಿ ||
" ಭುವೋ ದೇವಾಂ ಸ್ತರ್ಪಯಾಮಿ ||
" ಸುವರ್ದೇವಾಂ ಸ್ತರ್ಪಯಾಮಿ ||
" ಭೂರ್ಭುವಸ್ಸುವರ್ದೇವಾಂ ಸ್ತರ್ಪಯಾಮಿ ||

ನಿವೀತೀ || ಋಷಿತೀರ್ಥದಿಂದ ಎರಡು ಸಲ ತರ್ಪಣ ಮಾಡಬೇಕು ||

ಓಂ ಕೃಷ್ಣದ್ವೈಪಾಯನಾದಯೋ ಯೇ ಋಷಯಃ ತಾನೃಷೀಂ ಸ್ತರ್ಪಯಾಮಿ||
" ಸರ್ವಾನೃಷೀಂ ಸ್ತರ್ಪಯಾಮಿ ||
" ಸರ್ವ ಋಷಿಗಣಾಂ ಸ್ತರ್ಪಯಾಮಿ ||
" ಸರ್ವ ಋಷಿಪತ್ನೀ ಸ್ತರ್ಪಯಾಮಿ ||
" ಸರ್ವ ಋಷಿಗಣಪತ್ನೀ ಸ್ತರ್ಪಯಾಮಿ ||
" ಸರ್ವ ಋಷಿಪುತ್ರಾಂ ಸ್ತರ್ಪಯಾಮಿ ||
" ಸರ್ವ ಋಷಿಪೌತ್ರಾಂ ಸ್ತರ್ಪಯಾಮಿ ||
" ಪ್ರಜಾಪತಿಂ ಕಾಂಡಋಷಿಂ ತರ್ಪಯಾಮಿ ||
" ಸೋಮಂ ಕಾಂಡಋಷಿಂ ತರ್ಪಯಾಮಿ ||

ಓಂ ಅಗ್ನಿಂ ಕಾಂಡಋಷಿಂ ತರ್ಪಯಾಮಿ ||
" ವಿಶ್ವಾನ್ದೇವಾನ್ಕಾಂಡಋಷೀಂ ಸ್ತರ್ಪಯಾಮಿ ||
" ಸಾಂಹಿತೀರ್ದೇವತಾ ಉಪನಿಷದ ಸ್ತರ್ಪಯಾಮಿ ||
" ಯಾಜ್ಞಿಕೀರ್ದೇವತಾ ಉಪನಿಷದ ಸ್ತರ್ಪಯಾಮಿ ||
" ವಾರುಣೀರ್ದೇವತಾ ಉಪನಿಷದ ಸ್ತರ್ಪಯಾಮಿ ||
" ಹವ್ಯವಾಹಂ ತರ್ಪಯಾಮಿ ||
" ವಿಶ್ವಾನ್ದೇವಾನ್ಕಾಂಡಋಷೀಂ ಸ್ತರ್ಪಯಾಮಿ ||
ಓಂ ಬ್ರಹ್ಮತೀರ್ಥದಿಂದ–ಬ್ರಹ್ಮಾಣಂ ಸ್ವಯಂಭುವಂ ತರ್ಪಯಾಮಿ ||
" ವಿಶ್ವಾನ್ದೇವಾನ್ಕಾಂಡಋಷೀಂ ಸ್ತರ್ಪಯಾಮಿ ||
" ಅರುಣಾನ್ಕಾಂಡಋಷೀಂ ಸ್ತರ್ಪಯಾಮಿ ||
" ಸದಸಸ್ಪತಿಂ ತರ್ಪಯಾಮಿ ||
" ಋಗ್ವೇದಂ ತರ್ಪಯಾಮಿ ||
" ಯಜುರ್ವೇದಂ ತರ್ಪಯಾಮಿ ||
" ಸಾಮವೇದಂ ತರ್ಪಯಾಮಿ ||
" ಅಥರ್ವಾಗಿರಸಂ ತರ್ಪಯಾಮಿ ||
" ಇತಿಹಾಸ ಪುರಾಣಂ ತರ್ಪಯಾಮಿ ||
" ಕಲ್ಪಂ ತರ್ಪಯಾಮಿ ||

ಪ್ರಾಚೀನಾವೀತೀ || ಪಿತೃತೀರ್ಥದಿಂದ || ಸೋಮಃ ಪಿತೃಮಾನ್ ಯಮೋಽಂಗಿರಸ್ವಾನ್ ಅಗ್ನಿಕವ್ಯವಾಹನಾದಯೋಯೇ ಪಿತರಃ || ಮೂರು ಸಲ ತರ್ಪಣ ||

ಓಂ ತಾನ್ ಪಿತೄಂ ಸ್ತರ್ಪಯಾಮಿ ||
" ಸರ್ವಾನ್ ಪಿತೄಂ ಸ್ತರ್ಪಯಾಮಿ ||
" ಸರ್ವಪಿತೃಗಣಾಂ ಸ್ತರ್ಪಯಾಮಿ ||
" ಸರ್ವಪಿತೃಪತ್ನೀ ಸ್ತರ್ಪಯಾಮಿ ||
" ಸರ್ವಪಿತೃಗಣಪತ್ನೀ ಸ್ತರ್ಪಯಾಮಿ ||
" ಸರ್ವಪಿತೃಪುತ್ರಾಂ ಸ್ತರ್ಪಯಾಮಿ ||

" ಸರ್ವಪಿತೃಪೌತ್ರಾಂ ಸ್ತರ್ಪಯಾಮಿ ||

ತಂದೆಯಿಲ್ಲದವರು ಸರ್ವತ್ರ ಗೋತ್ರನಾಮಗಳನ್ನು ಹೇಳಿ ತರ್ಪಣ ||

ಓಂ ಪಿತೃನ್ ಸ್ತರ್ಪಯಾಮಿ ||
" ಪಿತಾಮಹಾಂ ಸ್ತರ್ಪಯಾಮಿ ||
" ಪ್ರಪಿತಾಮಹಾಂ ಸ್ತರ್ಪಯಾಮಿ ||
" ಮಾತೄ ಸ್ತರ್ಪಯಾಮಿ ||
" ಪಿತಾಮಹೀ ಸ್ತರ್ಪಯಾಮಿ ||
" ಪ್ರಪಿತಾಮಹೀ ಸ್ತರ್ಪಯಾಮಿ ||
ಓಂ ಮಾತಾಮಹಾಂ ಸ್ತರ್ಪಯಾಮಿ ||
" ಮಾತುಃ ಪಿತಾಮಹಾಂ ಸ್ತರ್ಪಯಾಮಿ ||
" ಮಾತುಃ ಪ್ರಪಿತಾಮಹಾಂ ಸ್ತರ್ಪಯಾಮಿ ||
" ಮಾತಾಮಹೀ ಸ್ತರ್ಪಯಾಮಿ ||
" ಮಾತುಃ ಪಿತಾಮಹೀ ಸ್ತರ್ಪಯಾಮಿ ||
" ಮಾತುಃ ಪ್ರಪಿತಾಮಹೀ ಸ್ತರ್ಪಯಾಮಿ ||

(ಕೆಲವರು ಪಿತೃವ್ಯ ಮಾತುಳಾದಿಕಾರುಣ್ಯಪಿತೃಗಳಿಗೂ ಉಂಟೆಂದು ಹೇಳುತ್ತಾರೆ).

ಪಿತೃವಂಶ್ಯಾಃ ಮಾತೃವಂಶ್ಯಾಃ ಯೇಚಾನ್ಯೇ ಮತ್ತಉದಕಮರ್ಹನಿ ತಾನ್ ಸ್ವಧಾನಮಸ್ತರ್ಪಯಾಮಿ || ಇದರಿಂದ ಮೂರುಸಲ ತರ್ಪಣ ||

ಉಪವೀತಿ—ಆಚಮನ ||

ಅಶಕ್ತರು ಉಪವೀತಿಯಿಂದ ಆ ಬ್ರಹ್ಮ ಸ್ತಂಬಪರ್ಯನ್ತಂ ಜಗತ್ತೃಪ್ಯತು|| ಹೀಗೆ ೩ ಅಂಜಲಿಯನ್ನಾದರೂ ಕೊಡಬೇಕೆಂದು ವಿಧಿ ಇರುತ್ತೆ ||

ಅನೇನ ದೇವಋಷಿ ಪಿತೃತರ್ಪಣೇನ ವಾಸುದೇವಃ ಪ್ರೀಣಾತು ||

ಈ ರೀತಿ ಬ್ರಹ್ಮಯಜ್ಞ ತರ್ಪಣಮಾಡಬೇಕು.

ವೇದ ಶಾಸ್ತ್ರಗಳನ್ನು ನಂಬಿರುವ ಸದ್ಬ್ರಾಹ್ಮಣರು ಈ ಗ್ರಂಥದಲ್ಲಿ ಸೂಚಿಸಿರುವಂತೆ ಶೌಚಾಚಾರಸ್ನಾನ ಸಂಧ್ಯಾದಿ ಕರ್ಮಗಳನ್ನು ಭಕ್ತಿಯಿಂದ ಮಾಡಿದರೆ ಪಾಪಗಳಿಂದ ಮುಕ್ತರಾಗಿ ಉತ್ತಮವಾದ ಐಹಿಕಾಮುಷ್ಮಿಕ ಪದವಿಯನ್ನು ನಿಸ್ಸಂಶಯವಾಗಿ ಅನುಭವಿಸುವರು.

ಕ್ಷಮಧ್ವಂ ಮೇಽಪರಾಧಂ ಕರಕೃತಂ ಬುದ್ಧಿಕೃತಂಚಸನ್ತಃ ||

ನಿತ್ಯ ದೇತಾರ್ಚನಕರ್ಮ ಪರಿಭಾಷಾ

(ಶ್ಲೋಕ) ವಿಧಾಯ ದೇವತಾಪೂಜಾಂ ಪ್ರಾತರ್ಹೋಮಾದನಂತರಂ ಕುರ್ವೀತ ದೇವತಾಪೂಜಾಂ ಜಪಯಜ್ಞಾದನಂತರಂ || ದೇವಾರ್ಚನಂ ಪ್ರಕರ್ತವ್ಯಂ ತ್ರಿಕಾಲೇಽಪಿ ಯಥಾಕ್ರಮಂ | ಅಶಕ್ತೌ ವಿಸ್ತರಾತ್ಪ್ರಾತಃ ಮಧ್ಯಾಹ್ನೇ ಗಂಧಮಾದಿತಃ || ಸಾಯಂ ನೀರಾಜನಂ ಕುರ್ಯಾತ್ ತ್ರಿಕಾಲೇ ತುಳಸೀದಳಂ ||

ಅರ್ಥ—ಬ್ರಾಹ್ಮಣೋತ್ತಮನು–ಸಂಧ್ಯಾಜಪಾನಂತರ ; ವಿಷ್ಣು–ಶಿವ ಸೂರ್ಯ–ವಿನಾಯಕ–ಶಕ್ತಿ ಈ ದೇವತೆಗಳಲ್ಲಿ ತನಗೆ ಇಷ್ಟವಾದ ದೇವತೆಯನ್ನು ಅಥವಾ ಪಂಚಾಯತನ ದೇವತೆಗಳನ್ನಾಗಲೀ ಪ್ರಾತಃ–ಮಧ್ಯಾಹ್ನ ಸಾಯಂಕಾಲವೆಂಬ ತ್ರಿಕಾಲದಲ್ಲಿಯೂ; ಅಶಕ್ತನಾದವನು ಬೆಳಿಗ್ಗೆ ಒಂದೇ ಕಾಲದಲ್ಲಾದರೂ; ಪ್ರಣವ ರುದ್ರ ಗಾಯತ್ರೀ–ತ್ರ್ಯಂಬಕ–ಶಿವಪಂಚಾಕ್ಷರೀ ಅಷ್ಟಾಕ್ಷರೀ–ದ್ವಾದಶಾಕ್ಷರೀ–ಪುರುಷಸೂಕ್ತ ಇವುಗಳಲ್ಲಿ ಯಾವುದೊಂದು ಮಂತ್ರಗಳಿಂದಲಾದರೂ ಷೋಡಶೋಪಚಾರ ಪೂಜೆಯನ್ನು ಮಾಡಬಹುದು.

ಶಾಂಡಿಲ್ಯಃ (ಶ್ಲೋಕ) ನ ಹುಂಕುರ್ಯಾನ್ನವಾ ಜಲ್ಪೇದ್ವಶೀ ಮೌನ್ಯರ್ಚಯೇದ್ಧರಿಂ | ಯನ್ನೋಪಪದ್ಯತೇ ಕಿಂಚಿತ್ತದ್ಧ್ಯಾಯೇನ್ಮನಸೈವತು || ಸಂಪದ್ಯತೇತು ಸರ್ವಂ ವೈ ದೇವದೇವಸ್ಯಶಾರ್ಙ್ಗಿಣಃ ||

ಅರ್ಥ— ಹರಿಹರಾದಿ ಪೂಜಾಕಾಲದಲ್ಲಿ ಹುಂಕಾರವಾಗಲಿ ಮಾತುಗಳನ್ನಾಗಲಿ ಆಡಬಾರದು. ದೇವರಿಗೆ ಅಧೀನನಾಗಿ ಮೌನದಿಂದ ಪೂಜಿಸಬೇಕು. ಪೂಜಾಪದಾರ್ಥಗಳಲ್ಲಿ ಯಾವುದು ಲಭಿಸದೇ ಇದ್ದರೂ; ಆಪದಾರ್ಥವನ್ನು

ಮನಸ್ಸಿನಿಂದಲೇ ಧ್ಯಾನಿಸಿದರೆ ಆ ಸಮಸ್ತವೂ ದೇವದೇವನಿಗೆ ಉಂಟಾಗು ವುದು ||

(ಶ್ಲೋಕ) ವಕ್ಷ್ಯೇ ಪುರುಷಸೂಕ್ತಸ್ಯ ವಿಧಾನಂತ್ವರ್ಚನಂ ಪ್ರತಿ | ಸ್ನಾತ್ವಾ ಯಥೋಕ್ತ ವಿಧಿನಾಪ್ರಾಙ್ಮುಖಶ್ಶುದ್ಧಮಾನಸಃ || ದೇವಸ್ಯಾಭಿ ಮುಖೋ ಭೂತ್ವಾ ವಿಷ್ಣ್ವಾರಾಧನಮಾಚರೇತ್ ||

ಯಥಾವಿಧಿಯಾಗಿ ಸ್ನಾನವನ್ನುಮಾಡಿ ಶುದ್ಧಮನಸ್ಸಿನಿಂದ ಪೂರ್ವಾಭಿ ಮುಖನಾಗಿ; ಅಥವಾ ದೇವರ ಎದುರಿಗೆ ಕುಳಿತು ಪೂಜೆಯನ್ನು ಮಾಡ ಬೇಕು.

(ಶ್ಲೋಕ) ಕಲಶಂ ಶಂಖ ಘಂಟೇಚ ಪಾದ್ಯಾರ್ಘ್ಯಾಚಮನೀಯಕಂ ಸಂಪೂಜ್ಯ ಪ್ರೋಕ್ಷ್ಯಚಾತ್ಮಾನಂ ಪೂಜಾಸಂಭಾರಮೇವಚ || ಧ್ಯಾಯೇದಭಿ ಮತಾಂ ವಿಷ್ಣ್ವಾದಿಮೂರ್ತಿಂ ಸಂಪೂಜಯೇತ್ತತಃ ||

ಕಲಶ–ಶಂಖ–ಘಂಟಾ–ಪಾದ್ಯ–ಅರ್ಘ್ಯ–ಆಚಮನೀಯ ಇವುಗಳನ್ನೆಲ್ಲಾ ಪೂಜಿಸಿ; ಕಲಶ–ಶಂಖೋದಕಗಳಿಂದ ತನಗೂ ಪೂಜಾದ್ರವ್ಯಗಳಿಗೂ ಪ್ರೋಕ್ಷಣ ಮಾಡಿ; ಪುರುಷಸೂಕ್ತ ವಿಧಾನಾದಿಗಳಿಂದ ವಿಷ್ಣ್ವಾದಿ ಮೂರ್ತಿಗಳನ್ನು ಪೂಜಿಸಬೇಕು.

ಸಾಲಗ್ರಾಮ—ಬಾಣಲಿಂಗ–ಉದ್ಭವಮೂರ್ತಿ ಮುಂತಾದವುಗಳಿಗೆ ಆವಾಹನೋದ್ವಾಸನೆಗಳಿಲ್ಲ. ಅಸ್ಥಿರವಾದ ದೇವತೆಯಲ್ಲಿ ವಿಕಲ್ಪವಾಗಿ ಮಾಡ ಬಹುದು. ಸ್ಥಂಡಿಲದಲ್ಲಿ ಆವಾಹನ ವಿಸರ್ಜನೆಗಳುಂಟು. ಸಾಲಿಗ್ರಾಮಾದಿ ಗಳಲ್ಲಿ ಪುಷ್ಪಾಕ್ಷತೆಗಳನ್ನು ಮಂತ್ರಾಂತದಲ್ಲಿ "ಶ್ರೀ ಮಹಾವಿಷ್ಣವೇ ಹರಾಯ" ಎಂಬುದಾಗಿ ಚತುರ್ಥೀ ವಿಭಕ್ತಿಯನ್ನು ಹೇಳಿ ಅರ್ಪಿಸಬೇಕು. ಪಂಚಾಯತನ ಪೂಜಾ ಪಕ್ಷದಲ್ಲಿ ಶ್ರೀ ವಿಷ್ಣವೇ–ಶಿವ–ವಿನಾಯಕ–ಸೂರ್ಯ ಶಕ್ತಿಪರಿವೃತ ಶ್ರೀ ಮಹಾವಿಷ್ಣವೇ ಎಂಬುದಾಗಿ ಆಗಲೀ ಉಚ್ಚಾರಣೆಮಾಡಬೇಕು ||

(ಪಂಚಾಯತನ ದೇವತೋಚ್ಚಾರಣಕ್ರಮಃ)

(ಶ್ಲೋಕ) ವಿಷ್ಣುರ್ಮಧ್ಯೇ ಶಿವೇಭಾಸ್ಯ ಸೂರ್ಯಾರ್ಯಾಃ ಈಶದಿಕ್ಕ್ರಮಾತ್|| ಶಂಭೌಮಧ್ಯೇ ವಿಷ್ಣು ಸೂರ್ಯ ಗಜಾಸ್ಯಾರ್ಯಾಃ ತಥಾಕ್ರಮಾತ್|| ರತಾಮಧ್ಯಗತೇ

ರುದ್ರ ಗಣೇಶಾಚ್ಯುತಶಕ್ತಯಃ || ಮಧ್ಯೇದೇವೀ ವಿಷ್ಣು ಶಿವ ಗಣೇಶರವಯಃ ಕ್ರಮಾತ್ || ಮಧ್ಯೇ ಗಣಪತಿರ್ವಿಷ್ಣು ಶಿವಸೂರ್ಯಾಂಬಿಕಾಸ್ತಥಾ || ಈಶಾನ್ಯ ದಿಕ್ರಮೇಣೈವ ಪಂಚಾಯತನ ಪಂಚಕಂ ||

ಈ ಶ್ಲೋಕಗಳಲ್ಲಿ ಹೇಳಿರುವಂತೆ ಪಂಚಾಯತನ ದೇವತೆಗಳಲ್ಲಿ; ಇಷ್ಟ ದೇವತೆಗಳನ್ನು ಮಧ್ಯದಲ್ಲಿಟ್ಟು ನಾಲ್ಕು ದೇವತೆಗಳನ್ನು ಈಶಾನ ದಿಕ್ಕಿನಿಂದ ಕ್ರಮವಾಗಿಟ್ಟು ಪೂಜೆಯನ್ನು ನಡಿಸಬೇಕು.

|| ಪೂಜಾಂವಕ್ಷ್ಯೇಯಥಾಕ್ರಮಂ ||

(ಶ್ಲೋಕ) ಆವಾಹನಾಸನೇ ಪಾದ್ಯಮರ್ಘ್ಯಮಾಚಮನೀಯಕಂ | ಮಧು ಪರ್ಕಂ ತಥಾ ಸ್ನಾನಂ ವಸ್ತ್ರಂ ಚೈವೋಪವೀತಕಂ || ಗಂಧಂ ಪುಷ್ಪಂಚ ಧೂಪಂಚ ತಥಾದೀಪಂ ಪ್ರಕಲ್ಪಯೇತ್ || ನೈವೇದ್ಯಂ ಚೈವತಾಂಬೂಲಂ ಪ್ರದಕ್ಷಿಣ ನಮಸ್ಕೃತೀ || ಉದ್ವಾಸನಂಚ ಕ್ರಮಶಃ ಕುರ್ಯಾತ್ಪೂಜಾ ಪರಾಯಣಃ ||

ಈ ಶ್ಲೋಕದಲ್ಲಿ ಹೇಳಿರುವಂತೆ ಆವಾಹನಾದಿ ಕ್ರಮವನ್ನನುಸರಿಸಿ ಉದ್ವಾಸನಾಂತವಾಗಿ ಷೋಡಶೋಪಚಾರವನ್ನು ಮಾಡಬೇಕು ||

ನೈವೇದ್ಯಕ್ಕೆ ಪರ್ಯಾಯಪದಾರ್ಥಗಳು ಉಕ್ತವಾಗಿದೆ ||

(ಶ್ಲೋಕ) ನೈವೇದ್ಯಸ್ಯತ್ವಭಾವೇತು ಫಲಾನಿತು ನಿವೇದಯೇತ್ | ಫಲಾ ನಾಮಪ್ಯಭಾವೇತು ತೃಣಗುಲ್ಮೌಷಧೀರಪಿ | ಓಷಧೀನಾಮಭಾವೇತು ತೋಯಾ ನ್ಯಪಿ ನಿವೇದಯೇತ್ | ತದಲಾಭೇತು ಸರ್ವತ್ರ ಮಾನಸಂ ಪ್ರವರಂ ಸ್ಮೃತಂ || ಪಾರ್ಥಕ್ಯಾಭಾವೇ ಯಥಾಂಶತ ಇತಿ ವದೇತ್ ||

ನೈವೇದ್ಯಕ್ಕೆ ಶುದ್ಧವಾದ ಅನ್ನಭಕ್ಷ್ಯಾದಿಗಳು ಅಭಾವವಾದರೆ, ಫಲ ಗಳನ್ನೂ; ಫಲಾಭಾವದಲ್ಲಿ ತೃಣಗುಲ್ಮಾದಿಗಳನ್ನೂ ; ಅದಕ್ಕೂ ಅಭಾವವಾದರೆ ಶುದ್ಧೋದಕವನ್ನೂ; ತದಭಾವದಲ್ಲಿ ನಿವೇದನ ಪದಾರ್ಥಗಳನ್ನು ಮನಸ್ಸಿ ನಿಂದಲೇ ಕಲ್ಪಿಸಿ ನಿವೇದನಮಾಡುವದು ಬಹಳ ಪ್ರಶಸ್ತವಾದದ್ದು || ಮತ್ತು ಎಲ್ಲಾ ದೇವತೆಗಳಿಗೂ ಬೇರೆ ಬೇರೆ ನಿವೇದನ ಪದಾರ್ಥಗಳು ಇಲ್ಲದಿದ್ದರೆ ಸಿದ್ಧ ವಾಗಿರುವ ಪದಾರ್ಥವನ್ನೇ ಯಥಾಭಾಗಂ ಎಂದು ಹೇಳಬಹುದು ||

(ಶ್ಲೋಕ) ಗಾಂಡೂಷಿಕಂ ಜಲಂ ದದ್ಯಾತ್ ದದ್ಯಾದಾಚಮನಂ ತತಃ | ಹಸ್ತವಾಸಃ ಸಕರ್ಪೂರಂ ಮುಕುಟಂ ಭೂಷಣಾನಿಚ|| ಆದರ್ಶಯೇತ್ತಥಾಽಽದರ್ಶಂ ಕಲ್ಪಯೇಚ್ಛತ್ರ ಚಾಮರೇ | ಮಹಾನೀರಾಜನಂ ಶ್ರೀಮನ್ಮಂಗಳೇಶಾಯ ಕಲ್ಪಯೇತ್ || ಕರ್ಪೂರಂ ತುಳಸೀ ಪತ್ರಂ ತಾಂಬೂಲಂ ಯೋನಿವೇದಯೇತ್ | ವಿಷ್ಣವೇ ಭಕ್ತಿಯುಕ್ತಶ್ಚ ವಿಷ್ಣುಲೋಕೇ ಮಹೀಯತೇ ||

ನಿವೇದನಾನಂತರಂ ಉತ್ತರಾಪೋಶನ ಹಸ್ತ–ಪಾದಪ್ರಕ್ಷಾಳನ ಆಚ ಮನೀಯ ಜಲದಾನ ಕರವಸ್ತ್ರ ಕರೋದ್ವರ್ತನ ಭೂಷಣ ತಾಂಬೂಲ ನಿವೇದನ ಮಹಾನೀರಾಜನ ಆದರ್ಶದರ್ಶನ ಛತ್ರಚಾಮರ ಕಲ್ಪನ ಕರ್ಪೂರ ತುಳಸೀ ಪತ್ರ ಮುಂತಾದವುಗಳನ್ನು ಭಕ್ತಿಯುಕ್ತನಾಗಿ ವಿಷ್ಣ್ವಾದಿಗಳಿಗೆ ಅರ್ಪಿಸಿದರೆ ವೈಕುಂಠ ದಲ್ಲಿ ಪೂಜ್ಯನಾಗಿರುತ್ತಾನೆ ||

|| ಪ್ರದಕ್ಷಿಣ ಅಷ್ಟಾಂಗಾದಿ ಪ್ರಣಾಮವಿಧಿಃ ||

(ಶ್ಲೋಕ) ವಿಷ್ಣೋರ್ವಿಮಾನಂ ಯಃ ಕುರ್ಯಾತ್–ಸಕೃದ್ಭಕ್ತ್ಯಾ ಪ್ರದಕ್ಷಿಣಂ| ಅಶ್ವಮೇಧ ಸಹಸ್ರಸ್ಯ ಫಲಮಾಪ್ನೋತಿಮಾನವಃ || ಪ್ರಣಮ್ಯ ದಂಡವದ್ಭೂಮೌ ನಮಸ್ಕಾರೇಣಯೋಽರ್ಚಯೇತ್ | ಸಯಾಂಗತಿಮವಾಪ್ನೋತಿ ನ ತಾಂಕ್ರತು ಶತೈರಪಿ ||

ದೋರ್ಭ್ಯಾಂ ಪದ್ಭ್ಯಾಂ ಚ ಜಾನುಭ್ಯಾಂ ಉರಸಾಶಿರಸಾದೃಶಾ| ಮನಸಾ ವಚಸಾ ಚೇತಿ ಪ್ರಣಾಮೋಷ್ಟಾಂಗ ಈರಿತಃ|| ಜಾನುಭ್ಯಾಂ ಚೈವ ಬಾಹುಭ್ಯಾಂ ಶಿರಸಾವಚಸಾಧಿಯಾ | ಪಂಚಾಂಗಕಃ ಪ್ರಣಾಮಸ್ಸ್ಯಾತ್ಪೂಜಾಸು ಪ್ರಚುರಾವಿಮೌ ||

ಪ್ರದಕ್ಷಿಣ ಪೂರ್ವಕ ಅಷ್ಟಾಂಗ ಪ್ರಣಾಮ–ಪಂಚಾಂಗ ಪ್ರಣಾಮಗಳನ್ನು ಪರಮಪುರುಷನಾದ ವಿಷ್ಣುವನ್ನು ಕುರಿತು ಭಕ್ತಿಯಿಂದ ಒಂದಾವರ್ತಿಮಾಡಿದರೂ ಮನುಷ್ಯನು ಸಹಸ್ರಾಶ್ವಮೇಧಯಾಗದ ಫಲವನ್ನು ಹೊಂದುತ್ತಾನೆ. ದಂಡಾ ಕಾರವಾಗಿ ಯಾವ ಮನುಷ್ಯನು ಭೂಮಿಯಲ್ಲಿ ಬಿದ್ದು ಅಷ್ಟಾಂಗ ಮತ್ತು ಪಂಚಾಂಗ ಪ್ರಣಾಮಗಳಿಂದ ಪೂಜಿಸುತ್ತಾನೋ ಆತನು ನೂರಾರು ಕ್ರತು ಗಳಿಂದ ಉಂಟಾಗತಕ್ಕ ಫಲಕ್ಕಿಂತಲೂ ಹೆಚ್ಚಾದ ಫಲವನ್ನು ಹೊಂದುತ್ತಾನೆ ||

ಅಷ್ಟಾಂಗ ಪ್ರಣಾಮ ಲಕ್ಷಣ ತೋಳುಗಳಿಂದಲೂ: ಪಾದಗಳಿಂದಲೂ; ಜಾನುಗಳಿಂದಲೂ; ಎದೆಯಿಂದಲೂ; ಶಿರಸ್ಸಿನಿಂದಲೂ; ಕಣ್ಣುಗಳಿಂದಲೂ; ಮನಸ್ಸಿನಿಂದಲೂ; ನುಡಿಗಳಿಂದಲೂ ಮಾಡುವ ಪ್ರಣಾಮವು ಅಷ್ಟಾಂಗವೆನಿಸುವುದು ||

ಪಂಚಾಂಗ ಪ್ರಣಾಮಲಕ್ಷಣ || ಜಾನುಗಳಿಂದಲೂ ತೋಳುಗಳಿಂದಲೂ ಶಿರಸ್ಸಿನಿಂದಲೂ ವಚನಗಳಿಂದಲೂ, ಬುದ್ಧಿಯಿಂದಲೂ ಮಾಡುವ ನಮಸ್ಕಾರವು ಪಂಚಾಂಗ ಪ್ರಣಾಮವೆನಿಸುವುದು ||

(ಶ್ಲೋಕ) ತುಳಸೀ ಮಿಶ್ರಿತಂ ತೀರ್ಥಂ ಪಿಬೇನ್ಮೂರ್ಧ್ನಿಚಧಾರಯೇತ್ | ಸಾಲಗ್ರಾಮ ಶಿಲಾತೋಯಂ ಅಪೀತ್ವಾ ಯಸ್ತುಮಸ್ತಕೇ || ಪ್ರಕ್ಷೇಪಣಂ ಪ್ರಕುರುತೇ ಬ್ರಹ್ಮಹಾ ಸ ನಿಗದ್ಯತೇ | ಪಾತ್ರಾಂತರೇಣವೈಗ್ರಾಹ್ಯಂ ನಕರೇಣಕದಾಚನ || ವಿಷ್ಣೋಃ ಪಾದೋದಕಂ ಪೀತಂ ಕೋಟಿ ಹತ್ಯಾಘನಾಶನಂ | ತದೇವಾಷ್ಟ ಗುಣಂಪಾಪಂ ಭೂಮೌ ಬಿಂದುನಿಪಾತನಾತ್ ||

ತುಳಸೀ ಮಿಶ್ರವಾದ ಸಾಲಿಗ್ರಾಮತೀರ್ಥವನ್ನು ಪಾನಮಾಡಿ ಶಿರಸ್ಸಿನಲ್ಲಿ ಧರಿಸಬೇಕು. ಪಾನಮಾಡುವದಕ್ಕೆ ಮುಂಚೆ ಯಾವ ಮನುಷ್ಯನು ಶಿರಸ್ಸಿನಲ್ಲಿ ಧರಿಸುತ್ತಾನೋ, ಅವನು ಬ್ರಹ್ಮಹತ್ಯಮಾಡಿದವನೆಂದೆನಿಸಿಕೊಳ್ಳುತ್ತಾನೆ. ಸಾಲಿಗ್ರಾಮ ತೀರ್ಥವನ್ನು ಪಾತ್ರಾಂತರದಿಂದ ಪಾನಮಾಡಬೇಕು. ಕೈನಿಂದ ಯಾವಾಗಲೂ ಪಾನಮಾಡಬಾರದು. ಸಾಲಿಗ್ರಾಮ ತೀರ್ಥಪ್ರಾಶನದಿಂದ ಕೋಟಿ ಬ್ರಹ್ಮಹತ್ಯಾನಾಶವಾಗುತ್ತದೆ. ಈ ತೀರ್ಥವು ಬಿಂದು ಮಾತ್ರ ಭೂಮಿಯಲ್ಲಿ ಬಿದ್ದರೂ ಎಂಟರಷ್ಟು ಬ್ರಹ್ಮಹತ್ಯಾಪಾಪವು ಹೆಚ್ಚುತ್ತದೆ.

(ಶ್ಲೋಕ) ಮಾರ್ಕಂಡೇಯಃ || ಆಮ್ರೇಕ್ಷುಖಂಡ ತಾಂಬೂಲ ಚರ್ವಣೇ ಸೋಮಪಾನಕೇ । ವಿಷ್ಣ್ವಂಘ್ರಿತೋಯಪಾನೇಚ ನಾದ್ಯಂತಾ ಚಮನಂ ಸ್ಮೃತಂ|| ವಿಷ್ಣುಪಾದೋದಕಂ ತೀರ್ಥಂ ಪೀತ್ವಾನಕ್ಷಾಳಯೇತ್ಕರಂ | ಕ್ಷಾಳಯೇದ್ಯದಿಮೋಹೇನ ಪಂಚಪಾತಕಮಾಪ್ನುಯಾತ್ ||

ಭೋಜನವನ್ನು ಮಾಡುವ ಸಂದರ್ಭದಲ್ಲಿ, ಭೋಜನಕ್ಕೆ ಮೊದಲು ಭೋಜನಾನಂತರದಲ್ಲಿಯೂ ದ್ವಿರ್ದ್ವಿರಾಚಮನವು ವಿಹಿತವಾಗಿದೆ. ಅದರಂತೆ ಮಾವಿನಹಣ್ಣು – ಕಬ್ಬಿನತುಂಡು – ತಾಂಬೂಲಚರ್ವಣ–ಸೋಮಪಾನ–ಸಾಲಿ

ಗ್ರಾಮತೀರ್ಥ ಇವುಗಳನ್ನು ಸೇವನೆಮಾಡುವವನು ಆದ್ಯಂತದಲ್ಲಿ ಆಚಮನವನ್ನು ಮಾಡಬೇಕಾಗಿಲ್ಲ.

ಸಾಲಿಗ್ರಾಮ ತೀರ್ಥವನ್ನು ಪಾನಮಾಡಿ ಹಸ್ತಪ್ರಕ್ಷಾಳನವನ್ನು ಮಾಡಬಾರದು. ತಿಳಿಯದೆ ಅವಿವೇಕದಿಂದ ಕೈಯನ್ನು ತೊಳೆದದ್ದೇ ಆದರೆ ಐದು ವಿಧವಾದ ಪಾಪವನ್ನು ಹೊಂದುತ್ತಾನೆ ||

ಸ್ಮೃತಿರತ್ನೆ || ನಾರದಃ || (ಶ್ಲೋಕ) ಸ್ತ್ರೀಶೂದ್ರ ಪೂಜಿತಂ ಲಿಂಗಂ ವಿಷ್ಣುಂ ವಾಪಿ ನಮೇತ್ತುಯಃ । ತ್ರಿಸ್ಸಪ್ತಕುಲ ಸಂಯುಕ್ತಃ ನರಕಂ ಪ್ರತಿಪದ್ಯತೇ ||

ಹೆಂಗಸರಿಂದಾಗಲಿ ಶೂದ್ರಾದಿಗಳಿಂದಾಗಲಿ ಪೂಜಿಸಲ್ಪಟ್ಟ ಶಿವಲಿಂಗವನ್ನು ವಿಷ್ಣುವನ್ನು ಯಾವನು ನಮಸ್ಕಾರಮಾಡುತ್ತಾನೋ ಆ ಮನುಷ್ಯನು ತನ್ನ ಇಪ್ಪತ್ತೊಂದು ಕುಲದೊಡನೆ ನರಕವನ್ನು ಹೊಂದುತ್ತಾನೆ ||

ಸ್ಮೃತಿರತ್ನೆ || (ಶ್ಲೋಕ) ಶುಭಮಿಚ್ಛನ್ನರಃ ಪ್ರಾಜ್ಞಃ ಸ್ಕಂಧೇ ಮಾಲಾಂ ನಧಾರಯೇತ್ । ಧಾರಯೇತ್ತಾಂ ಶಿರಸ್ಯೇವ ಸುಗಂಧಾಂ ಪ್ರಿಯದರ್ಶನಾಂ || ತತಃಸ್ತುತ್ವಾತು ದೇವೇಶಂ ಅಪರಾಧಾನ್ ಕ್ಷಮಾಪಯೇತ್ ||

ಶುಭವನ್ನು ಅಪೇಕ್ಷಿಸುವ ಪ್ರಾಜ್ಞನಾದ ಮನುಷ್ಯನು ದೇವರಿಗೆ ಸಮರ್ಪಿಸಿದ ಪುಷ್ಪಮಾಲಿಕೆಯನ್ನು ಕಂಠದಲ್ಲಿ ಧರಿಸಬಾರದು. ದರ್ಶನೀಯವಾದ ಸುಗಂಧ ಮಾಲಿಕೆಯನ್ನು ಶಿರಸ್ಸಿನಲ್ಲೇ ಧರಿಸಿಕೊಂಡು ಆ ದೇವೇಶನನ್ನು ಸ್ತುತಿಮಾಡಿ ಅಪರಾಧ ಕ್ಷಮಾಪಣೆಯನ್ನು ಮಾಡಿಕೊಳ್ಳಬೇಕು.

ಹಾರೀತು || (ಶ್ಲೋಕ) ಯೋಮೋಹಾದಥವಾಽಽಲಸ್ಯಾತ್ ಅಕೃತ್ವಾ ದೇವತಾರ್ಚನಂ | ಭುಜ್ತೇಸಯಾತಿನರಕಂ ತಿರ್ಯಗ್ಯೋನೌ ಪ್ರಜಾಯತೇ ||

ಯಾವ ಪುರುಷನು ಅಜ್ಞಾನದಿಂದಲಾಗಲಿ ಅವಿವೇಕದಿಂದಲಾಗಲಿ ಪಾಲುಮಾರಿಕೆಯಿಂದಲಾಗಲಿ ದೇವತಾರ್ಚನೆಯನ್ನು ಮಾಡದೇ ಸಾಲಿಗ್ರಾಮ ತೀರ್ಥಪ್ರಾಶನವನ್ನು ಮಾಡದೇ ಊಟಮಾಡುತ್ತಾನೋ ಆ ಮನುಷ್ಯನು ನರಕವನ್ನು ಹೊಂದಿ ಶ್ವಾನಾದಿ ಪಶುಪಕ್ಷಿ ಜಾತಿಯಲ್ಲಿ ಹುಟ್ಟುತ್ತಾನೆ. (ಇತಿಶಿವಂ)
ಪರಿಭಾಷಾ ಸಮಾಪ್ತಾ ||

ನಿತ್ಯದೇವತಾರ್ಚನ ಪ್ರಯೋಗ

ಸ್ನಾನಸಂಧ್ಯಾವಂದನೌಪಾಸನಬ್ರಹ್ಮಯಜ್ಞಾನಂತರ ಪೂಜಾಪದಾರ್ಥಗಳನ್ನು ಸಿದ್ಧಪಡಿಸಿ, ಕಾಲು ತೊಳೆದು ಆಚಮನ ಮಾಡಿ ಪವಿತ್ರ ಪಾಣಿಃ ಪೂರ್ವಮುಖನಾಗಿ ದೇವರಿಗೆ ಅಭಿಮುಖವಾಗಿ ಶುದ್ಧಾಸನದಲ್ಲಿ ಯಜ್ಞೋಪವೀತಿಯಾಗಿ ಕುಳಿತು, ಆಗಮಾರ್ಥನ್ತು ದೇವಾನಾಂ ಗಮನಾರ್ಥನ್ತು ರಕ್ಷಸಾಂ। ಕುರ್ವೇ ಘಂಟಾರವಂತತ್ರ ದೇವತಾಹ್ವಾನಲಾಂಛನಂ ॥ ಹೇಳಿ ಘಂಟಾನಾದ ಮಾಡಿ ॥ ಅಪಸರ್ಪನ್ತು ॥ ಕರತಾಡನಮಾಡಿ ॥ ಅಪಕ್ರಾಮನ್ತು ॥ ಪೃಥ್ವಿತ್ವಯಾ ॥ ಭೂಪ್ರಾರ್ಥನಮಾಡಿ (ಶುಕ್ಲಾಂಬರಧರಂ) ಮೂರು ಪ್ರಾಣಾಯಾಮ–ಶುಭೇ–ಶೋಭನೇ ಮುಹೂರ್ತೇ ಅದ್ಯಬ್ರಹ್ಮಣಃ ದ್ವಿತೀಯಪರಾರ್ಧೇ ಶ್ವೇತವಾರಾಹಕಲ್ಪೇ–ವೈವಸ್ವತಮನ್ವಂತರೇ ಕಲಿಯುಗೇ ಪ್ರಥಮಪಾದೇ ಜಂಬೂದ್ವೀಪೇ ಭಾರತವರ್ಷೇ ಭರತಖಂಡೇ ಅಸ್ಮಿನ್‌ವರ್ತಮಾನೇ ವ್ಯಾವಹಾರಿಕೇ ಚಾಂದ್ರ (ಸೌರ) ಮಾನೇನ ಪ್ರಭವಾದಿ ಷಷ್ಟಿಸಂವತ್ಸರಾಣಾಂ ಮಧ್ಯೇ (ಅಮುಕ) ನಾಮಸಂವತ್ಸರೇ — ಅಯನೇ — ಋತೌ—ಮಾಸೇ—ಪಕ್ಷೇ—ತಿಥೌ—ವಾಸರಯುಕ್ತಾಯಾಂ (ಅಮುಕ ನಕ್ಷತ್ರಯುಕ್ತಾಯಾಂ) —ಶುಭ—ನಕ್ಷತ್ರ—ಯೋಗ—ಕರಣಯುಕ್ತಾಯಾಂ ಶುಭತಿಥೌ ಮಮ ಉಪಾತ್ತ (ಸಮಸ್ತ) ದುರಿತಕ್ಷಯದ್ವಾರಾ—ಶ್ರೀ ಪರಮೇಶ್ವರಪ್ರೀತ್ಯರ್ಥಂ—ಅಮುಕ ದೇವತಾಮುದ್ದಿಶ್ಯ–ಅಮುಕದೇವತಾಪ್ರೀತ್ಯರ್ಥಂ–ಪುರುಷಸೂಕ್ತಾದಿ ಮಂತ್ರೈಃ ಧ್ಯಾನಾವಾಹನಾದಿ ಷೋಡಶೋಪಚಾರ ಪೂಜಾಂ ಕರಿಷ್ಯೆ ॥ ಇತಿ ಸಂಕಲ್ಪ್ಯ ॥

ತದಂಗತ್ವೇನ ಕಲಶಪೂಜಾಂ ಕರಿಷ್ಯೆ ॥ ಕಲಶಂ ಗಂಧಾಕ್ಷತಪತ್ರ ಪುಷ್ಪೈರಭ್ಯರ್ಚ್ಯ ॥ ಕಲಶಂ ಸ್ಪೃಷ್ಟ್ವಾ ॥ ಶ್ಲೋಕ ॥ ಕಲಶಸ್ಯಮುಖೇ ವಿಷ್ಣುಃ ಕಂಠೇ ರುದ್ರಸ್ಸಮಾಶ್ರಿತಃ । ಮೂಲೇ ತತ್ರಸ್ಥಿತೋ ಬ್ರಹ್ಮಾ ಮಧ್ಯೇ ಮಾತೃಗಣಾಃ ಸ್ಮೃತಾಃ ಕುಕ್ಷೌತು ಸಾಗರಾಸ್ಸರ್ವೇ ಸಪ್ತದ್ವೀಪಾ ವಸುಂಧರಾ। ಋಗ್ವೇದೋಥಯಜುರ್ವೇದ ಸ್ಸಾಮವೇದೋಹ್ಯಥರ್ವಣಃ । ಅಂಗೈಶ್ಚಸಹಿತಾ ಸ್ಸರ್ವೆ ಕಲಶಾಂಬುಸಮಾಶ್ರಿತಾಃ । ಆಯಾಂತು ದೇವ ಪೂಜಾರ್ಥಂ ದುರಿತ ಕ್ಷಯಕಾರಕಾಃ । ಗಂಗೇಚ ಯಮುನೇಚೈವ ಗೋದಾವರಿ ಸರಸ್ವತಿ। ನರ್ಮದೇ

ಸಿಂಧು ಕಾವೇರಿಜಲೇಸ್ಮಿನ್ ಸನ್ನಿಧಿಂಕುರು || ಪಾತ್ರಾಂತರೇಣ ಕಲಶೋದಕಂ ಗೃಹೀತ್ವಾ | ತೇನೋದಕೇನ (ದೇವಂ ಪ್ರೋಕ್ಷ್ಯ;) ಆತ್ಮಾನಂ ಪ್ರೋಕ್ಷ್ಯ; ಪೂಜಾದ್ರವ್ಯಾಣಿ ಪ್ರೋಕ್ಷ್ಯ ||

ಕಲಶೋದಕೇನ ಶಂಖಂ ಪ್ರಕ್ಷಾಳ್ಯ|| ಪ್ರಣವೇನಶಂಖಂ ಕಲಶೋದಕೇನಾ ಪೂರ್ಯ || ಶಂಖಂಗಂಧಾಕ್ಷತಪತ್ರಪುಷ್ಪೈರಭ್ಯರ್ಚ್ಯ || ಶಂಖಂ ಸ್ಪೃಷ್ಟ್ವಾ || ಶ್ಲೋಕ (ಶಂಖಂ ಚಂದ್ರಾರ್ಕ ದೈವತ್ಯಂ ಮಧ್ಯೇ ವರುಣ ದೈವತಂ | ಪೃಷ್ಠೇ ಪ್ರಜಾಪತಿಂವಿಂದ್ಯಾತ್ ಅಗ್ರೇ ಗಂಗಾ ಸರಸ್ವತೀ | ತ್ರೈಲೋಕ್ಯೇ ಯಾನಿ ತೀರ್ಥಾನಿ ವಾಸುದೇವಸ್ಯ ಚಾಜ್ಞಯಾ | ಶಂಖೇ ತಿಷ್ಠಂತಿವಿಪ್ರೇಂದ್ರ ತಸ್ಮಾಚ್ಛಂಖಂ ಪ್ರಪೂಜಯೇತ್ || ತ್ವಂ ಪುರಾಸಾಗರೋತ್ಪನ್ನಃ ವಿಷ್ಣು ನಾವಿಧೃತಃಕರೇ | ದೇವೈಶ್ಚ ಪೂಜಿತಸ್ಸಮ್ಯಕ್ ಪಾಂಚಜನ್ಯ ನಮೋಸ್ತುತೇ ||)

ತತಃ || ದಶವಾರಂ ಗಾಯತ್ರ್ಯಾಽಭಿಮಂತ್ರ್ಯ || ಇದು ಮುಖ್ಯ || ಶಂಖೋದಕೇನ ಪೂಜಾದ್ರವ್ಯಾಣಿ ಪ್ರೋಕ್ಷ್ಯ–ದೇವಂ–ಆತ್ಮಾನಂಚ ಪ್ರೋಕ್ಷ್ಯ | ಪುನ ಶ್ಶಂಖಂಅದ್ಭಿಃ ಪೂರಯಿತ್ವಾನಿಧಾಯ ||

ಅಥ ಪೀಠಪೂಜಾಂ ಕರಿಷ್ಯೆ

ಓಂ ಆಧಾರಶಕ್ತ್ಯೈನಮಃ ಓಂ ಮೂಲಪ್ರಕೃತ್ಯೈನಮಃ ಓಂ ಆದಿ ಕೂರ್ಮಾಯನಮಃ ಓಂ ವರಾಹಾನಮಃ ಓಂ ಅನಂತಾಯನಮಃ ಓಂ ಅಷ್ಟ ದಿಗ್ಗಜೇಭ್ಯೋನಮಃ ಓಂ ಕ್ಷೀರಾರ್ಣವಾಯನಮಃ ಓಂ ಶ್ವೇತ ದ್ವೀಪಾಯನಮಃ ಓಂ ಕಲ್ಪವೃಕ್ಷಾಯನಮಃ ಓಂ ಸುವರ್ಣಮಂಟಪಾಯನಮಃ ಓಂ ರತ್ನಸಿಂಹಾ ಸನಂ ಕಲ್ಪಯಾಮಿ || ಅತ್ರಉಪವಿಶ ||

ಅಥ ದ್ವಾರಪಾಲಕ ಪೂಜಾಂಕರಿಷ್ಯೇ || ಓಂ ಪೂರ್ವದ್ವಾರೇ ದ್ವಾರ ಶ್ರಿಯೈನಮಃ ಓಂ ಧಾತ್ರೇನಮಃ ಓಂ ವಿಧಾತ್ರೇ ನಮಃ ಓಂ ದಕ್ಷಿಣದ್ವಾರೇ ದ್ವಾರಶ್ರಿಯೈನಮಃ ಓಂ ಜಯಾಯನಮಃ ಓಂ ವಿಜಯಾಯ ನಮಃ ಓಂ ಪಶ್ಚಿಮದ್ವಾರೇ ದ್ವಾರಶ್ರಿಯೈನಮಃ ಓಂ ಚಂಡಾಯನಮಃ ಓಂ ಪ್ರಚಂಡಾಯ ನಮಃ ಓಂ ಉತ್ತರದ್ವಾರೇ ದ್ವಾರಶ್ರಿಯೈ ನಮಃ ಓಂ ನಂದಾಯ ನಮಃ ಓಂ ಸುನಂದಾಯ ನಮಃ ||

|| ಇತಿ ದ್ವಾರಪಾಲಕಪೂಜಾಂ ಸಮರ್ಪಯಾಮಿ ||

ಅಥ ವಿಷ್ಣುಧ್ಯಾನಂ || ಶಾಂತಾಕಾರಂ ಭುಜಗಶಯನಂ ಪದ್ಮನಾಭಂ ಸುರೇಶಂ | ವಿಶ್ವಾಧಾರಂ ಗಗನಸದೃಶಂ ಮೇಘವರ್ಣಂ ಶುಭಾಂಗಂ || ಲಕ್ಷ್ಮೀ ಕಾಂತಂ ಕಮಲನಯನಂ ಯೋಗಿಹೃದ್ಧ್ಯಾನಗಮ್ಯಂ | ವಂದೇ ವಿಷ್ಣುಂ ಭವ ಭಯಹರಂ ಸರ್ವಲೋಕೈಕನಾಥಂ || ಇತಿ ಧ್ಯಾತ್ವಾ ||

ಅಥ ಶಿವಧ್ಯಾನಂ || ಧ್ಯಾಯೇನ್ನಿತ್ಯಂ ಮಹೇಶಂ ರಜತಗಿರಿನಿಭಂಚಾರು ಚಂದ್ರಾವತಂಸಂ ರತ್ನಾಕಲ್ಪೋಜ್ವಲಾಂಗಂ ಪರಶುಮೃಗವರಾಭೀತಿಹಸ್ತಂ ಪ್ರಸನ್ನಂ || ಪದ್ಮಾಸೀನಂ ಸಮಂತಾತ್ಸ್ತುತ ಮಮರಗಣೈಃ ವ್ಯಾಘ್ರಕೃತ್ತಿಂ ವಸಾನಂ || ವಿಶ್ವಾದ್ಯಂ ವಿಶ್ವವಂದ್ಯಂ ನಿಖಿಲಭಯಹರಂ ಪಂಚವಕ್ತ್ರಂ ತ್ರಿಣೇತ್ರಂ || ಇತಿಧ್ಯಾತ್ವಾ ||

ಅಥ ಸುಬ್ರಹ್ಮಣ್ಯಧ್ಯಾನಂ || ಮಯೂರಾಧಿರೂಢಂ ಮಹಾವಾಕ್ಯ ಗೂಢಂ ಮನೋಹಾರಿದೇಹಂ ಮಹಚ್ಚಿತ್ತಗೇಹಮ್ | ಮಹೀದೇವದೇವಂ ಮಹಾವೇದಭಾವಂ ಮಹಾದೇವಬಾಲಂ ಭಜೇ ಲೋಕಪಾಲಂ ||

ಸಾಲಗ್ರಾಮೇ–ಪ್ರತಿಷ್ಠಿತ ದೇವೇಷು ಸ್ವಯಂಭುವೇಷು ಚ–ಆವಾಹನ ವಿಸರ್ಜನೇ ನ ಭವತಃ || ಇತಿ ಪರಿಭಾಷಾಯಾಂಸ್ಪಷ್ಟಂ ||

ಓಂ ಸಹಸ್ರಶೀರ್ಷಾ ಪುರುಷಃ | ಸಹಸ್ರಾಕ್ಷಸ್ಸಹಸ್ರಪಾತ್ ಸಭೂಮಿಂ ವಿಶ್ವತೋ ವೃತ್ವಾ | ಅತ್ಯತಿಷ್ಠದ್ದಶಾಂಗುಲಮ್ || ಶಿವ–ವಿನಾಯಕ–ಸೂರ್ಯ–ಶಕ್ತಿ–ಪರಿವೃತ ಶ್ರೀ ಲಕ್ಷ್ಮೀವೆಂಕಟೇಶ್ವರಸ್ವಾಮಿನೇ ನಮಃ | ಇತಿ ವಿಷ್ಣು ಪಂಚಾಯತನ ಪಕ್ಷೇ || ಹೀಗೆ ಹೇಳಿ ಆವಾಹನ

ವಿಷ್ಣು–ಸೂರ್ಯ–ಗಜಾಸ್ಯ–ಶಕ್ತಿಪರಿವೃತ ಶ್ರೀ ಉಮಾಮಹೇಶ್ವರ ಸ್ವಾಮಿನೇ ನಮಃ || ಇತಿ ಶಿವಪಂಚಾಯತನಪಕ್ಷೇ ಆವಾಹನ ||

ಅನ್ಯತ್ಪರಿಭಾಷಾಯಾಂದ್ರಷ್ಟವ್ಯಂ || ಇಷ್ಟದೇವಸ್ಯ ಆವಾಹನಂ ಸಮ ರ್ಪಯಾಮಿ ||

ಪುರುಷ ಏವೇದಗ್‌ಂ ಸರ್ವಮ್ | ಯದ್ಭೂತಂ ಯಚ್ಚಭವ್ಯಮ್ | ಉತಾಮೃತತ್ವಸ್ಯೇಶಾನಃ | ಯದನ್ನೇನಾತಿರೋಹತಿ || ಇಷ್ಟ ದೇವಸ್ಯ ರತ್ನ ಸಿಂಹಾಸನಂ ಸಮರ್ಪಯಾಮಿ ||

ಏತಾವಾನಸ್ಯ ಮಹಿಮಾ | ಅತೋಜ್ಯಾಯಾಗ್‌ಂಶ್ಚ ಪೂರುಷಃ | ಪಾದೋಽಸ್ಯ ವಿಶ್ವಾಭೂತಾನಿ | ತ್ರಿಪಾದಸ್ಯಾ ಮೃತಂದಿವಿ || ಇಷ್ಟ...ಪಾದ್ಯಂ ಸಮರ್ಪಯಾಮಿ ||

ತ್ರಿಪಾದೂರ್ಧ್ವ ಉದೈತ್ಪುರುಷಃ | ಪಾದೋ ಸ್ಯೇಹಾಭವಾತ್ಪುನಃ | ತತೋ ವಿಷ್ವಙ್ವ್ಯ ಕ್ರಾಮತ್ ಸಾಶನಾನಶನೇ ಅಭಿ || ಇಷ್ಟ...ಅರ್ಘ್ಯಂ ಸಮರ್ಪಯಾಮಿ ||

ತಸ್ಮಾದ್ವಿರಾಡಜಾಯತ | ವಿರಾಜೋ ಅಧಿ ಪೂರುಷಃ | ಸಜಾತೋ ಅತ್ಯರಿಚ್ಯತ | ಪಶ್ಚಾದ್ಭೂಮಿ ಮಥೋಪುರಃ || ಇಷ್ಟ...ಆಚಮನೀಯಂ ಸಮರ್ಪಯಾಮಿ ||

ಯತ್ಪುರುಷೇಣ ಹವಿಷಾ | ದೇವಾಯಜ್ಞಮತನ್ವತ | ವಸಂತೋ ಅಸ್ಯಾಸೀದಾಜ್ಯಂ | ಗ್ರೀಷ್ಮ ಇಧ್ಮಃ ಶ್ಶರದ್ಧವಿಃ || ಶುದ್ಧೋದಕ ಸ್ನಾನಂ ಸಮರ್ಪಯಾಮಿ ||

ಯಥಾಶಕ್ತಿಯಥಾವಕಾಶಂ ಕ್ಷೀರಾದಿ ಪಂಚಾಮೃತಸ್ನಾನಂ ಕುರ್ಯಾತ್ ||

ಮಂತ್ರ : ಆಪ್ಯಾಯಸ್ವಸಮೇತುತೇವಿಶ್ವತಃ ಸೋಮವೃಷ್ಣಿಯಮ್ । ಭವಾವಾಜಸ್ಯಸಂಗಥೇ ॥ ಕ್ಷೀರೇಣಸ್ನಪಯಾಮಿ॥ ಕ್ಷೀರಸ್ನಾನಾನಂತರಂ ಶುದ್ಧೋದಕೇನ ಸ್ನಪಯಾಮಿ ॥

ದಧಿಕ್ರಾವ್ಣ್ಣೋ ಅಕಾರಿಷಂ..................ತಾರಿಷತ್॥ ದಧ್ನಾಸ್ನಪಯಾಮಿ ॥ ದಧಿಸ್ನಾನಾನಂತರಂ ಶುದ್ಧೋದಕಸ್ನಾನಂ ಸ.. ಮಿ॥

ಶುಕ್ರಮಸಿ ಜ್ಯೋತಿರಸಿ ತೇಜೋಽಸಿ ॥ ಆಜ್ಯೇನಸ್ನಪಯಾಮಿ ॥ ಆಜ್ಯಸ್ನಾನಾನಂತರಂ ಶುದ್ಧೋದಕಸ್ನಾನಂ ಸ...ಮಿ ॥

ಮಧುವಾತಾಋತಾಯತೇ ಮಧುಕ್ಷರಂತಿ ಸಿಂಧವಃ । ಮಾಧ್ವೀರ್ನಸ್ಸಂತ್ವೋಷಧೀಃ ॥ ಮಧುನಕ್ತಮುತೋಷಸಿ ಮಧುಮತ್ಪಾರ್ಥಿವಗ್ಂರಜಃ । ಮಧುದ್ಯೌರಸ್ತುನಃ ಪಿತಾ ॥ ಮಧುಮಾನ್ನೋ ವನಸ್ಪತಿರ್ಮಧುಮಾಗ್ಂ ಅಸ್ತು ಸೂರ್ಯಃ । ಮಾಧ್ವೀರ್ಗಾವೋಭವಂತುನಃ ಮಧುನಾ ಸ್ನಪಯಾಮಿ ॥ ಮಧುಸ್ನಾನಾನಂತರಂ ಶುದ್ಧೋದಕ ಸ....ಮಿ ॥

ಸ್ವಾದೋಸ್ಸ್ವಾದೀಯ ಸ್ವಾದುನಾಸೃಜಾಸಮುತ ಊಷು ಮಧುಮಧುನಾಽಭಿಯೋಧಿ ॥ ಶರ್ಕರಯಾಸ್ನಪಯಾಮಿ ॥ ಶರ್ಕರಾಸ್ನಾನಾನಂತರಂ ಶುದ್ಧೋದಕ ಸ....ಮಿ॥

ಯಾಃ ಫಲಿನೀರ್ಯಾ ಅಫಲಾ ಅಪುಷ್ಪಾಯಾಶ್ಚ ಪುಷ್ಪಿಣೀಃ । ಬೃಹಸ್ಪತಿ ಪ್ರಸೂತಾಸ್ತಾನೋಮುಂಚಂತ್ವಗ್ಂಹಸಃ॥ ಫಲೋದಕೇನಸ್ನಪಯಾಮಿ॥ ಫಲೋದಕಸ್ನಾನಾನಂತರಂ ಶುದ್ಧೋದಕ ಸ....ಮಿ॥

ಅಥ ಶುದ್ಧೋದಕ ಸ್ನಾನಂ ॥ ಆಪೋಹಿಷ್ಠೇತ್ಯಾದಿ-ರುದ್ರ-ಪು
ಸೂಕ್ತಾದಿಮಂತ್ರೈಃ ಯಥಾವಕಾಶಂ ಅಭಿಷೇಕಂ ಕುರ್ಯಾತ್ । ಸ್ನಾನಾ
ತರಂ ಆಚಮನೀಯಂ ಸಮರ್ಪಯಾಮಿ । ಇತ್ಯುದಕಂ ದತ್ವಾ ॥

ಸಪ್ತಾಸ್ಯಾಸನ್ಪರಿಧಯಃ । ತ್ರಿಸ್ಸಪ್ತಸಮಿಧಃ ಕೃತಾಃ । ದೇವಾಯದ್ಯ
ತನ್ವಾನಾಃ । ಅಬಧ್ನನ್ ಪುರುಷಂ ಪಶುಂ ॥ ವಸ್ತ್ರಯುಗ್ಮಂ ಸಮರ್ಪಯಾವಿ
(ಯುವಂ ವಸ್ತ್ರಾಣಿ ಪೀವ ಸಾವಸಾಥೇ । ಯುವೋರಚ್ಛಿದ್ರಾಮಂತವೊ
ಸರ್ಗಾಃ । ಅವಾತಿರತಮನೃತಾನಿ ವಿಶ್ವಾ । ಋತೇನಮಿತ್ರಾವರುಣಾಸಚೇಥೆ
ಅನೇನವಾ ವಸ್ತ್ರಂಸಮರ್ಪಯಾಮಿ॥ ಆಚಮನೀಯಂ॥

ತಂ ಯಜ್ಞಂ ಬರ್ಹಿಷಿಪ್ರೌಕ್ಷನ್ । ಪುರುಷಂ ಜಾತಮಗ್ರತಃ । ತ
ದೇವಾ ಅಯಜಂತ । ಸಾಧ್ಯಾಋಷಯಶ್ಚಯೇ ॥ ಯಜ್ಞೋಪವೀತಂ ಸಮ
ಯಾಮಿ ॥ ಆಚಮನೀಯಂ ಸ....ಮಿ॥ ಯಜ್ಞೋಪವೀತಂ ಪರಮಂ ಪವಿತ್ರ
ಪ್ರಜಾಪತೇಃ ಯತ್ಸಹಜಂ ಪುರಸ್ತಾತ್ । ಆಯುಷ್ಯಮಗ್ರಿಯಂ ಪ್ರತಿಮು
ಶುಭ್ರಂ । ಯಜ್ಞೋಪವೀತಂ ಬಲಮಸ್ತುತೇಜಃ॥) ಅನೇನವಾ ಯಜ್ಞೋ
ವೀತಂ........ಮಿ॥

ತಸ್ಮಾದ್ಯಜ್ಞಾತ್ಸರ್ವಹುತಃ । ಸಂಭೃತಂಪೃಷದಾಜ್ಯಂ । ಪಶೂಗ
ಸ್ತಾಗ್‌ಶ್ಚಕ್ರೇವಾಯವ್ಯಾನ್ । ಆರಣ್ಯಾನ್ಗ್ರಾಮ್ಯಾಶ್ಚಯೇ ॥ ದಿವ್ಯಗಂಧ
ಧಾರಯಾಮಿ॥ (ಗಂಧದ್ವಾರಾಂ ದುರಾಧರ್ಷಾಂ ನಿತ್ಯಪುಷ್ಟಾಂಕರೀಷಿಣೀ
ಈಶ್ವರೀಗ್‌ಂ ಸರ್ವಭೂತಾನಾಂ ತಾಮಿಹೋಪಹ್ವಯೇಶ್ರಿಯಂ॥)(ಇತಿವಾಗಂಧ

ತಸ್ಮಾದ್ಯಜ್ಞಾತ್ಸರ್ವಹುತಃ | ಋಚಸ್ಸಾಮಾನಿಜಜ್ಞಿರೇ | ಛಂದಾಗ್ಂ ಸಿಜಜ್ಞಿರೇತಸ್ಮಾತ್| ಯಜುಸ್ತಸ್ಮಾದಜಾಯತ| ಅಕ್ಷತಾನ್ ಸಮರ್ಪಯಾಮಿ||

ತಸ್ಮಾದಶ್ವಾ ಅಜಾಯಂತ | ಯೇಕೇಚೋ ಭಯಾದತಃ | ಗಾವೋಹ ಜಜ್ಞಿರೇತಸ್ಮಾತ್ | ತಸ್ಮಾಜ್ಜಾತಾ ಅಜಾವಯಃ | ಪುಷ್ಪಮಾಲಿಕಾಂ ಸಮರ್ಪ ಯಾಮಿ ||

ಅಥ ನಾಮಪೂಜಾಂ ಕರಿಷ್ಯೇ || ಓಂ ಕೇಶವಾಯನಮಃ ಇತಿ ದ್ವಾದಶ ನಾಮಭಿಃ ಚತುರ್ವಿಂಶತಿ ನಾಮಭಿರ್ವಾಪೂಜಾಂ ಕುರ್ಯಾತ್ ||

ಓಂ ಭವಾಯದೇವಾಯನಮಃ | ಓಂ ಶರ್ವಾಯದೇವಾಯನಮಃ | ಓಂ ಈಶಾನಾಯದೇವಾಯನಮಃ | ಓಂ ಪಶುಪತಯೇ ದೇವಾಯನಮಃ | ಓಂ ರುದ್ರಾಯ ದೇವಾಯನಮಃ | ಓಂ ಉಗ್ರಾಯ ದೇವಾಯನಮಃ | ಓಂ ಭೀಮಾಯ ದೇವಾಯನಮಃ | ಓಂ ಮಹತೇ ದೇವಾಯನಮಃ | ಓಂ ಭವಸ್ಯ ದೇವಸ್ಯಪತ್ನ್ಯೈನಮಃ| ಓಂ ಶರ್ವಸ್ಯದೇವಸ್ಯಪತ್ನ್ಯೈನಮಃ | ಓಂ ಈಶಾನಸ್ಯ ದೇವಸ್ಯಪತ್ನ್ಯೈನಮಃ | ಓಂ ಪಶುಪತೇರ್ದೇವಸ್ಯಪತ್ನ್ಯೈನಮಃ | ಓಂ ರುದ್ರಸ್ಯದೇವಸ್ಯಪತ್ನ್ಯೈ ನಮಃ | ಓಂ ಉಗ್ರಸ್ಯದೇವಸ್ಯಪತ್ನ್ಯೈನಮಃ | ಓಂ ಭೀಮಸ್ಯದೇವಸ್ಯಪತ್ನ್ಯೈನಮಃ | ಓಂ ಮಹತೋದೇವಸ್ಯಪತ್ನ್ಯೈ ನಮಃ ||

ಓಂ ಸಮುಖಾಯನಮಃ ಇತ್ಯಾದಿ ದ್ವಾದಶನಾಮಭಿಃ || ಓಂ ಮಿತ್ರಾಯನಮಃ ಇತ್ಯಾದಿ ದ್ವಾದಶನಾಮಭಿಶ್ಚಯಥಾವಕಾಶಂ ಪೂಜಾಕಾರ್ಯಾ || ಇತಿ ನಾನಾವಿಧ ಪರಿಮಳ ಪತ್ರಪುಷ್ಪಾಣಿ ಸಮರ್ಪಯಾಮಿ ||

ಓಂ ಮಹಾಕ್ಷೈತ್ರೈ ನಮಃ (ಓಂ ಪಾರ್ವತ್ಯೈನಮಃ|) ಹರಿದ್ರಾಚೂರ್ಣ
ಕುಂಕುಮಂ ಇತ್ಯಾದಿ ಮಂಗಳದ್ರವ್ಯಾಣಿ ಸಮರ್ಪಯಾಮಿ ||

ಅಥ ಅಷ್ಟೋತ್ತರ ಸಹಸ್ರನಾಮಭಿಃ ಯಥಾವಿಭವಮರ್ಚಯೇತ್ ||

ಯತ್ಪುರುಷಂವ್ಯದಧುಃ | ಕತಿಧಾವ್ಯಕಲ್ಪಯನ್ ಮುಖಂಕಿಮಸ
ಕೌಬಾಹೂ | ಕಾವೂರೂಪಾದಾವುಚ್ಯೇತೇ || ಧೂಪಮಾಘ್ರಾಪಯಾಮಿ ||

(ವನಸ್ಪತಿರಸೋದ್ಭೂತಃ ಗಂಧಾಢ್ಯಃಸು ಮನೋಹರಃ | ಆಘ್ರೇಯ
ಸರ್ವದೇವಾನಾಂ ಧೂಪೋಯಂ ಪ್ರತಿಗೃಹ್ಯತಾಂ ||) ಇತ್ಯನೇನವಾ ಧೂಪಂ

ಬ್ರಾಹ್ಮಣೋಸ್ಯ ಮುಖಮಾಸೀತ್ | ಬಾಹೂರಾಜನ್ಯಃಕೃತಃ
ಊರೂತದಸ್ಯ ಯದ್ವೈಶ್ಯಃ | ಪದ್ಭ್ಯಾಗ್ಂಶೂದ್ರೋ ಅಜಾಯತ || ದೀಪ
ದರ್ಶಯಾಮಿ|| (ಸಾಜ್ಯಂ ತ್ರಿವರ್ತಿಸಂಯುಕ್ತಂ ವಹ್ನಿನಾಯೋ ಜಿತಂಮಯಾ
ಗೃಹಾಣ ಮಂಗಳಂ ದೀಪಂ ತ್ರೈಲೋಕ್ಯತಿಮಿರಾಪಹಂ || ಭಕ್ತ್ಯಾದೀಪ
ಪ್ರಯಾಚ್ಛಾಮಿ ದೇವಾಯ ಪರಮಾತ್ಮನೇ || ತ್ರಾಹಿಮಾಂ ನರಕಾದ್ಘೋರಾತ
ದಿವ್ಯಜ್ಯೋತಿರ್ನಮೋಸ್ತುತೇ || ಇತಿವಾದೀಪಂ) ಧೂಪದೀಪಾನಂತರಂ ಆಚಮ
ನೀಯಂ ಸಮರ್ಪಯಾಮಿ |

ನೈವೇದ್ಯಪದಾರ್ಥಾನ್ ಗಾಯತ್ರಿಯಾಪ್ರೋಕ್ಷ್ಯ–ಮಂತ್ರೇಣಪರಿಷಿಚ್ಯ
ಮಂತ್ರೇಣ ಆಪೋಶನಂದತ್ವಾ–ಪ್ರಾಣಾಯಸ್ವಾಹೇತ್ಯಾದಿಮಂತ್ರಾನುಕ್ತ್ವಾ

ಚಂದ್ರಮಾಮನಸೋಜಾತಃ | ಚಕ್ಷೋಸ್ಸೂರ್ಯೋ ಅಜಾಯತ | ಮುಖಾದಿ
ದ್ರಶ್ಚಾಗ್ನಿಶ್ಚ| ಪ್ರಾಣಾದ್ವಾಯುರಜಾಯತ|| ಇತ್ಯುಕ್ತ್ವಾ ವಿದ್ಯಮಾನಮನ್ನಾ
ದಿಕಂ ನಿವೇದಯೇತ್|| ಮಧ್ಯೇ ಪಾನೀಯಂ | ಮಂತ್ರೇಣ ಉತ್ತರಾಪೋಶನ
ಹಸ್ತಪ್ರಕ್ಷಾಳನಂ | ಪಾದಪ್ರಕ್ಷಾಳನಂ | ಪುನರಾಚಮನೀಯಂ ಸಮರ್ಪಯ
ಮೀತಿ ಸಮತ್ರ ಉದಕಂ ದತ್ವಾ |

ನಾಭ್ಯಾಆಸೀದಂತರಿಕ್ಷಂ । ಶೀರ್ಷ್ಣೋದ್ಯೌಸ್ಸಮವರ್ತತ । ಪದ್ಭ್ಯಾಂ ಭೂಮಿರ್ದಿಶಶ್ಶ್ರೋತ್ರಾತ್ । ತಥಾಲೋಕಾಗ್ಂ ಅಕಲ್ಪಯನ್ ॥ ಏಲಾ ಲವಂಗಾದಿಸಹಿತಂ ಪೂಗೀಫಲತಾಂಬೂಲಂ ಸಮರ್ಪಯಾಮಿ ॥ (ಪೂಗೀಫಲ ಸಮಾಯುಕ್ತಂ ನಾಗವಲ್ಲೀದಳೈರ್ಯುತಂ । ಕರ್ಪೂರಚೂರ್ಣಸಂಯುಕ್ತಂ ತಾಂಬೂಲಂ ಪ್ರತಿಗೃಹ್ಯತಾಂ ಇತಿವಾ ತಾಂಬೂಲಂ).

ವೇದಾಹಮೇತಂ ಪುರುಷಂ ಮಹಾನ್ತಮ್ । ಆದಿತ್ಯವರ್ಣಂ ತಮ ಸಸ್ತುಪಾರೇ । ಸರ್ವಾಣಿರೂಪಾಣಿವಿಚಿತ್ಯಧೀರಃ । ನಾಮಾನಿಕೃತ್ವಾಽಭಿವ ದನ್‌ಯದಾಸ್ತೇ ॥ ಕರ್ಪೂರಾದಿ ಮಂಗಳ ನೀರಾಜನಂ ದರ್ಶಯಾಮಿ ॥ (ಹಿರಣ್ಯಪಾತ್ರಂಮಧೋಃ ಪೂರ್ಣಂದದಾತಿ । ಮಧವ್ಯೋಽಸಾನೀತಿ । ಏಕಧಾ ಬ್ರಹ್ಮಣಉಪಹರತಿ । ಏಕಧೈವ ಯಜಮಾನ ಆಯುಸ್ತೇಜೋದಧಾತಿ ॥ ಇತಿ ವಾನೀರಾಜನಂ ॥) ಆಚಮನೀಯಂ ॥

ಧಾತಾಪುರಸ್ತಾದ್ಯಮುದಾಜಹಾರ । ಶಕ್ರಃಪ್ರವಿದ್ವಾನ್ಪ್ರದಿಶಶ್ಚತಸ್ರಃ । ತಮೇವಂ ವಿದ್ವಾನಮೃತಇಹಭವತಿ । ನಾನ್ಯಃಪಂಥಾ ಅಯನಾಯವಿದ್ಯತೇ ॥ ಮಂತ್ರಪುಷ್ಪಂ ಸಮರ್ಪಯಾಮಿ ॥

ಹಿರಣ್ಯಗರ್ಭೇತಿ ಸುವರ್ಣಪುಷ್ಪದಕ್ಷಿಣಾಂ ಸಮರ್ಪಯಾಮಿ ||

ಯಾನಿಕಾನಿಚಪಾಪಾನಿ ಜನ್ಮಾಂತರ ಕೃತಾನಿಚ| ತಾನಿತಾನಿ ವಿನಶ್ಯಂತಿ ಪ್ರಾದಕ್ಷಿಣ್ಯಾತ್ಪದೇಪದೇ || ಪ್ರದಕ್ಷಿಣಂ ಸಮರ್ಪಯಾಮಿ || ಪಾಪೋಽಹಂ ಪಾಪ ಕರ್ಮಾಹಂ ಪಾಪಾತ್ಮಾ ಪಾಪಸಂಭವಃ | ತ್ರಾಹಿಮಾಂ ಕೃಪಯಾ ದೇವ ಶರಣಾ ಗತ ವತ್ಸಲ || ಅನ್ಯಥಾ ಶರಣಂ ನಾಸ್ತಿತ್ವಮೇವಶರಣಂ ಮಮ | ತಸ್ಮಾತ್ಕಾರುಣ್ಯಭಾವೇನ ರಕ್ಷರಕ್ಷ ಮಹೇಶ್ವರ || ನಮಸ್ಕಾರಾನ್ ಸಮರ್ಪಯಾಮಿ ||

ಋಣರೋಗಾದಿದಾರಿದ್ರ್ಯ ಪಾಪಕ್ಷುದ್ರಾಪಮೃತ್ಯವಃ | ಭಯ ಶೋಕ ಮನಸ್ತಾಪಾಃ ನಶ್ಯಂತು ಮಮ ಸರ್ವದಾ || ಪ್ರಾರ್ಥನಾಂ ಸಮರ್ಪಯಾಮಿ ||

ನಮಃಕಮಲನಾಭಾಯ ನಮಸ್ತೆ ಜಲಶಾಯಿನೇ | ನಮಸ್ತೇಽಸ್ತು ಹೃಷೀಕೇಶ ಗೃಹಾಣಾರ್ಘ್ಯಂ ನಮೋಽಸ್ತುತೇ || ವಿಷ್ಣವೇ ನಮಃ ಪ್ರಸನ್ನಾರ್ಘ್ಯಂ ಸಮರ್ಪಯಾಮಿ ||

ನಮಶ್ಶಿವಾಯ ಸಾಂಬಾಯ ಸಗಣಾಯ ಸಸೂನವೇ | ಸನಂದಿನೇಸ ಗಂಗಾಯ ಸ ವೃಷಾಯ ನಮೋನಮಃ || ಶಿವಾಯನಮಃ ಪ್ರಸನ್ನಾರ್ಘ್ಯಂ ಸಮರ್ಪಯಾಮಿ ||

ಪುನಃ ಪೂಜಾ || ಛತ್ರಂ ಕಲ್ಪಯಾಮಿ ಚಾಮರೇವೀಜಯಾಮಿ ನೃತ್ಯಂ ದರ್ಶಯಾಮಿ ಗೀತಂ ಶ್ರಾವಯಾಮಿ ವಾದ್ಯಂ ಶ್ರಾವಯಾಮಿ ಅಶ್ವಮಾರೋಹಯಾಮಿ, ಗಜಮಾರೋಹಯಾಮಿ, ಸಮಸ್ತ ರಾಜೋಪಚಾರದೇವೋಪಚಾರ ಪೂಜಾಸ್ಸಮರ್ಪಯಾಮಿ ||

ಯಸ್ಯಸ್ಮೃತ್ಯಾಚ .... ತಪಃ ಪೂಜಾಕ್ರಿಯಾದಿಷುಃ .... ಸದ್ಯೋವಂದೇತಮಚ್ಯುತಂ || ಮಂತ್ರಹೀನಂ .... ಜನಾರ್ದನ (ಮಹೇಶ್ವರ) ಪರಿಪೂರ್ಣಂ ತದಸ್ತುತೇ || ಅನೇನ ಇಷ್ಟದೇವತಾ ಪೂಜನೇನ ವಾಸುದೇವಃ ಪ್ರಿಣಾತು || ಮಧ್ಯೇ ಮಂತ್ರತಂತ್ರ—ಅಚ್ಯುತಾನಂತ ಗೋವಿಂದೇಭ್ಯೋ ನಮಃ || ಕಾಯೇನವಾಚಾ....ನಾರಾಯಣಾಯೇತಿ ಸಮರ್ಪಯಾಮಿ || ಓಂ ತತ್ಸತ್ ||

ದ್ವಾರಪಾಲಕ ದೇವತಾಭ್ಯೋ ನಮಃ ತೀರ್ಥಸ್ನಾನಂ ಸಮರ್ಪಯಾಮಿ | ನಿರ್ಮಾಲ್ಯಗಂಧಂ ಸಮರ್ಪಯಾಮಿ | ನಿರ್ಮಾಲ್ಯ ಪುಷ್ಪಂ ಸಮರ್ಪಯಾಮಿ|| ಶ್ಲೋಕ || ಬಲಿರ್ವಿಭೀಷಣೋಭೀಷ್ಮಃ ಕಪಿಲೋನಾರದಾದಯಃ | ನಾರಾಯಣ ಪ್ರಸಾದೋಯಂ ಸರ್ವೇಗೃಹ್ಣಂತು ವೈಷ್ಣವಾಃ || ಓಂಭೂರ್ಭುವಸ್ಸುವಃ ಬಲಿ ಹರಣಂ ನಿವೇದಯಾಮಿ ||

(ಶ್ಲೋಕ) ಬಾಣರಾವಣ ಚಂಡೀಶ ನಂದಿಭೃಂಗಿ ನಟಾದಯಃ | ಸದಾ ಶಿವಪ್ರಸಾದೋಯಂ ಸರ್ವೇಗೃಹ್ಣಂತು ಶಾಂಭವಾಃ || ಓಂ ಭೂರ್ಭುವಸ್ಸುವಃ ಬಲಿಹರಣಂ ನಿವೇದಯಾಮಿ ||

(ಶ್ಲೋಕ ಶಂಖಮಧ್ಯೇಸ್ಥಿತಂ ತೋಯಂ ಭ್ರಾಮಿತಂ ಕೇಶವೋಪರಿ | ಅಂಗಲಗ್ನಂ ಮನುಷ್ಯಾಣಾಂ ಬ್ರಹ್ಮಹತ್ಯಾಯುತಂ ದಹೇತ್ || ಉಕ್ಷೇಚ್ಛಂಖಸ್ಯ ತೋಯೇನ ಪುತ್ರಮಿತ್ರ ಪರಿಗ್ರಹಾನ್ || ಶಂಖಸ್ಥಜಲೇನ ಸರ್ವಾನ್ ಪ್ರೋಕ್ಷೇತ್ ||

(ಶ್ಲೋಕ) ಸಾಧುವಾಽಸಾಧುವಾ ಕರ್ಮಯದ್ಯದಾ ಚರಿತಂ ಮಯಾ | ತತ್ಸರ್ವಂ ಭಗವನ್ ವಿಷ್ಣೋ ಗೃಹಾಣಾರಾಧನಂ ಪರಮ್ || ಇತಿ ಕರ್ಮಾರ್ಪಣಂ ಕೃತ್ವಾ || ಸ್ವಾತ್ಮಾನಂಚ ನಿವೇದಯೇತ್ ||

(ಶ್ಲೋಕ) ಅಪರಾಧ ಸಹಸ್ರಾಣಿ ಕ್ರಿಯನ್ತೇಹರ್ನಿಶಂ ಮಯಾ | ದಾಸೋಯಮಿತಿ ಮಾಂಮತ್ವಾ ಕ್ಷಮಸ್ವಪುರುಷೋತ್ತಮ || ಇತಿ ಪ್ರಾರ್ಥನಾಂ ಸಮರ್ಪಯಾಮಿ ||

ಏವಂ ಸಂಪೂಜ್ಯದೇವೇಶಂ ಕ್ಷಣಂಧ್ಯಾತ್ವಾ ನಿರಂಜನಂ | ತತೋಽವ ಲೋಕಯೇದರ್ಕಂ ಹಂಸಶ್ಶುಚಿಷದಿತ್ಯೃಚಾ || ಈ ಮಂತ್ರದಿಂದ ಸೂರ್ಯನನ್ನು ನೋಡಬೇಕು.

(ಶ್ಲೋಕ) ದೇವದೇವ ಜಗನ್ನಾಥ ಶಂಖಚಕ್ರ ಗದಾಧರ | ದೇಹಿ ದೇವ ಮಮಾನುಜ್ಞಾಂಯುಷ್ಮತ್ತೀರ್ಥ ನಿಷೇವಣೇ || ಇತ್ಯನುಜ್ಞಾಂ ಲಬ್ಧ್ವಾತೀರ್ಥಂ ಪ್ರಾಶಯೇತ್ ||

(ಶ್ಲೋಕ) ಅಕಾಲ ಮೃತ್ಯುಹರಣಂ ಸರ್ವವ್ಯಾಧಿ ವಿನಾಶನಂ । ವಿಷ್ಣೋಃ ಪಾದೋದಕಂ ತೀರ್ಥಂ ಶಿರಸಾಧಾರಯಾಮ್ಯಹಮ್ ॥ ಇತಿ ಶಿರಸಿತೀರ್ಥಂ ಧಾರಯೇತ್ ॥

ಶರೀರೇ ಜರ್ಝರೀ ಭೂತೇ ವ್ಯಾಧಿಗ್ರಸ್ತೇ ಕಳೇಬರೇ । ಔಷಧಂ ಜಾಹ್ನ ವೀತೋಯಂ ವೈದ್ಯೋನಾರಾಯಣೋ ಹರಿಃ ॥ ಇತಿಚ ತೀರ್ಥಂ ಪ್ರಾಶ್ಯ ಶಿರಸಿ ಪ್ರೋಕ್ಷೇತ್ ॥

ಅದ್ಯಾನೋ ದೇವಸವಿತಃ ॥ ಇತ್ಯುಪವೇಶನ ಸ್ಥಾನಂ ಪ್ರೋಕ್ಷ್ಯ ಹೃದಯಮಭಿಮೃಶೇತ್ ॥

ಇತಿ ನಿತ್ಯದೇವತಾ ಪೂಜಾಕ್ರಮಃ

ದರ್ಶಸಂಕ್ರಾಂತಿಗಳಲ್ಲಿಮಾಡುವ ತರ್ಪಣಪ್ರಯೋಗಃ

ಪುತ್ರರು ಪಿತೃವಿಯೋಗಾನಂತರ ಒಂದು ವರ್ಷದ ಮೇಲೆ ಅಮಾವಾಸ್ಯಾ ಸಂಕ್ರಾಂತಿಗಳಲ್ಲಿ ಅನ್ನಶ್ರಾದ್ಧ ಅಥವಾ ಹಿರಣ್ಯಶ್ರಾದ್ಧ ತದಂಗತರ್ಪಣ ಅಥವಾ ತಿಲತರ್ಪಣವನ್ನಾದರೂ ತಪ್ಪದೆ ಮಾಡಬೇಕು ॥

ಅಮಾವಾಸ್ಯಾ ದಿನ ಮಧ್ಯಾಹ್ನ ಶೀತೋದಕದಲ್ಲಿ ಸ್ನಾನಮಾಡಿ ಧೌತ ಶುಷ್ಕವಸ್ತ್ರದ್ವಯವನ್ನು ಧರಿಸಿ ಊರ್ಧ್ವ ಪುಂಡ್ರವನ್ನು ಸಂಪ್ರದಾಯಾನುಸಾರ ರಚಿಸಿ ತ್ರಿಪುಂಡ್ರವನ್ನು ಧರಿಸದೆ ಜಲದಿಂದ ನಾಮವನ್ನು ಮಾತ್ರ ಧರಿಸಿ ಮಾಧ್ಯಾಹ್ನಿಕಮಾಡಿ ಅಪರಾಹ್ಣಕಾಲದಲ್ಲಿ ತಿಲ, ದರ್ಭ, ಶುದ್ಧೋದಕಗಳನ್ನು ಸಂಗ್ರಹಿಸಿ ದ್ವಿರಾಚಮನಮಾಡಿ ಶುದ್ಧವಾದ ಸ್ಥಳದಲ್ಲಿ (ದೇವತಾಭ್ಯಃ ಪಿತೃಭ್ಯಶ್ಚ ಮಹಾಯೋಗಿಭ್ಯ ಎವಚ । ನಮಸ್ಸ್ವಧಾಯೈ ಸ್ವಾಹಾಯೈ ನಿತ್ಯಮೇವ ನಮೋ ನಮಃ) ಹೇಳಿ ಪಿತೃಗಳಿಗೆ ಮೂರು ನಮಸ್ಕಾರಮಾಡಿ ಕೂತು,

ದರ್ಭೇಷ್ವಾಸೀನಃ ದರ್ಭಾಂಧಾರಯಮಾಣಃ, ಮೂರು ದರ್ಭದ ಪವಿತ್ರ ವನ್ನು ಧರಿಸಿ, ಪೂರ್ವಮುಖನಾಗಿ (ಶುಕ್ಲಾಂಬರಧರಂ) ಮೂರು ಪ್ರಾಣಾ ಯಾಮಮಾಡಿ (ಅಪವಿತ್ರಃ ಪವಿತ್ರೋವಾ) ಮನು ಉಪಾತ್ತ ಸಂಪ್ರದಾಯಾನು ಸಾರ ಹೇಳಿ ಸಂಕಲ್ಪಮಾಡಬೇಕು ॥

ಶ್ರೀ ಗೋವಿಂದ ಗೋವಿಂದ-ಶ್ರೀ ಮಹಾವಿಷ್ಣೋ ರಾಜ್ಞಯಾ-ಪ್ರವರ್ತ ಮಾನಸ್ಯ-ಆದ್ಯಬ್ರಹ್ಮಣಃ-ದ್ವಿತೀಯ ಪರಾರ್ಧೆ-ಶ್ರೀ ಶ್ವೇತವಾರಾಹಕಲ್ಪೆ-ವೈವಸ್ವತಮನ್ವಂತರೆ- ಕಲಿಯುಗೆ—ಪ್ರಥಮಪಾದೆ—ಜಂಬೂದ್ವೀಪೆ—ಭಾರತ ವರ್ಷೆ-ಭರತಖಂಡೆ-(ಮೇರೋಃ ದಕ್ಷಿಣೇ ಪಾರ್ಶ್ವೇ-ಶಕಾಬ್ದೆ)-ಅಸ್ಮಿನ್ವರ್ತ ಮಾನೆ-ವ್ಯಾವಹಾರಿಕೆ-ಚಾಂದ್ರ ಸೌರಮಾನಾಭ್ಯಾಂ-ನಾಮ ಸಂವತ್ಸರೆ-ಅಯನೆ— ಋತೌ—ಮಾಸೆ—ಪಕ್ಷೇ-ತಿಥೌ— ವಾಸರಯುಕ್ತಾಯಾಂ (ನಕ್ಷತ್ರ ಯುಕ್ತಾಯಾಂ)(ವಿಷ್ಣು ನಕ್ಷತ್ರ) ವಿಷ್ಣುಯೋಗ ಕರಣಯುಕ್ತಾಯಾಂ-(ಮಮ ಉಪಾತ್ತ... ಪ್ರೀತ್ಯರ್ಥಂ) ಅಸ್ಯಾಂ ಪುಣ್ಯ ತಿಥೌ ಪ್ರಾಚೀನಾವೀತೀ-ಅಮುಕ ಗೋತ್ರಾಣಾಂ-ಅಮುಕ ಶರ್ಮಣಾಂ-ಪಿತೃ ಪಿತಾಮಹ ಪ್ರಪಿತಾಮಹಾನಾಂ-ಸಪತ್ನೀಕಾನಾಂ || ಅಮುಕ ಗೋತ್ರಾಣಾಂ-ಅಮುಕ ಶರ್ಮಣಾಂ-ಮಾತಾಮಹ -ಮಾತುಃ ಪಿತಾಮಹ-ಮಾತುಃ ಪ್ರಪಿತಾಮಹಾನಾಂ-ಸಪತ್ನೀಕಾನಾಂ-ಉಭಯವಂಶ ಪಿತೄಣಾಂ ಅಕ್ಷಯತೃಪ್ತ್ಯರ್ಥಂ ದರ್ಶಶ್ರಾದ್ಧಂ ತಿಲತರ್ಪಣ ರೂಪೇಣ ಕರಿಷ್ಯೆ ||

ಸಂಕ್ರಾಂತಿ ದಿನದಲ್ಲಿ ಅಮುಕ ಸಂಕ್ರಾಂತಿ ಶ್ರಾದ್ಧಂ ತಿಲತರ್ಪಣ ರೂಪೇಣ ಕರಿಷ್ಯೆ || ಎಂದು ಸಂಕ್ರಮಣ ತರ್ಪಣದಲ್ಲಿ ಹೇಳಬೇಕು ||

ಈ ಸಂಕ್ರಮಣ ತರ್ಪಣವನ್ನು ಮಾತ್ರ ಆಯಾಯ ಪುಣ್ಯಕಾಲಗಳಲ್ಲಿ ಮಾಡಬೇಕು || ಇದಕ್ಕೆ ಅಪರಾಹ್ಣ ಬೇಕಾಗಿಲ್ಲ || ಸಂಕಲ್ಪಾನಂತರದಲ್ಲಿ ಕೈಯ ಲ್ಲಿರತಕ್ಕ ದರ್ಭವನ್ನು ಉತ್ತರಕ್ಕೆ ಹಾಕಿ ಕೈ ತೊಳೆದು-ಶುದ್ಧವಾದ ಸ್ಥಳದಲ್ಲಿ ಅಥವಾ ಪಾತ್ರೆಯಲ್ಲಿ ದಕ್ಷಿಣಾಗ್ರವಾಗಿ ಎರಡುಕಡೆ ದರ್ಭಗಳನ್ನು ಹಾಕಿ ಎಡ ಗಾಲು ಮಂಡಿಹಾಕಿ ದಕ್ಷಿಣಾ ಮುಖವಾಗಿ ಕೂತು ಪೂರ್ವ ದರ್ಭೆಗಳಲ್ಲಿ

ಮಂತ್ರ || ಆಯಾತ ಪಿತರ ಸ್ಸೋಮ್ಯಾಗಂಭೀರೈಃ ಪಥಿಭಿಃ ಪೂರ್ವ್ಯೈಃ

ಪ್ರಜಾಮಸ್ಮಭ್ಯಂದದತೋರಯಿಂಚ ದೀರ್ಘಾಯುತ್ವಂಚ ಶತಶಾರದಂಚ || ಈ

ಮಂತ್ರ ಹೇಳಿ ಸಪತ್ನೀಕಾನ್ ಅಸ್ಮತ್ ಪಿತೃ ಪಿತಾಮಹ ಪ್ರಪಿತಾಮಹಾನ್ ಆವಾಹಯಾಮಿ ಎಂದು ಎಳ್ಳನ್ನು ಹಾಕಬೇಕು ||

ಮಂತ್ರ || ಸಕೃದಾಚ್ಛಿನ್ನಂ ಬರ್ಹಿರೂರ್ಣಾವೃದು ಸ್ಯೋನಂ ಪಿತೃಭ್ಯ ಸ್ತ್ವಾಽಭರಾಮ್ಯಹಂ | ಅಸ್ಮಿಂ ತ್ಸೀದಂತು ಮೇ ಪಿತರ ಸ್ಸೋಮ್ಯಾಃ ಪಿತಾಮಹಾಃ ಪ್ರಪಿತಾಮಹಾಶ್ಚಾನುಗೈಸ್ಸಹ || ಈ ಮಂತ್ರ ಹೇಳಿ ದರ್ಭಾಸನ ಹಾಕಿ ಎಳ್ಳುಗಳಿಂದ ಗಂಧಾದಿ ಸಕಲಾರಾಧನೈ ಸ್ವರ್ಚಿತಂ ಎಂದು ಪೂಜೆಮಾಡಿ (ಊರ್ಜಂ ವಹಂತೀಃ) ಇದರಿಂದ ತಿಲೋದಕವನ್ನು ಪಿತೃತೀರ್ಥದಿಂದ ಕೊಡಬೇಕು.

ಪಶ್ಚಿಮದರ್ಭಗಳಲ್ಲಿ (ಆಯಾತಮಾತುಃ ಪಿತರಃ ಸ್ಸೋಮ್ಯಾಂಗಂಭೀರೈಃ) ಎಂದು ಹೇಳಿ ಸಪತ್ನೀಕಾನ್ ಮಾತಾಮಹಮಾತುಃ ಪಿತಾಮಹ ಮಾತುಃ ಪ್ರಪಿತಾಮಹಾನ್ ಅವಾಹಯಾಮಿ ಎಂದು ಅವಾಹನ || ಪೂರ್ವದಂತೆ ಆಸನ–ಅರ್ಚನ–ತಿಲೋದಕ ಸಹ ಕೊಡಬೇಕು.

ಆಮೇಲೆ ಪೂರ್ವ ದರ್ಭಗಳಲ್ಲಿ ಆ ವಾಹನ ಮಾಡಿರುವ ಪಿತೃವರ್ಗಕ್ಕೆ ಮಂತ್ರಗಳನ್ನು ಹೇಳಿ ತರ್ಪಣ ಮಾಡಬೇಕು. ಮಾತೃ ವರ್ಗಕ್ಕೆ ಮಂತ್ರ ಹೇಳದೆ ತರ್ಪಣ ಮಾಡಬೇಕು. ಹ್ಯಾಗೆಂದರೆ ತರ್ಪಣ ಮಂತ್ರಗಳನ್ನು ಬರೆದು ತೋರಿಸುತ್ತೇವೆ ||

ಮಂತ್ರ|| ಉದೀರತಾಮವರ ಉತ್ಪರಾಸ ಉನ್ಮಧ್ಯಮಾಃ ಪಿತರಸ್ಸೋಮ್ಯಾಸಃ | ಅಸುಂ ಯಈಯುರವೃಕಾ ಋತಜ್ಞಾಸ್ತೇನೋಽವಂತು ಪಿತರೋಹವೇಷು || ಅಮುಕ ಗೋತ್ರಾನ್–ಅಮುಕ ಶರ್ಮಣಃ–ವಸುರೂಪಾನ್ ಪಿತೄನ್ (ಪಿತೃತೀರ್ಥದಿಂದ ತಿಲೋದಕವನ್ನು) ಸ್ವಧಾನಮ ಸ್ತರ್ಪಯಾಮಿ ತರ್ಪಯಾಮಿ ತರ್ಪಯಾಮಿ || ಈ ತರ್ಪಣಗಳಲ್ಲಿ ಎಂಟು ಅಥವಾ ಏಳು ಎಳ್ಳಿಗೆ ಕಮ್ಮಿ ಇರಬಾರದು ||

ಮಂತ್ರ|| ಅಂಗಿರಸೋನಃ ಪಿತರೋನವಗ್ವಾ ಅಥರ್ವಾಣೋ ಭೃಗವ

ಸ್ತ್ಸೋಮ್ಯಾಸಃ । ತೇಷಾಂ ವಯಗ್ಂ ಸುಮತೌ ಯಜ್ಞಿಯಾ ನಾಮಪಿಭದ್ರೇ ಸೌಮನಸೇಸ್ಯಾಮ ॥ ಹಿಂದಿನಂತೆ ಗೋತ್ರಾದಿಗಳನ್ನು ಹೇಳಿ ತರ್ಪಣಮಾಡಬೇಕು॥

ಮಂತ್ರ॥ ಆಯಂತುನಃ ಪಿತರಸ್ಸೋಮ್ಯಾ ಸೋಗ್ನಿಷ್ವಾತ್ತಾಃ ಪಥಿಭಿರ್ದೇವಯಾನೈಃ । ಅಸ್ಮಿನ್ ಯಜ್ಞೇಸ್ವಧಯಾಮದಂ ತ್ವಧಿಬ್ರುವಂತುತೇ ಅವಂತ್ವಸ್ಮಾನ್ ॥ ಹಿಂದಿನಂತೆ ತರ್ಪಣಮಾಡಬೇಕು ॥

ಮುಂದಿನ ಮೂರು ಮಂತ್ರಗಳಿಂದ ಪಿತಾಮಹರಿಗೆ ತರ್ಪಣಮಾಡಬೇಕು.

ಮಂತ್ರ॥ ಊರ್ಜಂ ವಹಂತೀ ರಮೃತಂ ಘೃತಂಪಯಃ ಕೀಲಾಲಂ ಪರಿಸ್ರುತಂ । ಸ್ವಧಾಸ್ಥ ತರ್ಪಯತಮೇ ಪಿತೄನ್ ॥ ಗೊತ್ರಾನ್–ಶರ್ಮಣಃ ರುದ್ರರೂಪಾನ್ ಪಿತಾಮಹಾನ್ ಸ್ವಧಾನಮ ಸ್ತರ್ಪಯಾಮಿ–ತರ್ಪಯಾಮಿ ತರ್ಪಯಾಮಿ ॥

ಮಂತ್ರ ॥ ಪಿತೃಭ್ಯಸ್ಸ್ವಧಾವಿಭ್ಯಸ್ಸ್ವಧಾನಮಃ । ಪಿತಾಮಹೇಭ್ಯ ಸ್ಸ್ವಧಾವಿಭ್ಯಸ್ಸ್ವಧಾನಮಃ । ಪ್ರಪಿತಾಮಹೇಭ್ಯಸ್ಸ್ವಧಾವಿಭ್ಯಸ್ಸ್ವಧಾ ನಮಃ ॥

ಮುಂದಕ್ಕೆ ಮಂತ್ರ ಬಂದರೆ (ಪಿತರಶ್ಶುಂಧಧ್ವಂ) ವರಿಗೆ ಹೇಳಬಹುದು । ಹಿಂದಿನಂತೆ ತರ್ಪಣ ॥

ಮಂತ್ರ॥ ಯೇ ಚೇ ಹಪಿತರೋ ಯೇ ಚನೇಹಯಾಗ್ಂಶ್ಚ ವಿದ್ಮ

ಯಾಗ್ಂ ಉಚನಪ್ರವಿದ್ಮ । ಅಗ್ನೇ ತಾನ್ ವೇತ್ಥಯ ದಿತೇ ಜಾತವೇದಸ್ತ್ವಯಾ

ಪ್ರತ್ತಗ್ಂ ಸ್ವಧಯಾಮದಂತು ॥ ಹಿಂದಿನಂತೆ ತರ್ಪಣ ॥

ಮುಂದಿನ ಮೂರು ಮಂತ್ರಗಳಿಂದ ಪ್ರಪಿತಾಮಹರಿಗೆ ತರ್ಪಣ ॥

ಮಂತ್ರ–ಮಧುವಾತಾ ಋತಾಯತೇ ಮಧುಕ್ಷರನ್ತಿಸಿಂಧವಃ । ಮಾಧ್ವೀರ್ನ

ಸ್ಸಂತ್ವೋಷಧೀಃ ॥ ಗೋತ್ರಾ೯–ಶರ್ಮಣಃ–ಆದಿತ್ಯರೂಪಾ೯–ಪ್ರಪಿತಾಮಹಾ೯–ಸ್ವಧಾನಮಸ್ತರ್ಪಯಾಮಿ–ತರ್ಪಯಾಮಿ–ತರ್ಪಯಾಮಿ ॥

ಮಧುನಕ್ತ ಮುತೋಷಸಿ ಮಧುಮತ್ಪಾರ್ಥಿವಗ್ಂ ರಜಃ । ಮಧುದ್ಯೌ

ರಸ್ತು ನಃ ಪಿತಾ ॥ ಹಿಂದಿನಂತೆಯೇ ತರ್ಪಣ ॥

ಮಧುಮಾನ್ನೋ ವನಸ್ಪತಿರ್ಮಧುಮಾಗ್ಂ ಅಸ್ತು ಸೂರ್ಯಃ ।

ಮಾಧ್ವೀರ್ಗಾವೋ ಭವನ್ತುನಃ ॥ ಹಿಂದಿನಂತೇ ತರ್ಪಣ ॥

ಮಾತೃವರ್ಗಕ್ಕೆ ತರ್ಪಣ=ಅಮುಕ ಗೋತ್ರಾಃ–ಅಮುಕನಾಮ್ನೀಃ–ವಸುರೂಪಾಃ–ಮಾತೄಃ–ಸ್ವಧಾನಮಸ್ತರ್ಪಯಾಮಿ ॥ ಇದರಂತೇ ಗೋತ್ರ ಹೇಳಿ–ರುದ್ರರೂಪಾಃ ಪಿತಾಮಹೀಃ–ಸ್ವಧಾ....ಸ್ತರ್ಪಯಾಮಿ ತಿರಗಿ ನಾಮ ಗೋತ್ರಹೇಳಿ–ಆದಿತ್ಯ ರೂಪಾಃ–ಪ್ರಪಿತಾಮಹೀಃ–ಸ್ವಧಾ....ಯಾಮಿ ॥ ಸ್ತ್ರೀ ವರ್ಗಕ್ಕೆ ಹೀಗೇನೇ ಮಂತ್ರ ಹೇಳದೇ ಒಂದೊಂದುಸಲ ತರ್ಪಣಮಾಡಿದರೆ ಸಾಕು॥ ಜ್ಞಾತೀಃ ಸ್ವಧಾನಮಸ್ತರ್ಪಯಾಮಿ ಮೂರುಸಲ॥ ಜ್ಞಾತಿ ಪತ್ನೀಃ ಸ್ವಧಾನಮಸ್ತರ್ಪಯಾಮಿ–ಒಂದು ಸಲ ತರ್ಪಣ ॥

ಪಿತೃವರ್ಗದಂತೆ ಮಂತ್ರಗಳನ್ನು ಹೇಳಿ ಮಾತಾಮಹ ವರ್ಗಕ್ಕೆ ತರ್ಪಣ ಅಂದರೆ ಆವರ ಗೋತ್ರನಾಮಗಳನ್ನು ಹೇಳಿ–ವಸುರೂಪಾ೯–ಮಾತಾಮಹಾ೯ ಸ್ವಧಾನಮಸ್ತರ್ಪಯಾಮಿ ಮೂರು ಸಲ ॥ ಎರಡನೇಯವರಿಗೆ–ರುದ್ರರೂಪಾ೯–ಮಾತುಃ ಪಿತಾಮಹಾ೯ । ಮೂರನೇಯವರಿಗೆ–ಆದಿತ್ಯರೂಪಾ೯–ಮಾತುಃ ಪ್ರಪಿತಾಮಹಾ೯ ॥

ಮಾತಾಮಹೀ ವರ್ಗಕ್ಕೆ ಮಾತೃ ವರ್ಗದಂತೆ ಅವರವರ ನಾಮಗೋತ್ರ ಹೇಳಿ ಅಂದರೆ ವಸುರೂಪಾಃ-ಮಾತಾಮಹೀಃ। ರುದ್ರರೂಪಾಃ-ಮಾತುಃ ಪಿತಾಮಹೀಃ । ಆದಿತ್ಯರೂಪಾಃ-ಮಾತುಃ ಪ್ರಪಿತಾಮಹೀಃ-ಎಂದುಹೇಳಿ ಒಂದೊಂದು ಸಲ ತರ್ಪಣಮಾಡಬೇಕು ||

ಪಿತೃವಂಶ್ಯಾ ಮಾತೃವಂಶ್ಯಾಯೇಚಾನ್ಯೇ ಮತ್ತ ಉದಕಮರ್ಹನ್ತಿತಾನ್ ಸ್ವಧಾನ್ನಮಸ್ತರ್ಪಯಾಮಿ-ಎಂದು ಎರಡು ದರ್ಭೆಗಳಲ್ಲೂ ಮೂರು ಸಲ ತರ್ಪಣ ಮಾಡಿ "ಊರ್ಜಂವಹನ್ತೀಃ" ಹೇಳಿ ಅಂಜಲಿಯಿಂದ ನೀರನ್ನು ಮೂರು ಸಲ ಪ್ರದಕ್ಷಿಣಮಾಡಿ ತೃಪ್ಯತ ತೃಪ್ಯತ ತೃಪ್ಯತ ಎಂದು ಮೂರು ತರ್ಪಣಮಾಡಿ ನಿಂತು ಕೈಮುಕ್ಕೊಂಡು ದಕ್ಷಿಣ ಮುಖನಾಗಿ ತೃಪ್ಯಧ್ವಂ ಎಂದು ಮೂರುಸಲ ಹೇಳಿ "ನಮೋವಃ ಪಿತರಃ....ವಸಿಷ್ಠೋ ಭೂಯಾಸಂ" ಇದುವರಿಗೆ ಹೇಳಿ ಉಪಸ್ಥಾನಮಾಡಬೇಕು ||

ಉಪಸ್ಥಾನ ಮಂತ್ರಗಳು

ನಮೋವಃ ಪಿತರೋರಸಾಯ ನಮೋವಃ ಪಿತರಶ್ಶುಷ್ಮಾಯ ನಮೋವಃ ಪಿತರೋ ಜೀವಾಯ ನಮೋವಃ ಪಿತರಸ್ಸ್ವಧಾಯೈ ನಮೋವಃ ಪಿತರೋ ಮನ್ಯವೇ ನಮೋವಃ ಪಿತರೋ ಘೋರಾಯ ಪಿತರೋ ನಮೋವೋ ಯಏತಸ್ಮಿನ್ಲೋಕೇಸ್ಥ ಯುಷ್ಮಾಂಗ್‌ಂಸ್ತೇನು ಯೇಽಸ್ಮಿನ್ಲೋಕೇಮಾಂ ತೇನು ಯಏತಸ್ಮಿನ್ಲೋಕೇ ಸ್ಥಯೂಯಂ ತೇಷಾಂ ವಸಿಷ್ಠಾ ಭೂಯಾಸ್ತ ಯೇಽಸ್ಮಿನ್ಲೋಕೇಽಹಂ ತೇಷಾಂ ವಸಿಷ್ಠೋ ಭೂಯಾಸಮ್ || ಇದರಿಂದ ಉಪಸ್ಥಾನಮಾಡಿ-ದೇವತಾಭ್ಯಃ ಪಿತೃಭ್ಯಶ್ಚ-ಯಾನಿಕಾನಿಚ-ಹೇಳಿ ಪ್ರದಕ್ಷಿಣ ನಮಸ್ಕಾರಮಾಡಬಹುದು ||

"ಪರೇತಪಿತರಸ್ಸೋಮ್ಯಾ ಗಂಭೀರೈಃ" ಯಥಾಸ್ಥಾನಮಾಡಿ "ಯೇಷಾಂ ಪಿತಾನಚಭ್ರಾತಾ ನ ಬಂಧುರ್ನಚಗೋತ್ರಿಣಃ । ತೇತೃಪ್ತಿಮಖಿಲಾಂಯಾಂತು ಮಯಾತ್ಯಕ್ತೈಃ ಕುಶೈಸ್ತಿಲೈಃ" ॥ ಹೇಳಿ ತರ್ಪಣಮಾಡಿದ ದರ್ಭೆಗಳನ್ನು ಶುದ್ಧ ವಾದ ಬೇರೆ ಸ್ಥಳದಲ್ಲಿ ಹಾಕಬೇಕು ॥ ಉಪವೀತೀ ಆಚಮನಮಾಡಿ

"ಯೇಕೇಚಾಸ್ಮತ್ಕುಲೇಜಾತಾಃ ಅಪುತ್ರಾ ಗೋತ್ರಜಾಮೃತಾಃ । ತೇ ಗೃಹ್ಣನ್ತು ಮಯಾದತ್ತಂ ವಸ್ತ್ರನಿಷ್ಪೀಡನೋದಕಮ್" ॥ ಹೇಳಿ ಸ್ನಾನ ವಸ್ತ್ರ ವನ್ನು ನಾಲ್ಕು ಮಡಿಕೆಮಾಡಿ ನಿವೀತಿಯಿಂದ ತೀರದಲ್ಲಿ ಹಿಂಡಿ ಈ ವಸ್ತ್ರವನ್ನು ಎಡಗೈ ಹಿಂಭಾಗದಲ್ಲಿಟ್ಟು ಉಪವೀತನಾಗಿ ದ್ವಿರಾಚಮನಮಾಡಬೇಕು ॥

ಇದರಂತೇ ಮಾತಾಪಿತೃ ಶ್ರಾದ್ಧದ ಮಾರನೇ ಬೆಳಗ್ಗೆ ತಂದೆ ಶ್ರಾದ್ಧದಲ್ಲಿ ತಂದೆಗೆ ಮಾತ್ರ ಮಂತ್ರ ಹೇಳಿ ತರ್ಪಣಮಾಡಬೇಕು ॥

ತಾಯಿ ಶ್ರಾದ್ಧದಲ್ಲಿ ತಂದೇ ಇಲ್ಲದವರು ತಾಯಿ ವರ್ಗಕ್ಕೆ ಮಾತ್ರ ಮಂತ್ರ ಇಲ್ಲದೇನೆ ಒಂದೊಂದು ತರ್ಪಣಮಾಡಬೇಕು। ದರ್ಶದಲ್ಲಿ ಅನ್ನಶ್ರಾದ್ಧಮಾಡಿದರೆ ಆ ದಿನವೇ ಮುಂಚೇ ತರ್ಪಣಮಾಡಿ ಶ್ರಾದ್ಧಮಾಡಬೇಕು । ತೀರ್ಥಶ್ರಾದ್ಧ-ಹಿರಣ್ಯಶ್ರಾದ್ಧಗಳಲ್ಲಿ ಶ್ರಾದ್ಧಾನಂತರವೇ ತರ್ಪಣ । ಮಹಾಲಯದಲ್ಲಿ ಪರೇದ್ಯುಸ್ತರ್ಪಣಮಾಡಬೇಕು ॥ ಇತಿ ತರ್ಪಣವಿಧಿಃ ॥

ಆಂಧ್ರ ಸಂಪ್ರದಾಯದ ದರ್ಶಾದಿ ತರ್ಪಣಗಳಲ್ಲಿ ಮಂತ್ರ ಇಲ್ಲದೇ ಪವಿತ್ರ ಹಾಕಿಕೊಂಡು ಸಂಕಲ್ಪಮಾಡಿ ಪ್ರಾಚೀನಾವೀತೀ ಪಿತೃ ತೀರ್ಥದಿಂದ ಅಸ್ಮತ್ಪಿತರಂ -ಗೋತ್ರಂ-ಶರ್ಮಾಣಂ-ವಸುರೂಪಂ ಸ್ವಧಾನಮಸ್ತರ್ಪಯಾಮಿ ಎಂದು ಹೇಳಿ ಮೂರುಸಲ ತರ್ಪಣ-ಪಿತಾಮಹಾದಿಗಳಿಗೂ ಮಾತೃವರ್ಗಕ್ಕೂ ಮಾತಾಮಹ ಮತಾಮಹೀ ವರ್ಗಕ್ಕೂ ತಿಲತರ್ಪಣಮಾಡಬೇಕು । ಮಾತಾಪಿತೃಶ್ರಾದ್ಧಾಂಗ ತರ್ಪಣವೂ ಪಿತೃ ಶ್ರಾದ್ಧದಲ್ಲಿ ಪಿತೃಗಳಿಗೆ-ಮಾತೃ ಶ್ರಾದ್ಧದಲ್ಲಿ ಮಾತೃ ವರ್ಗಕ್ಕೆ ಮಾತ್ರ ಮಾಡಿ ಪವಿತ್ರ ಬಿಚ್ಚಿ ವಿಸರ್ಜನೆಮಾಡಿ ಆಚಮನಮಾಡಬೇಕು ॥ ಇಷ್ಟು ವಿಶೇಷ ॥